All that I had in me".

- Lavita Dsouza, *II B.COM B*

THAT TURN IN YOUR LIFE!

✍ **Madhushree H. K**
I B.COM B

- All of us do not have equal talent but all of us should have an equal opportunity to develop our talents.
- The dream is not what you see in sleep. Dream is the thing which does not let you sleep.
- If you fail, never give up because fail means "First attempt in learning". End is not the end, in fact END means "Efforts never die". If you get 'no' as answer remember 'no' means "Next opportunity". So let's be positive.
- Success is the problem, but failure is the formula. You cannot solve the problem without knowing the formula.
- Confidence and hard work is the best medicine to kill the diseases called failure. It will make you successful person.
- If you miss an opportunity, don't close your eyes with tears. Keep your vision clear, so that you will not miss the next one.

ON DADDY

Only a dad with a tired face,
Coming home from the daily race,
Plodding along in the daily strife
Bearing the whips and the scorns of life.
Toiling, striving from day to day
Facing whatever may come his way
With never a whimper of pain or hate,
For the safe of those who at home avail
Silent whenever the harsh condemn
And bearing it all for love of them
Papa, he gives his all,
To smooth the way, for his children small
Doing with courage stern and grin,
The deeds that his father didn't do for him,
This is the line that for him I pen:
Just a dad but the best of men.

✍ **Sampreetha**
I B.COM A

GROSS NATIONAL HAPPINESS [GNH]

An attempt to measure, through psychological and physiological means, a country's happiness, as a direct reference to GDP [Gross Domestic Product], coined in 1972 byBhutan's former King Jigme Singye Wangchuk. While measurement techniques vary, a widely used second generation GNH metric uses seven indicators:- economics, environmental, physical, mental, workplace, social and political wellness, gathered through a composite of qualitative research.

Dissatisfaction with GDP as a measure of an economy gave rise to the emergence of the concept of GNH in 1972. The King of Bhutan pointed out how GNH is more important than GDP. In 2011, the United Nation General Assembly passed a resolution entitled "Happiness towards a holistic approach to development". Member nations urged to follow the example of Bhutan and measure happiness and well-being by defined goals.

The World Happiness Report:

The UN has released the latest World Happiness Report in March 2018. The UN Sustainable Development Solutions Network ranked 156 countries by happiness level, based on factors such as income, freedom, trust, healthy life expectancy, social support and generosity. GNH is completely distinguishable from GDP. GNH as the goal of governance by emphasising harmony with nature.

The Four Pillars of GNH are

✍ **Rositta D'Souza**
II B.COM A

1. Sustainable, equitable and socio-economic development;
2. Environmental conservation;
3. Preservation and promotion of culture; and
4. Good governance.

If Finland is the world's happiest country, Burundi is at the bottom of the report. In the report, India is ranked at 133. However, Pakistan at 75, China at 86, Nepal at 101 and Bangladesh at 115.

The Finns believe that access to nature, safety, childcare, good school and free healthcare took them to the top rank. This is true of other top nations.

The report said that India was among the group of 10 countries to witness the biggest happiness decline. The main reason for this is corruption, unequal distribution of income and malnutrition etc.

To overcome from the problems of GNH, the measures are to be taken are to over poverty and corruption. The Delhi government introduced happiness curriculum in schools. Madhya Pradesh and Andhra Pradesh have set up happiness index departments.

My Nation

✍ **Fiona**
III BCOM B

War which had began
is over now
But mom there is a request
I must ask of you.

I have a friend, who has
no home you see
so mom I would like
to bring him home with me.

If someone comes home with you
I'm sure that he would stay
for a day or two.

Mom, I have to tell you something
please don't be alarmed.
My friend, you see in battle,
happens to lose one arm and a leg.

My son don't be afraid
to get him home
he could stay and visit
for even a week or two.

But mom, he's not just a friend
He's a brother too,
that is why I want him to live with us.

My son, it hurts me to say
but my answer must be no,
your father and I would have no time
for one who is cripple so.

Sometime later
She realized it was a dream
and her son was at the war place.

Some days later a letter came,
saying their son was dead,
and when they read the cause of death
"My nation" it said.

Three days later when the casket came
wrapped with the country flag,
they saw their son lying there
without an arm and a leg.

Present Mass Media, Fourth Pillar of Democracy

✍ **Shannon Pearl Cutinha**
II B.COM A

Today mass media is considered as the fourth pillar democracy. The four pillars of democracy are judiciary, executive, legislature and Mass Media.

To begin with what is media? MASS MEDIA is that source through which we get the information. The different types of Mass Media are Newspaper, Radio, TV, Internet etc. Today Mass Media is very important in our life. All the people, all around the world are dependent on mass media. As the fourth pillar of Democracy Mass Media makes possible for the other three pillars to work.

There is no doubt to say that Mass Media work has the bridge between Government and the people. Through radio we can hear the news of the world. In olden days there were no many Mass Media.

But today people are very busy. They don't have patience to hear or read the news. So the main media used is TV and Internet. Here you can see the visuals along with hearing of news.

Mass media also serves as the important tool to the rural people which gives them information about various events and programs. Most of them are familiar with the Internet. Today, from small children to older people also know to use it. With the help of Internet people from one country can talk to people from other country face to face. You can also get various ideas regrading different things. Everyone is dependent on media today; nobody can think of their life without media.

Most of the people do not start their morning without reading newspapers. TV is very useful for those who are not able to read.

Mass media has certain advantages:

- **Gives news in short period of time:**

  In earlier days letters were used to give the news and it needed almost 2 to 3 days to reach. So the way of communication was very slow. But today with the help of Mass Media all the news can reach to everyone in short period of time.

- **Latest news**:

  Most of the channels programmes and Internet broadcast live programme through which people can get the news immediately.

- **Helps to develop hidden talents**:

  Mass media also helps to develop the hidden talent through various programmes and events.

- **Development of children**:

  We all know children like to watch TV. There are certain channels and programmes like Animal Planet, Discovery, etc through which they can develop skills and knwoledge.

- **Entertains and Informs**:

  Mass media has lots of entertainment programmes and along with that they also show various informative shows to develop skills and knowledge.

- **Various cultures and rituals**:

  Today with the help of Mass Media people all over the world can know about various cultures and rituals of the people. They get information from it.

  Now with the help of Mass Media people are aware of various laws and legislations. They can raise voice against the crime. Mass media is like a mirror which showcases us the harsh reality of todays life and the world.

  Today Mass Media is the pillar i.e. main pillar of Democracy for the development of the country.



✍ **Priya R.P**
1st BBA

Our creative ideas are our assets
knowledge is our capital
friends are our general reserve
Our views are our liabilities
Heart is our current asset
Soul is our fixed asset
Brain is our fixed deposit
Thinking is our current account
Character & Morals are inventory
Value & behaviour are our goodwill
Our Birth is opening balance
Our Death is closing balance
Achievements is our dividend
Education is patents.

THE TOUGHEST JOB IN THE WORLD

✍ **Manisha. P**
I B.COM

"Okay dear", my mom said,
"Let's train you for the toughest job in the world."
"Whoa!" I said
And which was that, I wondered.
"You need a lot of patience,
And should work like a slave,
Behave according to your conscience, Be not naive."
"Umm, what are the working hours, mom?"
"No dear, it's not fixed".
"I'm serious, mom".
"Same here, darling." Mom said
"Cool, dear, you need to work day or night or … day and night".
"Mom! Are you kidding me?"
"No, attentive you better be".
"I'm all ears".
"Be ready to act.
At the drop of a hat".
"Great! Cheers!".
"You may have to clear the same jobs frightfully many times,
Attend to many a sob,
And be not asinine".

"Mom, don't you think you're making me bit off
More than I can chew?
This job'll cost me an arm and a leg
I'm not game for it, whew!"
Listen to the most striking features
You won't be paid any salary
You need to have a penny for other's thoughts
Plus, …. keep everyone's stomach full

"Mom, you're definitely imagining things such a job doesn't exist"
"But it does, dear,
I assure you".

"Forget about preparing for it,
Which job is it, mom?"
"Are you sure, you've no clue about it ?"
"No, mom, definitely no".
"Okay, here goes the right answer,
Being …. a …. MOTHER"
I was just dumbstruck.
All I could manage was-

"I LOVE YOU MOM!"

"ನೆರೆಹಾವಳಿ ನೈಸರ್ಗಿಕವೋ ಅಥವಾ ಮಾನವ ನಿರ್ಮಿತವೋ"

✍ **ಸಹನಾ ಎಸ್.**
ತೃತೀಯ ಬಿ.ಕಾಂ. 'ಎ'

'ಪ್ರಕೃತಿ ವಿಕೋಪ' – ಈ ಶಬ್ದವನ್ನು ಕೇಳಿದ ಕ್ಷಣ ನಮ್ಮಲ್ಲಿ ಹುಟ್ಟುವುದು ಭಯ. ಕೆಲವು ದೇಶಗಳಲ್ಲಿ ಆಗಾಗ ಈ ದುರಂತ ಸಂಭವಿಸುತ್ತಲೇ ಇರುತ್ತದೆ. ಉದಾಹರಣೆಗೆ, ಜಪಾನ್ ದೇಶದಲ್ಲಿ ಭೂಕಂಪ ಸಾಮಾನ್ಯ, ಅಲ್ಲಿಯ ಜನರು ಅದಕ್ಕೆ ಹೊಂದುವಂತೆ ತಮ್ಮ ಮನೆಗಳನ್ನು ಹಾಗೂ ಜೀವನ ಶೈಲಿಯನ್ನು ಹೊಂದಿದ್ದಾರೆ. ಕೆಲವು ದೇಶಗಳಲ್ಲಿ ಜ್ವಾಲಾಮುಖಿ, ನೆರೆ, ಪ್ರವಾಹ ಇತ್ಯಾದಿಗಳು ತುಂಬಾ ಜೀವಹಾನಿಗಳನ್ನೂ ಮಾಡುತ್ತದೆ. ಅತಿವೃಷ್ಟಿ, ಅನಾವೃಷ್ಟಿಗಳೂ ಒಂದು ದೊಡ್ಡ ಸಮಸ್ಯೆಯೇ ಹೌದು.

ಹಾಗಾದರೆ ಈ ಎಲ್ಲಾ ಪ್ರಕೃತಿ ವಿಕೋಪಗಳಿಗೆ ಕಾರಣರು ಯಾರು?

ಕೆಲವು ನೈಸರ್ಗಿಕವಾಗಿ ಸಂಭವಿಸಿದರೆ ಇನ್ನೂ ಹಲವು ಮಾನವ ನಿರ್ಮಿತವಾಗಿರುತ್ತದೆ. ಹಲವು ತಜ್ಞರ ಹಾಗೂ ವಿಜ್ಞಾನಿಗಳ ಪ್ರಕಾರ ಪ್ರಕೃತಿ ವಿಕೋಪಕ್ಕೆ ಮಾನವನ ದುರಾಸೆಯೇ ಮುಖ್ಯ ಕಾರಣ. ಮಾನವನು ಈಗ ಮುಂದುವರಿದಿದ್ದಾನೆ, ಅವನು ಅಭಿವೃದ್ಧಿಯ ಹೆಸರಿನಲ್ಲಿ ಮಾಡುತ್ತಿರುವ ಕೆಲಸಗಳೇ ಇಂದು ಶಾಪವಾಗಿ ಪರಿಣಮಿಸಿದೆ.

"ಸಮುದ್ರವಸನೇ ದೇವಿ,
ಪರ್ವತಸ್ತನ ಮಂಡಿತೇ।

ವಿಷ್ಣು ಪತ್ನಿ ನಮಸ್ತುಭ್ಯಂ,
ಪಾದ ಸ್ಪರ್ಶಂ ಕ್ಷಮಸ್ವಮೇ॥

ಅರ್ಥ: ಸಮುದ್ರವನ್ನೇ ಬಟ್ಟೆಯಾಗಿ, ಪರ್ವತವೇ ಸ್ತನದ ರೂಪದಲ್ಲಿ ಹೊಂದಿರುವ ವಿಷ್ಣುವಿನ ಪತ್ನಿಯೇ, ನನ್ನ ಕಾಲುಗಳಿಂದ ನಿನ್ನನ್ನು ಸ್ಪರ್ಶಿಸುವುದಕ್ಕೆ ನನ್ನನ್ನು ಕ್ಷಮಿಸು.

ನಮ್ಮ ಹಿರಿಯರು ಭೂಮಿತಾಯಿಯನ್ನು ಸ್ವಂತ ತಾಯಿಯ ರೂಪದಲ್ಲಿ ಕಾಣುತ್ತಿದ್ದರು. ಭೂಮಿತಾಯಿಯನ್ನು ತಮ್ಮ ಕಾಲುಗಳಿಂದ ಸ್ಪರ್ಶಿಸುವುದೇ ಒಂದು ಪಾಪವೆಂದು ಪರಿಗಣಿಸುತ್ತಿದ್ದರು. ಅವರು ಪ್ರಕೃತಿಯ ಜೊತೆಗೆ ಸಹಬಾಳ್ವೆಯಿಂದ ಜೀವನವನ್ನು ನಡೆಸುತ್ತಿದ್ದರು. ಆದರೆ ದಿನಕಳೆದ ಹಾಗೆ ಮಾನವನು ಸ್ವಾರ್ಥಿ, ದುರಾಚಾರಿಯಾಗಿ ಭೂಮಿತಾಯಿಯ ಮೇಲೆ ಅತ್ಯಾಚಾರವನ್ನು ಎಸಗಲು ಪ್ರಾರಂಭಿಸುತ್ತಾನೆ. ಮರ–ಗಿಡಗಳನ್ನು ಕಡಿದು, ದೊಡ್ಡ ದೊಡ್ಡ ಕಟ್ಟಡಗಳನ್ನು, ಕಾರ್ಖಾನೆಗಳನ್ನು ತೆರೆಯಲಾರಂಭಿಸುತ್ತಾನೆ. ಎಲ್ಲಾ ತ್ಯಾಜಗಳನ್ನು ನದಿ, ಕೆರೆಗಳಲ್ಲಿ ಹರಿದು ಬಿಡುತ್ತಾನೆ ಮತ್ತು ಕ್ರಮೇಣ ನದಿ ಕೆರೆಗಳೂ ಕಲುಷಿತವಾಗುತ್ತವೆ. ಇತ್ತೀಚಿನ ಸಂಶೋಧನೆಯ ಪ್ರಕಾರ ಸಮುದ್ರ – ಆಕಾಶ – ಭೂಮಿ ನಡುವಿನ ಉಷ್ಣಾಂಶವೂ ವ್ಯತ್ಯಯವಾಗಿದೆ. ಇದರಿಂದಾಗಿಯೇ ಮಳೆಗಾಲದಲ್ಲಿ ಚಳಿ, ಚಳಿಗಾಲದಲ್ಲಿ ಬೇಸಗೆ ಹಾಗೂ ದಿಡೀರ್ ಮಳೆಯಾಗುತ್ತಿರುವುದು ಮಳೆ ಮೋಡ ರಚನೆಯಲ್ಲೂ ಸಾಕಷ್ಟು ವ್ಯತ್ಯಯಗಳನ್ನು ನಾವು ಇಂದು ಕಾಣಬಹುದು.

ಇನ್ನು ನೆರೆಹಾಳಿಯ ಬಗ್ಗೆ ಹೇಳವುದಾದರೆ, ಹಿಂದಿನ ಕಾಲದಲ್ಲಿ ಮಳೆಯ ನೀರು ಹಾದು ಹೋಗಲು ಸರಿಯಾದ

ವ್ಯವಸ್ಥೆಗಳಿದ್ದವು ಮಳೆಯ ನೀರನ್ನು ಭೂಮಿಯ ಅಡಿಗೆ ಹೀರಿಕೊಳ್ಳಲು ಸಾಕಷ್ಟು ಗಿಡ ಮರಗಳು ಇದ್ದವು. ಅವುಗಳು ಬೇರಿನಿಂದ ನೀರನ್ನು ಹಿಡಿದು ಇಟ್ಟುಕೊಳ್ಳುತ್ತಿದ್ದವು. ಆದರೆ ಈಗ ಅಂತ ಗಿಡ–ಮರಗಳನ್ನು ಕಡಿದು, ಕಾಲುದಾರಿಗಳನ್ನು ಕೆಡವಿ ಮಾನವ ತನ್ನ ಸ್ವಂತಕ್ಕೆ ಬಳಸುತ್ತಿದ್ದಾನೆ. ಗುಡ್ಡ ಪ್ರದೇಶಗಳನ್ನು ಸಮತಟ್ಟು ಮಾಡಿ ಅದರಲ್ಲಿ ಕಟ್ಟಡಗಳನ್ನು ನಿರ್ಮಿಸತ್ತಿದ್ದಾನೆ. ಆದ್ದರಿಂದ ಮಳೆ ನೀರಿಗೆ ಸರಿಯಾಗಿ ಹರಿಯಲು ಜಾಗವಿಲ್ಲದಂತಾಗಿದೆ. ಆದ ಕಾರಣ ಇತ್ತೀಚೆಗೆ ನೆರೆಯ ಸಮಸ್ಯೆ ಉಲ್ಬಣಗೊಂಡಿದೆ. ಅಣೆಕಟ್ಟಿನ ನೀರು ಒಮ್ಮೆಲೆ ಅವೈಜ್ಞಾನಿಕವಾಗಿ ನಿರ್ಮಿಸಿದ ಜನ ವಸತಿ ಪ್ರದೇಶಗಳಿಗೆ ಬಂದಾಗ ಕೂಡ ನೆರೆಯ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಕಳೆದ ತಿಂಗಳು ಕೇರಳ ಹಾಗೂ ಕೊಡಗಿನಲ್ಲಿ ಉಂಟಾದ ಪರಿಸ್ಥಿತಿಯನ್ನು ಅವಲೋಕಿಸಿದರೆ ಮಾನವನೇ ಆ ನೆರೆ–ಪ್ರವಾಹದ ಪ್ರಮುಖ ಕಾರಣಕರ್ತನಂತೆ ಕಾಣುತ್ತಾನೆ. ಪ್ರೊ. ಮಾಧವ ಗಾಡ್ಗೀಳ್‌ರವರ ಪ್ರಕಾರ ಪಶ್ಚಿಮ ಘಟ್ಟ ಅತ್ಯಂತ ಸೂಕ್ಷ್ಮ ಹಾಗೂ ದಕ್ಷಿಣ ಭಾರತದ ಜೀವಸೆಲೆಯಾಗಿದೆ. ಪಶ್ಚಿಮ ಘಟ್ಟವನ್ನು ಸಂರಕ್ಷಿಸಿ ಅದನ್ನು ನಾಶದಿಂದ ಪಾರು ಮಾಡದಿದ್ದರೆ, ಒಂದು ದೊಡ್ಡ ಅನಾಹುತವೇ ಸಂಭವಿಸಬಹುದು. ಅದೂ ಅಲ್ಲದೆ ಪೂರ್ವದ ಹಿಮಾಲಯ ಹಾಗೂ ಪಶ್ಚಿಮದ ಘಟ್ಟವು ಇಡೀ ವಿಶ್ವದ ಸಮತೋಲನವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ವಿಶ್ವಸಂಸ್ಥೆಯು 2012ರಲ್ಲಿ ಪಶ್ಚಿಮ ಘಟ್ಟವನ್ನು 12 ಸೂಕ್ಷ್ಮ ಪ್ರದೇಶಗಳಲ್ಲಿ ಒಂದು ಎಂದು ಘೋಷಿಸಿದೆ ಆದರೆ ಇಂದು ಮಾನವನ ಕುಕರ್ಮದಿಂದ ಪಶ್ಚಿಮ ಘಟ್ಟವು ತನ್ನ ನಿಜವಾದ ಕಳೆಯನ್ನು ಕಳೆದುಕೊಂಡಿದೆ.

ಇದಕ್ಕೆ ಒಳ್ಳೆಯ ಉದಾಹರಣೆಯೆಂದರೆ ಕೊಡಗಿನ ನೆರೆ, ಕೊಡಗಿನಲ್ಲಿ ಬೆಟ್ಟಗುಡ್ಡಗಳನ್ನು ಸಮತಟ್ಟು ಮಾಡಿ ಹೆಚ್ಚಿನವರು ಕಾಫಿ ಬೆಳೆಯನ್ನು ಬೆಳಸ ತೊಡಗಿದರು. ಮರ–ಗಿಡಗಳು ನಾಶವಾಗ ತೊಡಗಿದವು. ಹೊಲ–ಗದ್ದೆಯನ್ನು ಪ್ರವಾಸ ತಾಣದ ಪ್ರಮುಖ ಆಕರ್ಷಣೆಯನ್ನಾಗಿ ಮಾಡಲು ರೆಸಾರ್ಟ್ ಮತ್ತು ಹೊಟೇಲ್‌ಗಳನ್ನಾಗಿ ಪರಿವರ್ತಿಸಲಾಯಿತು. ಬೆಟ್ಟಗುಡ್ಡಗಳಲ್ಲಿ ಮರಗಳ ಜಾಗದಲ್ಲಿ ಮನೆಗಳು ಹುಟ್ಟಿಕೊಂಡವು. ಯಾವಾಗ ಧಾರಾಕಾರ ಮಳೆಸುರಿಯಲಾರಂಭಿಸತೋ ಆಗ ಎಲ್ಲಾ ಕಟ್ಟಡ ಹಾಗೂ ಮನೆಗಳು ಬೆಟ್ಟದೊಂದಿಗೆ ನೀರಿನಲ್ಲಿ ನೀರಾಗಿ ಬಿಟ್ಟವು. ಹಾರಂಗಿ ಅಣೆಕಟ್ಟಿನ ಹಿನ್ನೀರು ಸಹ ಇದಕ್ಕೆ ಒಂದು ಮಾರಕವಾಗಿ ಪರಿಣಮಿಸಿತು.

ಪಶ್ಚಿಮ ಘಟ್ಟವನ್ನು ಸಂರಕ್ಷಿಸದಿದ್ದರೆ ಎಲ್ಲರ ಅಂತ್ಯ ಖಚಿತ ಆದರೆ ಪಶ್ಚಿಮ ಘಟ್ಟದ ದೊಡ್ಡ ವಿಲನ್ ಆಗಿರುವವರು ರಾಜಕಾರಣಿಗಳು. ಅವರು ತಮ್ಮ ವೋಟ್‌ಗಳಿಗಾಗಿ ಹೊಸ ಹೊಸ ಯೋಜನೆಗಳನ್ನು ಬೇಕಾಬಿಟ್ಟಿ ಕೈಗೆತ್ತಿಕೊಳ್ಳುವುದು. ಸರಿಯಾಗಿ ವೈಜ್ಞಾನಿಕವಾಗಿ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುವ ಬದಲು, ರಾಜ್ಯ ಹಾಗು ಕೇಂದ್ರ ಸರಕಾರಗಳು ಕಿತ್ತಾಡುತ್ತಿವೆ. ಪಶ್ಚಿಮ ಘಟ್ಟದಲ್ಲಿ ಜನ ವಸತಿಯನ್ನು ಆದಷ್ಟು ಕಡಿಮೆ ಮಾಡಬೇಕೆಂದು ಅನೇಕ ವಿಜ್ಞಾನಿಗಳು, ತಜ್ಞರು ಹೇಳಿದರೂ, ಅದನ್ನು ಯಾರು ಕೇಳುತ್ತಿಲ್ಲ.

ಹಾಗಾಗಿ, ಇತ್ತೀಚಿಗೆ ಸಂಭವಿಸುತ್ತಿರುವ ಅನೇಕ ನೆರೆಹಾವಳಿಗಳಿಗೆ ಮಾನವನೇ ಪ್ರಮುಖ ಕಾರಣ ಎಂದರೆ ತಪ್ಪಾಗಲಾರದು. ಮಾನವನು ತನ್ನ ದುರಾಸೆಯನ್ನು, ಸ್ವಾರ್ಥವನ್ನು ಬಿಟ್ಟು ಎಲ್ಲರ ಒಳಿತಿಗಾಗಿ ಯಾವಾಗ ಪರಿಸರದ ಕಡೆ ಗಮನವನ್ನು ಕೊಡಲಾರಂಭಿಸುತ್ತಾನೋ ಆವಾಗ ಎಲ್ಲಾ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಆದಕಾರಣ, ನಾವೆಲ್ಲರೂ ಒಂದಾಗಿ, ನಮ್ಮ ತಾಯಿಯಾದ ಪರಿಸರವನ್ನು ಚೆನ್ನಾಗಿ ನೋಡಿಕೊಳ್ಳುವಲ್ಲಿ ಒಂದು ಹೆಜ್ಜೆ ಮುಂದಿಡಬೇಕು. ಆವಾಗ ಎಲ್ಲಾ ಸಮಸ್ಯೆಗೆ ಪರಿಹಾರ ಸಿಗುತ್ತದೆ. ನಮ್ಮ ಮುಂದಿನ ಪೀಳಿಗೆಗೆ ಭೂಮಿಯನ್ನು ನರಕದ ರೂಪದಲ್ಲಿ ಬಿಟ್ಟು ಕೊಡುವ ಬದಲು, ಭೂಮಿಯನ್ನು ಸ್ವರ್ಗವಾಗಿ ಪರಿವರ್ತಿಸಲು ಇಂದಿನಿಂದಲೇ ಶ್ರಮಿಸಬೇಕು. ಜಲಸಂಪನ್ಮೂಲಗಳನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಸಂರಕ್ಷಿಸಬೇಕು. ಮಳೆ ನೀರಿನ ಹರಿಯುವಿಕೆಗೆ ಸರಿಯಾಗಿ ಯೋಜನೆಗಳನ್ನು ರೂಪಿಸಬೇಕು.

ನಾವೆಲ್ಲರೂ ಒಂದಾಗಿ ಭೂಮಿತಾಯಿಯನ್ನು ಸಂರಕ್ಷಿಸೋಣ. ಒಳ್ಳೆಯ ನಾಳೆಯನ್ನು ಕಟ್ಟೋಣ. ನಮ್ಮ ಕರ್ತವ್ಯವನ್ನು ಸರಿಯಾಗಿ ದುರಾಸೆಗೆ ಒಳಗಾಗದೆ ನಿರ್ವಹಿಸೋಣ.

ಮಾಧ್ಯಮದಿಂದ ನಮ್ಮ ಜೀವನದ ಪ್ರಗತಿ ಮತ್ತು ನಾಶ

✍ **ಪ್ರೆಸಿಲ್ಲಾ ಡಿ'ಸೋಜ**
ಪ್ರಥಮ ಬಿ.ಕಾಂ

ನಮ್ಮ ಈ ಸಮಾಜದಲ್ಲಿ ಹಿಂದಿನ ಕಾಲದಿಂದ ಈಗಿನ ವರೆಗೂ ಹಲವು ತರಹದ ಪ್ರಗತಿಗಳು ಉಂಟಾಗಿವೆ. ಈ ಎಲ್ಲಾ ಪ್ರಗತಿಗಳು ನಮ್ಮ ಒಳಿತಿಗಾಗಿ ಆಗಿವೆ. ಇದರಿಂದ ಉಂಟಾದ ಒಳಿತುಗಳು ಅಪಾರ. ಹಾಗೆಯೇ ಕೆಡುಕುಗಳು ಕೂಡ. ಈ ಎಲ್ಲಾ ಪ್ರಗತಿಗಳ ಪಟ್ಟಿಯಲ್ಲಿ ಮಾಧ್ಯಮವು ಸಹಾ ಒಂದಾಗಿದೆ.

ಪುರಾತನ ಕಾಲದಲ್ಲಿ ಮನುಷ್ಯ ಕುಟುಂಬದವರನ್ನು ಅಥವಾ ಸಂಬಂಧಿಕರನ್ನು ಅಥವಾ ಮಿತ್ರರನ್ನು ಸಂಪರ್ಕಿಸಬೇಕಿದ್ದರೆ ದೂರದ ಪಯಣ ಮಾಡಿ ಅವರಲ್ಲಿ ಮುಖಾಮುಖಿ ನಗುವಿನೊಂದಿಗೆ ಸಂಪರ್ಕ ಮಾಡಬೇಕಿತ್ತು. ಆದರೆ ಈಗ ಪ್ರಪಂಚ ಬದಲಾದಾಗ ಇದು ಕೂಡ ಬದಲಾಗಿದೆ. ಮಾಧ್ಯಮದ ಅಸ್ತಿತ್ವದಿಂದಾಗಿ ಈ ಎಲ್ಲಾ ಕೆಲಸಗಳು ಸುಲಭವಾಗಿ ಹೋಗಿವೆ.

ಇದರಿಂದಾಗಿ ನನ್ನ ಜೀವನದ ಪ್ರಗತಿಯು ಬಹಳ ಸರಳವಾಗಿ ಸಾಗುತ್ತಿದೆ. ನನ್ನ ಎಲ್ಲಾ ಕೆಲಸ ಕಾರ್ಯಗಳಿಗೆ ಮಾಧ್ಯಮದ ಉಪಯೋಗವು ಅನಿವಾರ್ಯವಾಗಿದೆ. ನನ್ನ ಕಲಿಕೆಯಲ್ಲಾಗಿರಬಹುದು ಅಥವಾ ನನ್ನ ಹಾಗೂ ನನ್ನ ಸಂಬಂದಿಕರ, ಸ್ನೇಹಿತರ ಸಂಬಂಧ ಗಟ್ಟಿ ಮಾಡುವುದರಲ್ಲಿ ಅಥವಾ ಜೀವನದ ಯಾವುದೇ ಮಹತ್ವಪೂರ್ಣ ವಿಷಯದಲ್ಲಿ ಮಾಧ್ಯಮದಿಂದಾಗಿ ನನಗೆ ಜಗತ್ತಿನಲ್ಲಿ ಆಗುವ ಪ್ರತೀ ಆಗುಹೋಗುಗಳ ಬಗ್ಗೆ ಮಾಹಿತಿ ದೊರಕುತ್ತದೆ. ನನ್ನದೇ ಊರಿನಲ್ಲಿ ಅಥವಾ ನನ್ನದೇ ರಾಷ್ಟ್ರದಲ್ಲಿ ಅಥವಾ ಇತರ ರಾಷ್ಟ್ರಗಳಲ್ಲಿ ಯಾವುದೇ ಪರಿಶ್ರಮವಿಲ್ಲದೆ ತಕ್ಷಣ ಎಲ್ಲಾ ಮಾಹಿತಿಗಳು ತಿಳಿಯುತ್ತವೆ. ನನಗೆ ಕಲಿಯುವಾಗ ಬೇಗನೇ ಅರ್ಥಮಾಡಿ ಕಲಿಯಲು ಮಾಧ್ಯಮವು ಸಹಾಯ ಮಾಡುತ್ತದೆ. ಏನಾದರೂ ನನಗೆ ಕಾಲೇಜಿನಲ್ಲಿ ಅರ್ಥವಾಗದಿದ್ದರೆ ಮನೆಗೆ ಬಂದು ಇಂಟರ್‌ನೆಟ್ ಮುಖಾಂತರ ಅದು ನನಗೆ ಅರ್ಥ ಮಾಡಿಕೊಳ್ಳಬಹುದಾಗಿದೆ. ಈ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿಯಲು ಅವಕಾಶ ದೊರೆಯುತ್ತದೆ. ಹಾಗೆಯೇ ನನ್ನಲ್ಲಿದ್ದ ತಿಳುವಳಿಕೆಯನ್ನು ಬೇರೆಯವರಲ್ಲಿ ಹಂಚಿಕೊಳ್ಳಬಹುದು.

ಒಂದೇ ಸಮಯದಲ್ಲಿ ಹಲವಾರು ಜನರೊಂದಿಗೆ ಸಂಪರ್ಕ ಮಾಡುವ ಅವಕಾಶ ಮಾಧ್ಯಮವು ಮಾಡಿಕೊಟ್ಟಿದೆ. ಹೊರದೇಶದಲ್ಲಿರುವ ನನ್ನ ಬಂಧುಮಿತ್ರರೊಡನೆ ನನಗೆ ವೀಡಿಯೋ ಕಾಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ನನಗೆ ಮನೋರಂಜನೆಗಾಗಿ ಮಾಧ್ಯಮವು ಸಹಾಯ ಮಾಡುತ್ತದೆ. ಹಾಡು, ವೀಡಿಯೋ, ಗೇಮ್ಸ್ ಇತ್ಯಾದಿ.

ಮಾಧ್ಯಮದಿಂದಾಗಿ ನನ್ನ ಜೀವನವು ನಾಶದ ಕಡೆಗೆ ಹೋಗಲು ಸಹ ಸಾಧ್ಯವಿದೆ. ಮಾಧ್ಯಮದ ಬಳಕೆಯಿಂದಾಗಿ ಮಾನವನ ಜೀವನದಲ್ಲಿ ಆಲಸ್ಯವು ತುಂಬಿಹೋಗಿದೆ. ಯಾವುದೇ ರೀತಿಯ ಕಷ್ಟದ/ಆಯಾಸದ ಕೆಲಸ ಮಾಡಲು ಹಿಂಜರಿಯುತ್ತೇವೆ. ಮಾಧ್ಯಮದಿಂದ ಇತರರಲ್ಲಿ ಸಂಪರ್ಕ ಮಾಡುವುದರಿಂದ ಇತರರಲ್ಲಿ ಮುಖಾಮುಖಿ ಮಾತನಾಡುವುದನ್ನು ಮರೆತೇ ಬಿಟ್ಟಿದ್ದೇವೆ. ಮುಖದಲ್ಲಿ ನಗು ಕಡಿಮೆಯಾಗಿದೆ. ಇತರರಲ್ಲಿ ಸಂಪರ್ಕ ಮಾಡುವ ಆ ಕಲೆ ಜನರ ಮುಂದೆ ನಿಂತು ಮಾತನಾಡುವ ರೀತಿ, ಒಳ್ಳೆಯ ಮಾತು ಎಲ್ಲವೂ ಮರೆತುಹೋಗಿದೆ. ಈಗಿನ ಮಕ್ಕಳಿಗೆ ಸಂಬಂಧಗಳ ಬಗ್ಗೆ ಅರಿವಿಲ್ಲ, ಎಲ್ಲರನ್ನೂ ಆಂಟಿ, ಅಂಕಲ್ ಎಂದೇ ಕರೆಯುತ್ತಾರೆ.

ಕೆಲವರಿಗೆ ಮಾಧ್ಯಮ ಉಪಯೋಗ ಮಾಡುವುದು ಒಂದು ಅನಾರೋಗ್ಯವಾಗಿ ಹೋಗಿದೆ. ಇಡೀ ದಿನ–ರಾತ್ರಿ ಅದರಲ್ಲಿಯೇ ಮುಳುಗಿ ಹೋಗುತ್ತಾರೆ. ಪರಿಸರದಲ್ಲಿ ಏನಾಗುತ್ತದೆ ಎಂಬುವುದು ತಿಳಿದಿಲ್ಲ. ದೇಹಕ್ಕೆ ಸಿಗಬೇಕಾದ ವ್ಯಾಯಾಮವು ಲಭ್ಯವಿಲ್ಲದೆ ದೇಹವು ಅನಾರೋಗ್ಯಕ್ಕೆ ತುತ್ತಾಗುತ್ತದೆ. ಹೀಗೆ ನಮ್ಮ ದೇಶದಲ್ಲಿ ರೋಗಿಗಳ ಸಂಖ್ಯೆಯು ಹೆಚ್ಚಾಗುತ್ತಿದೆ.

ಮಾಧ್ಯಮದಿಂದಾಗಿ ಮನಸ್ಸಿನ ಸಮಾಧಾನ ಮತ್ತು ಶಾಂತಿ ದೂರವಾಗಿದೆ. ಅತಿಯಾದ ಮೊಬೈಲ್ ಬಳಕೆಯಿಂದ ಕಣ್ಣುಗಳು ಮಂಧವಾಗಿವೆ, ನಮ್ಮ ಮೆದುಳಿನ ಮೇಲೂ ಪರಿಣಾಮ ಬೀರುತ್ತದೆ. ಹೀಗೆ ಮಾಧ್ಯಮ ಹಲವಾರು ತರಹದ ಪರಿಣಾಮ ಬೀರುತ್ತದೆ ಮತ್ತು ಆದರಿಂದ ಹಲವಾರು ದುರುಪಯೋಗಗಳಿವೆ.

ಯಾವುದೇ ವಸ್ತು ನಾವು ಉಪಯೋಗ ಮಾಡುವುದರ ಮೇಲೆ ಹೊಂದಿಕೊಂಡಿರುತ್ತದೆ. ನಾವು ಒಳ್ಳೆಯ ರೀತಿಯಲ್ಲಿ ಬಳಸಿದರೆ ಅದು ನಮ್ಮ ಒಳಿತಿಗೆ ಕಾರಣವಾಗುತ್ತದೆ. ನಮಗೆ ಖುಷಿಯನ್ನು ನೀಡುತ್ತದೆ. ಹಾಗೆಯೇ ಕೆಟ್ಟರೀತಿಯಲ್ಲಿ ಬಳಸಿದರೆ ಅವು ವಿನಾಶಕ್ಕೆ ಕಾರಣವಾಗುತ್ತವೆ. ಹೀಗೆ ಯಾವುದೇ ವಸ್ತುವಿನ ಮಿತಿಯನ್ನು ಅರಿತು ಉಪಯೋಗಿಸಬೇಕು ಹಾಗೂ ಅದರ ಒಳ್ಳೆಯ ಫಲಿತಾಂಶವನ್ನು ಪಡೆಯಬೇಕು.

ಬೆಳಕು ಹರಿಯಲಿ

ಧರ್ಮ ಹರಡಲಿ
ನ್ಯಾಯವು ಬೆಳಗಲಿ
ಭ್ರಷ್ಟತೆಯೆಂಬ ಕತ್ತಲು ಸರಿದು
ಅಭಿವೃದ್ಧಿಯ ಬೆಳಕು ಹರಿಯಲಿ

ನಂಬಿಕೆ ಹರಡಲಿ
ವಿಶ್ವಾಸ ಬೆಳಗಲಿ
ದ್ವೇಷವೆಂಬ ಕತ್ತಲು ಸರಿದು
ಪ್ರೀತಿಯ ಬೆಳಕು ಹರಿಯಲಿ

ಸ್ನೇಹ ಹರಡಲಿ
ಪ್ರೀತಿ ಬೆಳಗಲಿ
ಮೋಹ, ಕಾಮ ಕತ್ತಲು ಸರಿದು
ಸ್ನೇಹ, ಪ್ರೀತಿ–ಭಾವ ಬೆಳಕು ಹರಿಯಲಿ

ಸಹೋದರತೆ ಹರಡಲಿ
ವಾತ್ಸಲ್ಯತೆ ಬೆಳಗಲಿ
ಜಾತಿವಾದವೆಂಬ ಕತ್ತಲು ಸರಿದು
ಮಾನವೀಯತೆಯ ಬೆಳಕು ಹರಿಯಲಿ

✍ **ಅನುಶ್ರೀ**
ದ್ವಿತೀಯ ಬಿ.ಕಾಂ. ಬಿ

ಭಾರತೀಯರು ನಾವು
ಪ್ರೀತಿ ಹರಡಿಸಿ
ದ್ವೇಷ ಕರಗಿಸಿ
ಹಾರೈಸೋಣ
ಸುಖ, ಶಾಂತಿ, ನೆಮ್ಮದಿ
ಹರಡಿಸೋಣ
ಸ್ನೇಹದ ದೀಪ ವಿಶ್ವದಲ್ಲೆಡೆ

ನನ್ನ ಹಾಸ್ಟೆಲ್ ಜೀವನ

✍ ಸುಚಿತ್ರ
ಪ್ರಥಮ ಬಿ.ಕಾಂ. ಬಿ

ನನ್ನ ಹಾಸ್ಟೇಲ್ ಜೀವನ ಪ್ರಾರಂಭವಾದದ್ದು 6ನೇ ತರಗತಿಯಿಂದ ನಾನು 5ನೇ ತರಗತಿಯಲ್ಲಿ ಮೊರಾರ್ಜಿ ಶಾಲೆಯ ಪ್ರವೇಶ ಪರೀಕ್ಷೆಯನ್ನು ಬರೆದು ಅದರಲ್ಲಿ 93 ಅಂಕ ಗಳಿಸಿ ಹಾಸ್ಟೇಲ್‌ಗೆ ಸೇರಿಕೊಂಡೆ. ನನಗೆ ಮೊದಲು ಅಪ್ಪ–ಅಮ್ಮನನ್ನು ಬಿಟ್ಟು ಹೋಗಬೇಕು ಎಂದು ಬೇಜಾರಾಗಲಿಲ್ಲ. ನಾನು ಮೊದಲು ಹಾಸ್ಟೇಲ್‌ಗೆ ಹೋಗುವಾಗ ತುಂಬಾ ಸಂತೋಷದಿಂದ ಹೋದೆ. ಅಮ್ಮ ಅತ್ತರು ಕೂಡಾ ನಾನು ಅಳಲಿಲ್ಲ. ಅಪ್ಪ ನನ್ನನ್ನು ಹಾಸ್ಟೇಲ್‌ಗೆ ಸೇರಿಸಿ ಬಿಟ್ಟು ಬರುವಾಗ ತುಂಬಾ ದುಃಖವಾಯಿತು. ನನಗೆ ಯಾರೂ ಪರಿಚಯದವರಿಲ್ಲ. ತುಂಬಾ ಬೇಜಾರಾಯ್ತು. ಆದ್ರೆ ನಾನು ಹೋದ ಹಾಸ್ಟೇಲ್‌ನಲ್ಲಿ ಇದ್ದ ಅಕ್ಕಂದಿರು ತುಂಬಾ ಚೆನ್ನಾಗಿ ಮಾತಾಡಿಸುತ್ತಿದ್ರು ಹಾಗಾಗಿ ನನಗೆ ತುಂಬಾ ಖುಷಿ ಆಗುತ್ತಿತ್ತು. ಮನೆಯಿಂದ ವಾರಕ್ಕೊಮ್ಮೆ ಬಂದು ನೋಡಿಕೊಂಡು ಹೋಗುತ್ತಿದ್ರು ನನ್ನ ಸಂಬಂದಿಕರು ಕೂಡ ಆ ಹಾಸ್ಟೇಲ್‌ನಲ್ಲಿ ಕೆಲಸ ಮಾಡಿಕೊಂಡು ಇದ್ರು, ಅವರು ತುಂಬಾ ಚೆನ್ನಾಗಿ ಮಾತಾಡ್ತಾ ಇದ್ರು. ಯಾರಾದ್ರು ಸ್ವಲ್ಪ ಏನಾದ್ರು ಹೇಳಿದ್ರೆ ಬೇಗ ಅಳುತ್ತಿದ್ದೆ. ಆಮೇಲೆ ಮತ್ತೆ ಎಲ್ಲರೂ ಹೇಳಿದ್ರು 'ನೀನ್ ಯಾವಾಗ್ಲೂ ಅತ್ರೆ ಎಲ್ಲರೂ ಅದು ನಿನ್ನ ವೀಕ್‌ನೆಸ್ ಅಂದುಕೊಂಡು ನಿನಗೆ ಯಾವಾಗ್ಲೂ ಬೇಜಾರ್ ಮಾಡ್‌ತ್ತಾರೆ' ಅಂತ. ಆವತ್ತಿನಿಂದ ನಾನು ಅಳುವುದನ್ನು ಕಡಿಮೆ ಮಾಡಿದೆ. ಹಾಸ್ಟೆಲ್‌ನಲ್ಲಿ ಊಟಕ್ಕೆ ರಾಗಿ ಮುದ್ದೆ ಕೊಡುತ್ತಾ ಇದ್ರು. ನಿಜವಾಗ್ಲೂ ನನಗೆ ಅದನ್ನು ಹೇಗೆ ತಿನ್ನೋದು ಅಂತನೇ ಗೊತ್ತಿರಲಿಲ್ಲ 5 ವರ್ಷ ಕಷ್ಟದಲ್ಲಿ ಮುದ್ದೆಯನ್ನು ತಿಂದಿದ್ದು, ನಾನು ಹೋದಾಗ ಹಾಸ್ಟೇಲ್ ತುಂಬಾ ಸಣ್ಣದಿತ್ತು. ಮತ್ತೆ ನಾನು 8–ನೇ ತರಗತಿಯಲ್ಲಿ ಇದ್ದಾಗ ಹೊಸ ಹಾಸ್ಟೇಲ್ ಆಯ್ತು ಅಲ್ಲಿ ಬೆಳಿಗ್ಗೆ 5 ಗಂಟೆಗೆ ಎದ್ದೇಳ ಬೇಕಿತ್ತು ಮತ್ತೆ ಪ್ರಾರ್ಥನೆ ಮಾಡಿ ಓದ ಬೇಕಿತ್ತು. ತುಂಬಾ ನಿದ್ದೆ ಬರುತ್ತ ಇದ್ದರೂ ಕಷ್ಟದಿಂದ ಕುಳಿತುಕೊಳ್ಳುತ್ತಿದ್ದೆ. ಹಾಸ್ಟೇಲ್‌ನಿಂದ ಶಾಲೆಗೆ ಹೋಗಲು 5 ನಿಮಿಷ ಮಾತ್ರ ಬೇಕಿತ್ತು. ಬೆಳಿಗ್ಗೆ 7–30ಕ್ಕೆ ತರಗತಿಯನ್ನು ಪ್ರಾರಂಭಿಸುತ್ತಿದ್ದರು. ಸಂಜೆ ನಾಲ್ಕುವರೆಗೆ ಹಾಸ್ಟೇಲ್‌ಗೆ ಬರುತ್ತಾ ಇದ್ರು, ಎಲ್ಲಾ ತುಂಬಾ ಖುಷಿಯಿಂದ ಮಾತಾಡಿಕೊಂಡು ಓದಿಕೊಂಡು ಇದ್ದೆವು. ನಾನಿದ್ದ ಹಾಸ್ಟೇಲ್‌ನಲ್ಲಿ ನೀರಿನ ಸಮಸ್ಯೆ ತುಂಬಾ ಇತ್ತು, ಆದ್ದರಿಂದ ತುಂಬಾ ಕಷ್ಟ ಆಗುತ್ತಿತ್ತು. ಕೆಳಗಿನಿಂದ 2–ನೇ ಮಹಡಿಗೆ ನೀರನ್ನು ತೆಗೆದುಕೊಂಡು ಬರಬೇಕಿತ್ತು. ಸ್ನಾನಕ್ಕೆ ತಣ್ಣೀರು, ಮಳೆಗಾಲದಲ್ಲಿ ಕೂಡ ತಣ್ಣೀರಿನ ಸ್ನಾನ. ಹಾಸ್ಟೇಲ್‌ನಲ್ಲಿ ನರ್ಸ್ ಇದ್ರು, ಅವರು ಅಂದ್ರೆ ನನಗೆ ತುಂಬಾ ಇಷ್ಟ ಅವರಿಗೂ ನಾನು ಅಂದ್ರೆ ಇಷ್ಟ. ಅವರು

ಎಲ್ಲಿಗೆ ಹೋಗುವಾಗಲೂ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು ತುಂಬಾ ಖುಷಿಯಾಗುತ್ತಿತ್ತು. ಅವರು ನನ್ನನ್ನು ತುಂಬಾ ಚೆನ್ನಾಗಿ ಮಾತನಾಡಿಸುತ್ತಿದ್ದರು ಎಂದು ಕೆಲವರು ನನ್ನ ಜೊತೆ ಮಾತನಾಡುತ್ತಿರಲಿಲ್ಲ. ನನಗೆ ಇದ್ದ ಒಂದು ಸಮಸ್ಯೆ ಎಂದರೆ ನಮ್ಮ ಮನೆಗೆ ಫೋನ್ ಸಿಗುತ್ತಾ ಇರಲಿಲ್ಲ, ಅವರಾಗಿ ಮಾಡಿದರೆ ಮಾತ್ರ ನಾನು ಮಾತಾನಾಡುತ್ತಿದ್ದೆ. ಇಲ್ಲದಿದ್ದರೆ ನಾನು ಮಾತಾಡುತ್ತಾ ಇರಲಿಲ್ಲ. 5–ನೇ ವರ್ಷ ಹಾಸ್ಟೇಲ್ ಜೀವನ ತುಂಬಾ ಚೆನ್ನಾಗಿತ್ತು. ನಾವು ಸೀನಿಯರ್ ಜೊತೆ ಜಗಳ ಮಾಡುತ್ತಿದ್ದೆವು. ಅವರು ನಮ್ಮೊಟ್ಟಿಗೆ ಮಾತಾಡುವುದನ್ನೇ ಬಿಟ್ಟಿದ್ದರು. ಹಾಸ್ಟೇಲ್‌ನಲ್ಲಿ ಕೆಲವೊಂದು ಹಬ್ಬಗಳನ್ನು ಆಚರಿಸುತ್ತಿದ್ದರು. ನಂತರ ನಾನು 10ನೇ ತರಗತಿಯನ್ನು ಮುಗಿಸಿ ಹಾಸ್ಟೇಲ್ ಬಿಟ್ಟು ಬಂದೆ. ತುಂಬಾ ಬೇಜಾರಾಯ್ತು. ಹಾಸ್ಟೇಲ್‌ನಲ್ಲಿ ಓದಿದ್ದರಿಂದ ನನಗೆ 82% ಬಂದಿತು. ಆದ್ರೆ ನಾನು ಪರೀಕ್ಷೆ ಸಮಯ ಓದುವುದಕ್ಕಿಂತ ಮಾತು, ಹರಟೆ ಇದೇ ಜಾಸ್ತಿ ಆಗಿ ಓದಲಿಲ್ಲ ಹಾಗಾಗಿ ಕಡಿಮೆ ಅಂಕ ಗಳಿಸಿದೆ. ನಂತರ ಪಿ.ಯು.ಗೆ ಕೂಡ ಹಾಸ್ಟೇಲ್‌ಗೆ ಸೇರಿಸಿದ್ರು. ಆಗ ನನಗೆ 5 ವರ್ಷ ಅಭ್ಯಾಸ ಆಗಿತ್ತು, ಬೇಜಾರಾಗಲಿಲ್ಲ. ಆ ಹಾಸ್ಟೇಲ್‌ನಲ್ಲಿ ನಾವೇ ಅಡುಗೆ ಮಾಡಿಕೊಳ್ಳಬೇಕಿತ್ತು. ನನಗೆ ಅಡುಗೆ ಮಾಡೋಕೆ ಬರ್ತಾ ಇರಲಿಲ್ಲ ಆಗ ಅಲ್ಲಿ ಇದ್ದ ಸೀನಿಯರ್ ಹೇಳಿಕೊಟ್ರು. ನನಗೆ ಹಾಸ್ಟೇಲ್ ಲೈಫ್ ತುಂಬಾ ಸಂತೋಷ ಕೊಟ್ಟಿದೆ. ಆದ್ರೆ ನನಗೆ ಅಪ್ಪ–ಅಮ್ಮನ ಪ್ರೀತಿ ಸಿಗಲಿಲ್ಲ. ಈಗ ನನಗೆ ಅವರು ಕಾಲ್ ಮಾಡಿಲ್ಲ ಅಂದ್ರೂ ಬೇಜಾರಾಗಲ್ಲ. ಯಾಕೆಂದರೆ ನನಗೆ ಸ್ನೇಹಿತರು ಚೆನ್ನಾಗಿ ಮಾತಾಡುತ್ತಾ ಇದ್ರೆ ಅಷ್ಟೇ ಆಯ್ತು ಮನೆಗೆ ಫೋನ್ ಮಾಡಿ ಮಾತಾಡಬೇಕು ಅಂತ ಅನಿಸುವುದೇ ಇಲ್ಲ. ಪಿಯುನಲ್ಲಿ ಮೊಬೈಲ್ ಉಪಯೋಗ ಇದ್ದುದರಿಂದ ಸ್ವಲ್ಪ ಫೋನ್ ಮಾಡಿ ಮಾತಾಡ್ತ ಇದ್ದೆ. ಪಿ.ಯು.–ನಲ್ಲಿ 87% ಗಳಿಸಿದೆ. ನಮ್ಮ ಕಾಲೇಜು ಪ್ರಿನ್ಸಿಪಾಲ್ ನಮ್ಮ ಹಾಸ್ಟೇಲ್‌ನಲ್ಲಿ ವಾರ್ಡನ್ ಆಗಿದ್ರು ಹಾಗಾಗಿ ಸ್ವಲ್ಪ ಓದಿದೆ. ಪಿ.ಯು. ಹಾಸ್ಟೇಲ್‌ನಲ್ಲಿ 12–00 ಗಂಟೆ ರಾತ್ರಿವರೆಗೆ ಎಲ್ಲ ಮಾತಾಡುತ್ತಾ ಇದ್ವಿ. ಆಟ ಆಡ್ತಾ ಇದ್ವಿ. ಆದ್ರೆ ಮೊಬೈಲ್ ಉಪಯೋಗ ಇರಲಿಲ್ಲ ಹಾಗಾಗಿ ಎಲ್ಲರೂ ತುಂಬಾ ಆಪ್ತರಾಗಿ ಮಾತಾಡಿಕೊಂಡು ಮಧ್ಯರಾತ್ರಿಯಲ್ಲಿ ಹೊರಗಡೆ ಅಂದ್ರೆ ರೂಮ್ ಮುಂದೆ ತಿರುಗಾಡ್ತ್ತ ಇದ್ವಿ. ಮತ್ತೇ ಹಾಸ್ಟೇಲ್‌ನಲ್ಲಿ ದೆವ್ವ ಇರುತ್ತೆ ಅಂತ ಹೇಳಿ ಹೆದರಿಸಿದ್ದರು ಆಗ ತುಂಬಾ ಹೆದರಿದ್ವಿ ನಮ್ಮ ರೂಮ್‌ಮೇಟ್ಸ್ ಎಲ್ಲರೂ ಸೇರಿ ಬೇರೆಯವರನ್ನು ಹೆದರಿಸಿದ್ದರು. ಪಿ.ಯು. ಮುಗಿಸಿ ನಂತರ ಡಿಗ್ರಿಗೂ ಕೂಡ ಹಾಸ್ಟೇಲ್‌ನಲ್ಲಿ ಕಲಿಯುತ್ತಿದ್ದೇನೆ. ಈಗ ಬೇಜಾರಿನ ವಿಷಯ ಅಂದ್ರೆ ಮೊಬೈಲ್ ಉಪಯೋಗ ಇದೆ. ಯಾರೂ ಮಾತನಾಡುವುದಿಲ್ಲ. ಸ್ವಲ್ಪ ಮಾತ್ರ ಮಾತಾಡುತ್ತಾರೆ. ನನಗೆ ಬೇಜಾರ್ ಏನಂದ್ರೆ ಅಪ್ಪ–ಅಮ್ಮ ಯಾರೂ ಈಗ ಫೋನ್‌ನಲ್ಲಿ ಮಾತಾಡಲ್ಲ. ನನ್ನನ್ನು ಮರೆತಿದ್ದಾರೇನೋ ಅಂತ ಅನಿಸುತ್ತಿದೆ. ನನ್ನ ತಮ್ಮ ಸಹ ಹಾಸ್ಟೇಲ್‌ನಲ್ಲೆ ಇರುವುದು, ಆದ್ರೆ ಈಗ ಅವನು ಮನೆಯಿಂದ ಹೋಗುತ್ತಾನೆ. ಹಾಗೇ ನನ್ನ ಮರೆತ್ತಿದ್ದಾರೇನೋ ಅಂತ ಅನಿಸುತ್ತದೆ. ನಾನು ಅವರಿಗೆ ಹೇಳಿದ್ದೀನಿ ಆದ್ರೂ ಸಹ ಫೋನ್ ಮಾಡಲ್ಲ ಅದೊಂದೇ ಬೇಜಾರು. ಹಾಸ್ಟೇಲ್ ಲೈಫ್ ತುಂಬಾ ಚೆನ್ನಾಗಿದೆ. ತುಂಬಾ ಖುಷಿಯಾಗುತ್ತದೆ. ನಾವು ಯಾವ ರೀತಿ ಇರುತ್ತೀವಿ ಕೆಲವರು ಹೇಳುತ್ತಾರೆ ಮಕ್ಕಳನ್ನು ಹಾಸ್ಟೇಲ್‌ಗೆ ಸೇರಿಸಿದ್ರೆ ಹಾಳಾಗುತ್ತಾರೆ ಅಂತ. ಒಳ್ಳೆ ರೀತಿಯಲ್ಲಿ ಹಾಸ್ಟೇಲ್‌ನಲ್ಲಿ ಇದ್ರೆ ಯಾರೂ ಕೂಡಾ ಹಾಳಾಗಲ್ಲ. ಆದ್ರೆ ನನಗೆ ಮನೆಗಿಂತ ಹಾಸ್ಟೇಲ್ ಅಂದ್ರೆ ತುಂಬಾ ಇಷ್ಟ ಹೊಸ ಹೊಸ ಫ್ರೆಂಡ್ಸ್ ಪರಿಚಯ ತುಂಬಾ ಖುಷಿಯಾಗುತ್ತೆ. ಹಾಸ್ಟೇಲ್ ಲೈಫ್ ಈಜ್ ಬೆಸ್ಟ್ ಫೋರ್ ಮಿ.

ಯಾಕೆಂದರೆ ನಾನು ಪಿ.ಯು. ಇರುವಾಗ ಪರೀಕ್ಷೆಗಿಂತ ಮೊದಲು ಓದಲು ರಜೆ ಕೊಡುತ್ತಾ ಇದ್ದರು. ಆಗ ನಾನು ಪ್ರಥಮ ಪಿಯುಸಿಯಲ್ಲಿ ಮನೆಗೆ ಹೋದೆ, ಆದರೆ ನನಗೆ ಮನೆಯಲ್ಲಿ ಓದಲು ಆಗಲೇ ಇಲ್ಲ. ಅಪ್ಪ ಅಮ್ಮ ಎಷ್ಟೇ ಹೇಳಿದರೂ ನಾನು ಓದಲಿಲ್ಲ. ನಂತರ ಹಾಸ್ಟೇಲ್‌ನಲ್ಲಿ ಬಂದು ಓದಿ ಪರೀಕ್ಷೆ ಬರೆದದ್ದು, ನಂತರ ದ್ವಿತೀಯ ಪಿಯುಸಿಯಲ್ಲಿ ನಾನು ಮನೆಗೆ ಹೋಗಲಿಲ್ಲ, ಹಾಸ್ಟೇಲ್‌ನಲ್ಲಿ ಕೂತು ಓದಿದೆ, ಪ್ರಥಮ ಪಿಯುಸಿಯಲ್ಲಿ 80%, ದ್ವಿತೀಯ ಪಿ.ಯು.ಸಿಯಲ್ಲಿ 87%. ನನಗೆ ಹಾಸ್ಟೇಲ್‌ನಲ್ಲಿ ಓದಿದರೆ ಖುಷಿಯಾಗುತ್ತದೆ. ಡಿಗ್ರಿಗೆ ಬಂದ ನಂತರ ಹಾಸ್ಟೇಲ್ ಬೇಡ ಎನಿಸಿದೆ. ಆದರೂ ಹಾಸ್ಟೇಲ್ ಜೀವನ ತುಂಬಾ ಚೆಂದ.

ಮ್ಯಾಜಿಕ್ ಬ್ಯಾಟ್

✍ ಸೀತಾಲಕ್ಷ್ಮೀ
ಪ್ರಥಮ ಬಿ.ಕಾಂ 'ಎ'

ರಾಮನಗರ ಎಂಬ ಊರಿನಲ್ಲಿ ಒಂದು ಬಡ ಕುಟುಂಬ, ಅದರಲ್ಲಿ ಪವನ್ ಎಂಬ ಹುಡುಗ. ಅವನ ಅಮ್ಮ, ಅಪ್ಪ ಕೂಲಿ ಕೆಲಸ ಮಾಡುತ್ತಿದ್ದರು. ಆಗ ಅವನು 1–ನೇ ವರ್ಷದ ಬಿ.ಕಾಂ.–ನಲ್ಲಿ ಕಲಿಯುತ್ತಿದ್ದ. ಅವನು ಕಲಿಯುವುದರಲ್ಲಿ ಅಷ್ಟು ಹುಷಾರ್ ಇರಲಿಲ್ಲ. ಅವನು ಕಾಲೇಜಿಗೆ ಅಷ್ಟು ನೀಟಾಗಿ ಬರುತ್ತಿರಲಿಲ್ಲ. ಯಾರ ಬಳಿಯೂ ಅಷ್ಟು ಮಾತನಾಡುತ್ತಿರಲಿಲ್ಲ. ಇದರಿಂದ ಅವನಿಗೆ ಕ್ಲಾಸ್‌ನಲ್ಲಿ ಯಾವುದೇ ಗೆಳೆಯರು ಇರುತ್ತಿರಲಿಲ್ಲ. ಅವನು ಒಬ್ಬನೇ ಇರುತ್ತಿದ್ದ.

ಅವನಿಗೆ ಕಲಿಕೆಯಲ್ಲಿ ಅಷ್ಟು ಆಸಕ್ತಿ ಇರದಿದ್ದರೂ ಸ್ಪೋರ್ಟ್ಸ್ ಅದರಲ್ಲೂ ಕ್ರಿಕೆಟ್‌ನಲ್ಲಿ ತುಂಬಾ ಆಸಕ್ತಿ. ಆದ್ದರಿಂದ ಅವನು ಅವನ ಕಾಲೇಜಿನ ಕ್ರಿಕೆಟ್ ಟೀಮ್‌ಗೆ ಸೇರಿದ. ಅವನು ಕ್ರಿಕೇಟ್ ಟೀಮ್‌ಗೆ ಸೇರಿದ ವಿಷಯ ತಿಳಿದ ಅವನ ಟೀಮ್ ಮೆಂಬರ್ಸ್ ಹೀಗೆನ್ನುತ್ತಾರೆ "ಇವನು ಒಬ್ಬ ದಡ್ಡ, ಪೆದ್ದ, ಇವನು ಆಡಿದರೆ ನಮಗೆ ಒಂದು ರನ್ ಸಹ ಬರುವುದಿಲ್ಲ, ಇವನ ಮುಖ ನೋಡಿದರೆ ಗೊತ್ತಾಗಲ್ವ ಇವನು ಹೇಗೆ ಆಡುತ್ತಾನೆಂತಾ?" ಎಂದೆಲ್ಲಾ ಪವನ್‌ನನ್ನು ಟೀಕಿಸುತ್ತಾರೆ. ಈ ಮಾತುಗಳು ಪವನ್‌ನ ಮೇಲೆ ಬಾರಿ ಪ್ರಮಾಣದಲ್ಲಿ ಪರಿಣಾಮ ಬೀರಿದವು. ಪವನ್ ಸಹ "ನಾನು ಒಬ್ಬ ದಡ್ಡ, ಮೂರ್ಖ, ನನ್ನಿಂದ ಒಂದು ಕೆಲಸವನ್ನು ಸಹ ಸರಿಯಾಗಿ ಮಾಡಲು ಸಾಧ್ಯವಿಲ್ಲ, ನನ್ನಿಂದ ಒಂದು ರನ್ ಸಹ ತೆಗೆಯಲು ಸಾಧ್ಯವಿಲ್ಲ" ಎಂಬ ತಪ್ಪು ಎನಿಸಿಕೆಯಿಂದ ಒಂದು ರೀತಿಯ ಭಯದಲ್ಲೇ ಆಡುತ್ತಿದ್ದ. ಇದರಿಂದ ಅವನು ಯಾವಾಗಲೂ ಆಟವನ್ನು ಸರಿಯಾಗಿ ಆಡುತ್ತಿರಲಿಲ್ಲ. ಎಲ್ಲದರಲ್ಲೂ ಸೋಲುತ್ತಿದ್ದ. ಆಗ ಅವನ ಕೋಚ್ ಅವನನ್ನು ಕರೆದು "ನಾಳೆ ನಡೆಯುವ ಮ್ಯಾಚ್‌ನಲ್ಲಿ ಇದೇ ರೀತಿ ಆಡಿ, ನಿನ್ನಿಂದ ನಮ್ಮ ಟೀಮ್ ಸೋತರೆ ನಿನ್ನನ್ನು ಕ್ರಿಕೇಟ್ ಟೀಮ್‌ನಿಂದ ತೆಗೆದುಬಿಡುತ್ತೇನೆ" ಎಂದರು.

ಇದರಿಂದ ಇನ್ನೂ ಭಯಭೀತನಾದ ಪವನ್ ಏನು ಮಾಡುವುದೆಂದೇ ತಿಳಿಯದೆ ಇದರ ಬಗ್ಗೆ ಯೋಚಿಸುತ್ತಾ ಮನೆಗೆ ಹೋಗುವ ದಾರಿಯಲ್ಲಿ ಅವನ ಗೆಳೆಯ ಗಗನ್‌ನ್ನು ಮೀಟ್ ಮಾಡುತ್ತಾನೆ. ಗಗನ್ ಒಂದು ಸ್ಪೋರ್ಟ್ಸ್ ಮೆಟೀರಿಯಲ್ ಶಾಪ್ ಇಟ್ಟಿದ್ದಾನೆ. ಆ ಶಾಪ್‌ನಲ್ಲಿ ಸ್ಪೋರ್ಟ್ಸ್‌ಗೆ ಬೇಕಾದ ಎಲ್ಲಾ ರೀತಿಯ ವಸ್ತುಗಳು ಸಿಗುತ್ತವೆ. ಆತನ ಬಳಿ ಬಂದು ಪವನ್ ನಡೆದ ಎಲ್ಲಾ ವಿಷಯಗಳನ್ನು ತಿಳಿಸುತ್ತಾನೆ. ಆಗ ಗಗನ್ ಸ್ವಲ್ಪ ಹೊತ್ತು ಯೋಚಿಸಿ ಈ ಸಮಸ್ಯೆಗೆ ಒಂದು ಪರಿಹಾರ ಕೊಡುವುದಾಗಿ ಹೇಳುತ್ತಾನೆ. ಅದೇನೆಂದರೆ ಅವನ ಬಳಿ ಒಂದು ಮ್ಯಾಜಿಕ್ ಬ್ಯಾಟ್ ಇರುವುದಾಗಿಯೂ, ಅದರಿಂದ ಯಾರು ಆಡಿದರೂ ಅವರು ಜಯಶಾಲಿಯಾಗುತ್ತಾನೆಂದು ಹೇಳುತ್ತಾನೆ. ಈ ಬ್ಯಾಟ್‌ನಿಂದ ತಾನು ಆಟ ಆಡಿ ತುಂಬಾ ಆಟದಲ್ಲಿ ಗೆದ್ದಿರುವುದಾಗಿಯೂ, ಯಾರು ಈ ಬ್ಯಾಟ್‌ನಿಂದ ಆಡಿದರೂ ಅವರಿಗೆ ಸೋಲೇ ಇಲ್ಲ ಎಂದು ಹೇಳಿದನು.

ಇದನ್ನು ನಂಬಿ ಪವನ್ ಮರುದಿನ ಆಡಲು ಹೋಗುತ್ತಾನೆ. ಮ್ಯಾಚ್ ಪ್ರಾರಂಭವಾಗುತ್ತದೆ. ಆಟದಲ್ಲಿ ಪವನ್‌ನನ್ನು ಫಸ್ಟ್ ಆಡಲು ಬಿಡುವುದಿಲ್ಲ. ಪವನ್‌ನನ್ನು ಬಿಟ್ಟು ಬಾಕಿ ಎಲ್ಲಾ ಬ್ಯಾಟ್ಸ್‌ಮ್ಯಾನ್ ಆಡುತ್ತಾರೆ. ಆಗ ಅವರ ಟೀಮ್ ಕಡಿಮೆ ರನ್‌ನೊಂದಿಗೆ ಸೋಲುವ ಸ್ಥಿತಿಯಲ್ಲಿತ್ತು. ಕೊನೆಗೆ ಪವನ್ ಆಡಲು ಹೋಗುತ್ತಾನೆ. ಪವನ್ ಆಡಲು ಹೋಗುವಾಗ ಎಲ್ಲರೂ ನಮ್ಮ ಟೀಮ್ ಸೋಲುತ್ತದೆ ಎಂದುಕೊಂಡರು. ಪವನ್ ತನ್ನ ಬಳಿ ಇರುವ ಮ್ಯಾಜಿಕ್ ಬ್ಯಾಟಿನಿಂದ ಆಡಿದರೆ ನಾವೇ ವಿನ್ ಆಗುತ್ತೇವೆ ಎಂಬ ಎನಿಸಿಕೆಯಿಂದ ಆಡಲು ಹೋಗುತ್ತಾನೆ. ಮ್ಯಾಚ್‌ನಲ್ಲಿ ಪವನ್ ಚೆನ್ನಾಗಿ ಆಡುತ್ತಾನೆ. ಯಾರು ಸಹ ಪವನ್ ಇಷ್ಟು ಚೆನ್ನಾಗಿ ಆಡುತ್ತಾನೆ ಎಂದು ಎನಿಸಿಯೇ ಇರಲಿಲ್ಲ. ಏಕೆಂದರೆ ಪವನ್ ಅಷ್ಟು ಚೆನ್ನಾಗಿ ಆಡಿ ತನ್ನ ಟೀಮನ್ನು ಗೆಲ್ಲಿಸುತ್ತಾನೆ.

ಆವತ್ತು ಸಂಜೆ ಪವನ್ ತನ್ನ ಗೆಳೆಯನನ್ನು ಭೇಟಿ ಮಾಡಿ ಬ್ಯಾಟ್ ಕೊಟ್ಟದಕ್ಕೆ ಧನ್ಯವಾದ ಎಂದು ಮತ್ತು ಅವನು ಕೊಟ್ಟ ಮ್ಯಾಜಿಕ್ ಬ್ಯಾಟ್ ಮತ್ತು ಅವನ ಹುರಿದುಂಬಿಸುವ ಮಾತುಗಳಿಂದಲೇ ತಾನು ವಿನ್ ಆದೆ ಎಂದನು. ಆಗ ಅವನ ಗೆಳೆಯ ಗಗನ್ ಹೀಗೆಂದನು "ನಾನು ನಿನ್ನ ಬಳಿ ಸುಳ್ಳು ಹೇಳಿದೆ, ನಾನು ಕೊಟ್ಟದ್ದು ಒಂದು ಸಾಧಾರಣ ಬ್ಯಾಟ್ ಅದು ಮ್ಯಾಜಿಕ್ ಬ್ಯಾಟ್ ಅಲ್ಲ" ಎಂದು ಹೇಳಿದ. ಇದನ್ನು ಕೇಳಿದ ಪವನ್‌ಗೆ ಆಶ್ಚರ್ಯವಾಗಿ "ಇದು ಮ್ಯಾಜಿಕ್ ಬ್ಯಾಟ್ ಅಲ್ಲದಿದ್ದರೆ ನಾನು ಹೇಗೆ ವಿನ್ ಆದೆ" ಎಂದು ಕೇಳಿದ. ಆಗ ಗಗನ್ ಹೀಗೆಂದ "ನೀನು, ಪವನ್ ನನ್ನ ಬಳಿ ಬಂದಾಗ ನನ್ನಿಂದ ಆಡಲು ಆಗುವುದಿಲ್ಲ ಸೋತು ಹೋಗುತ್ತೇನೆ ಎಂಬ ತಪ್ಪು ಕಲ್ಪನೆಗಳನ್ನು ನಿನ್ನಲ್ಲಿ ಬೆಳೆಸಿದ್ದಿ. ಅದಕ್ಕೆ ನಿನಗೆ ಧೈರ್ಯ ತುಂಬಲು ಈ ಮ್ಯಾಜಿಕ್ ಬ್ಯಾಟ್‌ನಿಂದ ಆಡಿದರೆ ನೀನು ಆಗುತ್ತೀಯಾ, ಇದರಿಂದ ಆಡಿದರೆ ಸೋಲೇ ಇಲ್ಲ ಎಂದು ಸುಳ್ಳು ಹೇಳಿದೆ. ಅದನ್ನು ನಂಬಿ ನೀನು ನಾನು ವಿನ್ ಆಗುತ್ತೇನೆ ಎಂಬ ಎನಿಸಿಕೆಯೊಂದಿಗೆ ಆಡಿದೆ ನೀನು ವಿನ್ ಆದೆ" ಎಂದನು.

ಆಗ ಪವನಿಗೆ ಅರ್ಥವಾಗುತ್ತದೆ ನಾವು ಯಾವಾಗಲೂ ಸರಿ ಅನಿಸಿಕೆಯಿಂದ ಯಾವುದೇ ಕೆಲಸ ಮಾಡಿದರೂ ಅದು ಯಶಸ್ಸು ಆಗುತ್ತದೆ ಎಂದು ಗೊತ್ತಾಗುತ್ತದೆ.

ಪಶ್ಚಾತ್ತಾಪ

✍ **ಶರೀನ್ ಡಿ'ಸೋಜಾ**
ಪ್ರಥಮ ಬಿ.ಕಾಂ 'ಎ'

ಒಂದು ಊರಿನಲ್ಲಿ ಒಬ್ಬ ರೈತನಿಗೆ ಇಬ್ಬರು ಮಕ್ಕಳು, ಒಂದು ಗಂಡು ಒಂದು ಹೆಣ್ಣು ತಂದೆ–ತಾಯಿ ಇಲ್ಲದ ತಬ್ಬಲಿ ಮಕ್ಕಳು. ಅಣ್ಣನು ತಂಗಿಯನ್ನು ತಂದೆ–ತಾಯಿಯ ಸ್ಥಳದಲ್ಲಿ ನಿಂತು ತುಂಬ ಪ್ರೀತಿಯಿಂದ ನೋಡುತ್ತಿದ್ದ. ತಂಗಿ ಏನು ಕೇಳಿದರೂ 'ಇಲ್ಲ' ಎಂಬ ಮಾತು ಬರುತ್ತಿರಲಿಲ್ಲ. ಅಣ್ಣನು ಕಷ್ಟಪಟ್ಟು ಹೊಲದಲ್ಲಿ ದುಡಿದು ತನ್ನ ತಂಗಿಯನ್ನು ಶಾಲೆಗೆ ಸೇರಿಸಿದನು. ತನ್ನ ತಂಗಿಯು ಶಾಲೆಗೆ ಹೋಗಿ ಚೆನ್ನಾಗಿ ಓದುತ್ತಾಳೆ ಎಂಬ ನಂಬಿಕೆ ಅಣ್ಣನದು. ತಂಗಿಯು ಇದನ್ನೆಲ್ಲ ಮರೆತು ಕೆಟ್ಟ ಗೆಳತಿಯರ ಸಹವಾಸ ಮಾಡಿ ಪರೀಕ್ಷೆಯಲ್ಲಿ ಫೈಲಾದಳು. ಈ ಸುದ್ದಿ ಕೇಳಿ ಅಣ್ಣನಿಗೆ ಬೇಸರವಾಯಿತು. ಈ ವಿಷಯದ ಕುರಿತು ಇಬ್ಬರ ನಡುವೆ ಸ್ವಲ್ಪ ಮಾತುಕತೆಯೂ ನಡೆಯಿತು. ಅಣ್ಣನು ನೋವಿನಿಂದ 'ಇನ್ನು ಮುಂದೆ ಶಾಲೆಗೆ ಹೋಗುವುದು ಬೇಡ, ನನ್ನೊಂದಿಗೆ ಹೊಲದಲ್ಲಿ ದುಡಿಯುವ ಕೆಲಸದಲ್ಲಿ ಸಹಾಯ ಮಾಡು' ಎಂದನು. ಇದನ್ನು ಕೇಳಿ ತಂಗಿಯು ಮನೆಯಲ್ಲಿರುವ ಎಲ್ಲಾ ಒಡವೆ ತೆಗೆದುಕೊಂಡು ಮನೆಬಿಟ್ಟು ಹೊರಟಳು. ಅಣ್ಣ ಹೊಲದಿಂದ ಮನೆಗೆ ಬರುವಾಗ ತಂಗಿ, ಹಣ, ಒಡವೆ ಇಲ್ಲದನ್ನು ಕಂಡು ತುಂಬ ದುಃಖಪಟ್ಟನು. ತಂಗಿಯನ್ನು ಅಷ್ಟು ಪ್ರೀತಿಯಿಂದ ನೋಡಿಕೊಂಡಿದ್ದೆ ಆದರೆ ಇವತ್ತು ನನ್ನನ್ನೇ ಬಿಟ್ಟು ಹೋದಳು ಎಂದು ದುಃಖಪಟ್ಟನು. ತಂಗಿಯು ಹಣ ಇರುವ ತನಕ ಗೆಳತಿಯರೊಂದಿಗೆ ಗಮ್ಮತ್ತಾಗಿ ದಿನ ಕಳೆದಳು. ಹಣ ಮುಗಿದ ಬಳಿಕ ಎಲ್ಲ ಗೆಳತಿಯರು ಬಿಟ್ಟು ಹೋದರು. ಮುಂದೆ ಏನು ಮಾಡುವುದೆಂದು ತೋಚಲಿಲ್ಲ, ಹಸಿವು ತಾಳಲಾರದೆ ಭಿಕ್ಷೆ ಬೇಡಲು ಆರಂಭಿಸಿದಳು. ಭಿಕ್ಷೆ ಬೇಡುವಾಗ ಅಣ್ಣನ ನೆನಪು ಬಂತು. ಅಣ್ಣನು ಕಷ್ಟಪಟ್ಟು ದುಡಿದು ತಾನು ಕೇಳಿದ್ದು ಎಲ್ಲವನ್ನು ಕೊಡಿಸುತ್ತಿದ್ದನು. ಅಣ್ಣನ ಮಾತು ಕೇಳಿದ್ದರೆ ತನಗೆ ಈ ಸ್ಥಿತಿ ಬರುತ್ತಿರಲಿಲ್ಲ. ಅಣ್ಣನು ಎಷ್ಟು ಪ್ರೀತಿಯಿಂದ ನನ್ನನ್ನು ನೋಡಿಕೊಳ್ಳುತ್ತಿದ್ದ, ನನಗೆ ಒಳ್ಳೆಯ ಬಟ್ಟೆ ಕೊಡಿಸುತ್ತಿದ್ದ. ಆದರೆ, ಈಗ ಮೈಮೇಲಿದ್ದ ಬಟ್ಟೆ ವಾಸನೆ ಬರುತ್ತದೆ. ಈಗಲೇ ಹೋಗಿ ಅಣ್ಣನ ಬಳಿ ಕ್ಷಮೆ ಕೇಳುತ್ತೇನೆ. ಅಣ್ಣ ನನ್ನನ್ನು ಖಂಡಿತ ಕ್ಷಮಿಸುತ್ತಾನೆ ಎಂದು ಯೋಚಿಸಿ ಮನೆ ಕಡೆಗೆ ಹಿಂತಿರುಗಿದಳು. ಮನೆಗೆ ಬಂದ ತಂಗಿಯನ್ನು ಕಂಡು ಅಣ್ಣನು ಸಂತೋಷಪಟ್ಟನು. ತಂಗಿ ಕ್ಷಮೆ ಕೇಳಿದಳು, ಅಣ್ಣನು ಸಂತೋಷದಿಂದ ತಂಗಿಯನ್ನು ಕ್ಷಮಿಸಿದನು.

ನೀತಿ: ತಪ್ಪು ಮಾಡುವುದು ಸಹಜ. ಪಶ್ಚಾತ್ತಾಪಪಟ್ಟು ಕ್ಷಮೆ ಕೇಳುವುದು ದೊಡ್ಡ ಗುಣ.

****

ಗದ್ದೆಗೆ ತೆವರಿ ಇರಬೇಕು, ಹೆಣ್ಣಿಗೆ ತವರು ಇರಬೇಕು

✍ ಚೈತ್ರ
ಪ್ರಥಮ ಬಿ.ಕಾಂ 'ಬಿ'

ನಮ್ಮದು ಕೃಷಿಪ್ರಧಾನ ದೇಶ. ಶತ–ಶತಮಾನಗಳಿಂದ ಕೃಷಿಯ ಮೂಲಕವೇ ಜನರು ಬಾಳಿ ಬದುಕಿದ್ದಾರೆ. ಭೂಮಿ– ತಾಯಿಯನ್ನು ಪೂಜಿಸಿ ಉತ್ತಮ ಬೆಳೆಗಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ಭೂಮಿ ಹಾಗೂ ಬೆಳೆಗೆ ಸಂಬಂಧಪಟ್ಟ ಆಚರಣೆಗಳಲ್ಲಿ ಕಂಡುಬರುವ ಭಾವನಾತ್ಮಕ ಸಂಬಂಧ ಗಾದೆಗಳಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತವೆ. ನೆಲವನ್ನು ನಂಬಿದವರಿಗೆ ಕೇಡಿಲ್ಲ ಎಂಬ ಭರವಸೆ ಒಕ್ಕಲಿಗನವರದು, ಭೂಮಿಯೊಂದಿಗಿನ ಮಾನವ ಸಂಬಂಧ, ನೆಲದ ಸ್ವರೂಪ, ಗುಡ್ಡಬೆಟ್ಟ, ಕಲ್ಲು–ಮಣ್ಣುಗಳನ್ನು ಮಾನವ ಗ್ರಹಿಸಿರುವ ರೀತಿ, ಕೃಷಿ ಜೀವನದ ವಿಶಿಷ್ಟ ಅನುಭವಗಳು. ಇದೆಲ್ಲ ಗಾದೆಗಳಲ್ಲಿ ಶಬ್ದಗಳ ರೂಪದಲ್ಲಿ ಹರಳುಗಟ್ಟಿದೆ.

ತವರು ಹೆಣ್ಣಿಗೆ ಪ್ರೀತಿಯ ತಾಣ. ಅದರ ನೆನಪಿನಿಂದಲೇ ಅವಳು ಪುಳಕಗೊಳ್ಳುತ್ತಾಳೆ. ತವರು ಹೆಣ್ಣಿಗೆ ಎಲ್ಲ ಬಗೆಯ ಆಶ್ರಯ–ರಕ್ಷಣೆಗಳನ್ನು ನೀಡುತ್ತದೆ. 'ಗದ್ದೆಗೆ ತೆವರಿ ಇರಬೇಕು, ಹೆಣ್ಣಿಗೆ ತವರು ಇರಬೇಕು' ಈ ಗಾದೆಯಲ್ಲಿ ತವರಿನ ಹೋಲಿಕೆಯ ಗದ್ದೆಗೆ ತೆವರಿ ಎಷ್ಟು ಅವಶ್ಯಕ ಎಂಬುದನ್ನು ಮನದಟ್ಟುಗೊಳಿಸುತ್ತದೆ.

ಇದೇ ಹೋಲಿಕೆಯಂತೆ ಇನ್ನೊಂದು ರೀತಿಯಲ್ಲಿ ನೋಡುವುದಾದರೆ ಹೊಲಕ್ಕೆ ಸರಿಯಾಗಿ ನೀರಿನ ವ್ಯವಸ್ಥೆಯಾಗಬೇಕಾದರೆ ಅದಕ್ಕೊಂದು ಒಡ್ಡು ಇರಬೇಕು. ಒಡ್ಡು ಇಲ್ಲದ ಹೊಲ, ಗೊಡ್ಡೆಮ್ಮೆ ಇದ್ದಂತೆ. ಗೊಡ್ಡೆಮ್ಮೆ ಹೇಗೆ ಹಾಲು ಕೊಡುವುದಿಲ್ಲವೋ ಹಾಗೇ ಒಡ್ಡು ಇಲ್ಲದ ಹೊಲದಲ್ಲಿ ನೀರಿನ ತೊರೆಯಿಂದ ಬೆಳೆ ಚೆನ್ನಾಗಿ ಬರದು ಎಂಬುವುದನ್ನು ನಾವು ಸರಿಯಾಗಿ ಮನದಟ್ಟು ಮಾಡಿಕೊಳ್ಳಬೇಕು.

ಅಮ್ಮಾ

ನೀನಿಲ್ಲದ ಕಲ್ಪನೆ ಸಹಿಸಲಾರೆ
ನೀನಿದ್ದರೆ ಜೊತೆಗೆ ಸಾಧನೆ
ಶಿಖರವೇರುವೆ ನಾನು
ನಿನ್ನ ಗುಣ ವರ್ಣನೆ ವರ್ಣಿಸಲಾರೆ ನಾನು
ಕ್ಷಣದಲ್ಲಿ ಬೇಸರಿಸಿದರೂ
ಸ್ಥಿರದಲ್ಲೆ ಮೌನಿ ನಾನು
ಬಾಹ್ಯ ಪ್ರೀತಿಗೆ ವಂಚಿತನಾದರೂ
ನಿನ್ನಪ್ಪುಗೆಯ ಪ್ರೀತಿಗಾಗಿ ಬಾಗಿ ನಾನು

ನನ್ನಾಸೆಗೆ ನೀರೆದೆರೆ ನೀನು
ಎಲ್ಲರಂತಲ್ಲ ನಮ್ಮ ಪ್ರೀತಿ
ಬಳ್ಳಿ ಹೂವಂತೆ ಅದು ಪುಣ್ಯದ ಸೆಳೆತ
ಬೀರಿದೆ ಇಂದು ಪ್ರೀತಿ ಜನ್ಮದ ಜೊತೆ
ನೀನಿರಬೇಕು ಅಮ್ಮಾ ಎಂದು

✍ ಮಾಲಾಶ್ರೀ
ತೃತೀಯ
ಬಿ.ಕಾಂ. ಬಿ

ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯ

✍ ಪದ್ಮಶ್ರೀ
ದ್ವಿತೀಯ ಬಿ.ಕಾಂ 'ಬಿ'

ಪರಿಸರದಲ್ಲಿ ಉಂಟಾಗುತ್ತಿರುವ ಮಾಲಿನ್ಯದಿಂದ ಮಾನವರಿಗೆ ಅಸ್ತಮಾ, ಕ್ಯಾನ್ಸರ್, ಹೃದಯ ದೌರ್ಬಲ್ಯ, ಹೃದಯಾಘಾತ, ರಕ್ತದೊತ್ತಡ ಇತ್ಯಾದಿ ತೊಂದರೆಗಳು ಹೆಚ್ಚುತ್ತಿವೆ. ಇದಕ್ಕೆ ಕಾರಣ ಮನೆ, ಕಚೇರಿ, ವಾಹನ, ಕಾರ್ಖಾನೆಗಳಿಂದ ಹೊರಬರುವ ಮಲೀನ ಹೊಗೆ, ತ್ಯಾಜ್ಯ ವಸ್ತು ಮತ್ತು ಅರಣ್ಯ ನಾಶದಿಂದ ಪರಿಸರ ಅಪಾಯದ ಅಂಚಿನಲ್ಲಿದೆ. ನಗರೀಕರಣದಿಂದ ಆಹಾರ ಬೆಳೆಯುವ ಪ್ರದೇಶ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದರೆ, ಮತ್ತೊಂದೆಡೆ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರವನ್ನು ಪೂರೈಸಬೇಕೆಂಬ ಉದ್ದೇಶದಿಂದ ರಸಗೊಬ್ಬರಗಳನ್ನು ಹೇರಳವಾಗಿ ಬಳಸಲಾಗುತ್ತಿದೆ. ಇದರಿಂದ ಕೃಷಿಭೂಮಿ ಸತ್ವ ಕ್ಷೀಣವಾಗುತ್ತಿದೆ. ಭೂಮಿಯ ಮೇಲಿನ ಕೆರೆ, ಕಟ್ಟೆಗಳನ್ನು ನಗರೀಕರಣಕ್ಕಾಗಿ ಹಾಳುಗೆಡವುತ್ತಿರುವ ಪರಿಣಾಮದಿಂದಾಗಿ ಸೂರ್ಯನ ಬಿಸಿಲಿಗೆ ಭೂಮಿಯ ಮೇಲಿನ ನೀರು ಆವಿಯಾಗಿ ಮೋಡವಾಗಲು, ಒಂದು ಪಕ್ಷ ಮೋಡವಾದರೂ ದಟ್ಟವಾದ ಹಸಿರಿನ ಅರಣ್ಯ ಇಲ್ಲದಿದ್ದರೆ, ಅದನ್ನು ತನ್ನೆಡೆಗೆ ಸೆಳೆದು ತಂಪುಗೊಳಿಸಿ ಮಳೆಗರೆಯುವ ಸಂಭವ ಕಡಿಮೆಯಾಗುತ್ತದೆ.

ಕೆರೆ ಕಟ್ಟೆಗಳಲ್ಲಿ ಸದಾ ನೀರು ಇರುವುದರಿಂದ ಭೂಮಿ ತಂಪಾಗಿರುತ್ತಿತ್ತು. ನೀರು ಮಣ್ಣಿನ ಮೂಲಕ ಇಳಿದು ಅಂತರ್ಜಾಲ ಸೇರಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿಯೇ ಭೂಮಿಯನ್ನು ಎಷ್ಟು ಕೊರೆದರೂ ನೀರು ಸಿಗುತ್ತಿಲ್ಲ. ವಾಯುಮಾಲಿನ್ಯವನ್ನು ತಡೆಗಟ್ಟಲು ಹಸಿರು ಸಸ್ಯಗಳನ್ನು ಉಳಿಸಿ, ಬೆಳೆಸಿ ಸಂರಕ್ಷಿಸಬೇಕು. ಏಕೆಂದರೆ ಪರಿಸರದಲ್ಲಿನ ಹಸಿರು ಸಸ್ಯಗಳು ಗಾಳಿಯಲ್ಲಿರುವ ಮಾಲಿನ್ಯತೆಯನ್ನು ಹೀರಿಕೊಂಡು ಶುದ್ಧ ಆಮ್ಲಜನಕವನ್ನು ಪರಿಸರಕ್ಕೆ ಪೂರೈಸುತ್ತದೆ.

ಹಸಿರು ಸಸ್ಯಗಳು ಪರಿಸರದಲ್ಲಿ ನಾಶವಾದರೆ

ಯಾವುದೇ ರೀತಿಯ ಅಭಿವೃದ್ಧಿಯಿಂದಾದರೂ ಆಮ್ಲಜನಕವನ್ನು ಪರಿಸರಕ್ಕೆ ಪೂರೈಸಲು ಸಾಧ್ಯವಿಲ್ಲ. ದಿನಬಳಕೆ ಪ್ಲಾಸ್ಟಿಕ್‌ನಿಂದ ಉಂಟಾಗುತ್ತಿರುವ ಮಾಲಿನ್ಯ, ಓಜೋನ್ ಪದರ ಹಾಳಾಗಿರುವುದರಿಂದ ಉಂಟಾಗುವ ತೊಂದರೆ ಎಲ್ಲವೂ ಒಂದಲ್ಲ ಒಂದು ರೀತಿಯ ಜೀವ ಜಗತ್ತಿಗೆ ಮರಣ ಹೋಮವಾಗಿದೆ.

ನಗು

ತನ್ನೊಳಗೆ ನಗುವವನು	:	ಜ್ಞಾನಿ
ಕಾರಣವಿಲ್ಲದೆ ನಗುವವನು	:	ಹುಚ್ಚ
ತನ್ನನ್ನು ತಾನೇ ಮರೆತು ನಗುವವನು	:	ರಸಿಕ
ಇತರರನ್ನು ನೋಡಿ ನಗುವವನು	:	ಅಯೋಗ್ಯ
ಇತರರಿಗೆ ನೋವುಂಟು ಮಾಡಿ ನಗುವವ	:	ಖಳನಾಯಕ
ಮನರಂಜಿಸಲು ನಗುವವ	:	ವಿದೂಷಕ
ನಗುತ್ತಲೇ ಜೀವನದ ಸಮಸ್ಯೆ ಎದುರಿಸುವವ	:	ಬುದ್ಧಿವಂತ

✍ ಮೇಘ
ಪ್ರಥಮ ಬಿ.ಕಾಂ. 'ಬಿ'

ಪ್ರಕೃತಿ ಮತ್ತು ನಾವು

✍ **ಮೋಹನ್**
ಪ್ರಥಮ ಬಿ.ಕಾಂ 'ಎ'

ಇಡೀ ಸೌರವ್ಯೂಹದಲ್ಲಿ ಅತೀ ವಿಶಿಷ್ಟ ಗ್ರಹವಾಗಿ ಗುರುತಿಸಿಕೊಂಡಿರುವ ನಾವಿರುವ ಈ ಭೂಮಿ ಒಂದು ಅದ್ಭುತವೆಂದೇ ಹೇಳಬಹುದು. ಅನೇಕ ಬಗೆಯ, ಜಾತಿಯ ಜೀವಿ ಪ್ರಭೇದಗಳನ್ನು ಈ ಭೂಮಿ ಹೊಂದಿದೆ. ಇಂತಹ ಜೀವಿ ಪ್ರಭೇದಗಳಲ್ಲಿ ಅತ್ಯಂತ 'ಬುದ್ಧಿವಂತ ಜೀವಿ' ಎಂದು ಗುರುತಿಸಿಕೊಂಡಿರುವ ಮಾನವ, ಅನೇಕ ಆವಿಷ್ಕಾರಗಳನ್ನು ಮಾಡುತ್ತಾ ತನ್ನನ್ನು ತಾನು ಅಭಿವೃದ್ಧಿ ಪಥದಲ್ಲಿ ಸಾಗಿಸಿಕೊಂಡು ಬಂದಿದ್ದಾನೆ.

ಇಂದಿನ ಈ ಸಮಾಜ ಇಷ್ಟೊಂದು ಪ್ರಗತಿ ಪಥದಲ್ಲಿ ಸಾಗಿರಲು ಮಾನವನ ಆವಿಷ್ಕಾರಗಳೇ ಕಾರಣ ಎಂದು ಹೇಳಬಹುದು. ಉದಾಹರಣೆಗೆ ಕ್ಷಣಾರ್ಧದಲ್ಲೇ ಸಂದೇಶ ರವಾನಿಸಲು ಮೊಬೈಲ್ ಫೋನ್‌ಗಳು, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಯಾಣಿಸಲು ಅನೇಕ ಸಾರಿಗೆ ವ್ಯವಸ್ಥೆಗಳು, ಸಾಮಾಜಿಕ ಜಾಲತಾಣಗಳು ಮತ್ತು ಮುಂತಾದವುಗಳು.

ಆದರೆ ಮಾನವ ತನ್ನ ಈ ಆವಿಷ್ಕಾರದೊಳಗೆ ಎಷ್ಟೊಂದು ಮುಳುಗಿ ಹೋಗಿದ್ದಾನೆಂದರೆ ದೇವರಿಂದ ಕೊಡಲ್ಪಟ್ಟ ಬಹುಮಾನ ಎಂಬಂತೆ ಇರುವ ಪ್ರಕೃತಿಯ ಕಡೆ ಗಮನ ಹರಿಸುವುದನ್ನೇ ಮರೆತು ಬಿಟ್ಟಿದ್ದಾನೆ. ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಯನ್ನೇ ದೋಚಿ ಹಾಳುಗೆಡವುತ್ತಿದ್ದಾನೆ.

"ನಮ್ಮ ಭಾರತ ಸ್ವಚ್ಛ ಭಾರತ" ಎಂಬುದು ಘೋಷಣೆಗೆ ಮಾತ್ರ ಸೀಮಿತವಾಗಿದೆ ಎಂದು ಬಿಂಬಿಸುವಂತೆ ಇನ್ನೂ ಕೂಡ ಕೆಲವು ಕಡೆ ಕಸದ ರಾಶಿ ರಾರಾಜಿಸುತ್ತಿದೆ. ಕೆಲವರಂತೂ "ಇಲ್ಲಿ ಕಸ ಹಾಕಬೇಡಿ" ಎಂಬ ಫಲಕವಿದ್ದರೂ ಕಸ ಹಾಕಿಯೇ ತೀರುತ್ತೇವೆ ಎಂದು ಪಣ ತೊಟ್ಟಂತೆ ಅಲ್ಲಿಯೇ ಕಸ ಹಾಕುತ್ತಿದ್ದಾರೆ. ಇನ್ನೂ ಕೆಲವರು ಸ್ವಚ್ಛತೆ ಏನೋ ಮಾಡುತ್ತಾರೆ ಆದರೆ ಕಸದ ವಿಲೇವಾರಿ ಮಾತ್ರ ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ. ಹೀಗೆ ಮುಂದುವರಿದರೆ ಮುಂದೊಂದು ದಿನ ಕಸದ ರಾಶಿಯ ನಡುವೆ ಜೀವಿಸುವ ಕಾಲ ಬಂದರೂ ಸಂಶಯವಿಲ್ಲ.

ಅದಕ್ಕಾಗಿ ಈಗಲೇ ಎಚ್ಚೆತ್ತುಕೊಳ್ಳೋಣ ಪ್ರಕೃತಿಯನ್ನು ದೇವರಂತೆ ಆರಾಧಿಸಿ, ಅದರ ಸೌಂದರ್ಯವನ್ನು ಸವಿಯೋಣ. ಪ್ರಕೃತಿಯ ರಕ್ಷಣೆ ಇಡೀ ಈ ಭೂಮಿಯ ರಕ್ಷಣೆ ಅಂದರೆ ಇಡೀ ಈ ಜೀವ ಸಂಕುಲದ ರಕ್ಷಣೆ ಎಂಬುದನ್ನು ಅರಿಯೋಣ.

ನಗೆಹನಿ



✍ **ಮೇಘ**
ಪ್ರಥಮ ಬಿ.ಕಾಂ. 'ಬಿ'

ಶಾಲೆಯಲ್ಲಿ ನಡೆದ ಸಂಭಾಷಣೆ,

ಟೀಚರ್ : ಗುಂಡ, ಗೋಲ್ ಗುಂಬಜ್ ಎಲ್ಲಿದೆ?
ಗುಂಡ : ಬಿಜಾಪುರದಲ್ಲಿ ಇದೆ.
ಟೀಚರ್ : ಗೋಲ್ ಗುಂಬಜ್‌ನ ವಿಶೇಷತೆ ಏನು?
ಗುಂಡ : ಅದರಲ್ಲಿ ಒಂದು ಸಾರಿ ಹೇಳಿದರೆ, 7 ಬಾರಿ ಕೇಳುತ್ತೆ..
ಟೀಚರ್ : ಗೋಲ್ ಗುಂಬಜ್ ಬಿಜಾಪುರದಲ್ಲೇ ಏಕೆ ಕಟ್ಟಿಸಿದ್ದಾರೆ?
ಗುಂಡ : ಸಾರ್, ಬಿಜಾಪುರದ ಜನಕ್ಕೆ ಒಂದು ಸಾರಿ ಹೇಳಿದರೆ ಅರ್ಥ ಆಗೋದಿಲ್ಲ ಸಾರ್... ಅದಕ್ಕೆ.

ಚಂಚಲ ಮನಸ್ಸನ್ನು ಹತೋಟಿಯಲ್ಲಿಡಲು ಧ್ಯಾನ ಪರಿಣಾಮಕಾರಿ ಮಾರ್ಗ



✍ ಗ್ರೀಷ್ಮಾ ಮೊಂತೆರೊ
ದ್ವಿತೀಯ ಬಿ.ಕಾಂ 'ಎ'

ನಾವು ಎಲ್ಲವನ್ನೂ ಹಣದಿಂದಲೇ ಅಳೆಯುವಂತಹ ಪರಿಸ್ಥಿತಿ ಉಂಟಾಗಿರುವುದರಿಂದ ಹಣ ಸಂಪಾದನೆಯತ್ತಲೇ ಕೇಂದ್ರೀಕೃತವಾಗಿರುವ ನಮ್ಮ ಮನಸ್ಸು ಹೆಚ್ಚಿನ ಒತ್ತಡಕ್ಕೆ ಒಳಗಾಗುತ್ತಿದೆ. ಇದರಿಂದಾಗಿ ಹೆಚ್ಚಿನವರು ಮಾನಸಿಕವಾಗಿ ಜರ್ಝರಿತವಾಗಿ ವಿವಿಧ ರೋಗಗಳಿಗೆ ಬಲಿಯಾಗುತ್ತಿರುವುದು ಕಂಡು ಬರತೊಡಗಿದೆ.

ಸದಾ ಒತ್ತಡದಲ್ಲಿರುವ ಮಂದಿ ಮಾನಸಿಕವಾಗಿ ಒಂದಷ್ಟು ರಿಲ್ಯಾಕ್ಸ್ ಆಗುವಂತೆ ಮಾಡಲು ಇದೀಗ ಧ್ಯಾನ ಕೇಂದ್ರಗಳು ಹುಟ್ಟಿಕೊಂಡಿದ್ದು, ಇದಕ್ಕೆ ಸೇರ್ಪಡೆಗೊಳ್ಳುವವರ ಸಂಖ್ಯೆಯು ಹೆಚ್ಚಾಗುತ್ತಿದೆ. ಆಧ್ಯಾತ್ಮದಲ್ಲಿಯೂ ಧ್ಯಾನದ ಮಹತ್ವದ ಬಗ್ಗೆ ಸವಿವರವಾಗಿ ಹೇಳಲಾಗಿದೆ. ಸದಾ ಒತ್ತಡದಲ್ಲಿ ಚಂಚಲವಾಗಿರುವ ಮನಸ್ಸನ್ನು ಹತೋಟಿಗೆ ತರಲು ಧ್ಯಾನ ಪರಿಣಾಮಕಾರಿಯಾದ ಮಾರ್ಗವಾಗಿದೆ ಎಂದು ವಿವರಿಸಲಾಗಿದೆ.

ನಿರ್ದಿಷ್ಟ ಸ್ಥಳದಲ್ಲಿ, ನಿರ್ದಿಷ್ಟ ಸಮಯದಲ್ಲಿ ಏಕಚಿತ್ತವಾಗಿ ಭಗವಂತನ ಧ್ಯಾನದಲ್ಲಿ ತೊಡಗುವುದರಿಂದ ಮನೋನಿಗ್ರಹ ಸಾಧ್ಯವಾಗುತ್ತದೆ. ಮನೋನಿಗ್ರಹವಾದರೆ ನಮ್ಮ ಧ್ಯಾನದಲ್ಲಿ ಅರ್ಥ ಸಿಗುತ್ತದೆ. ಇಲ್ಲದೆ ಹೋದರೆ ಭಗವಂತನ ಧ್ಯಾನದಲ್ಲಿ ತೊಡಗಿದರೂ ಮತ್ತೊಂದೆಡೆ ಮನಸ್ಸು ಮತ್ತೆಲ್ಲೋ ಹರಿಯುತ್ತಿರುತ್ತದೆ. ಇದರಿಂದ ಯಾವುದೇ ಪ್ರಯೋಜನವಾಗಲಾರದು.

ನಾವು ದೇವಸ್ಥಾನಕ್ಕೆ ಹೋದಾಗ ದೇವರ ಧ್ಯಾನದಲ್ಲಿಯೇ ಇರುವ ಕಾರಣ ಮನಸ್ಸು ಪ್ರಶಾಂತವಾಗಿ ಏನೋ ಒಂದು ರೀತಿಯ ಮಾನಸಿಕ ನೆಮ್ಮದಿ ದೊರೆದಂತಾಗುತ್ತದೆ. ಕೆಲವು ಮಂದಿ ಮಾನಸಿಕ ಕ್ಷೋಭೆಗೆ ಒಳಗಾದಾಗ ದೇವಾಲಯಕ್ಕೆ ಹೋಗಿ ಒಂದಷ್ಟು ಹೊತ್ತು ಇದ್ದು, ದೇವರ ಧ್ಯಾನದಲ್ಲಿ ತೊಡಗಿದ್ದು ಬರುವುದನ್ನು ರೂಢಿಸಿಕೊಂಡಿರುತ್ತಾರೆ. ಇದರಿಂದ ಆ ಕ್ಷಣಕ್ಕೆ ಮಾನಸಿಕ ನೆಮ್ಮದಿ ದೊರೆತು, ಸಮಸ್ಯೆಗಳನ್ನು ಎದುರಿಸಲು ಸಾಧ್ಯವಾಗುತ್ತದೆ.

ನಾವು ನಮ್ಮ ಸುತ್ತಲಿನ ವಾತಾವರಣದಲ್ಲಿ ಯಾವುದು ಪರಿಶುದ್ಧವೋ ಅಥವಾ ಯಾವುದು ಮನಸ್ಸನ್ನು ಶುದ್ಧಗೊಳಿಸಬಲ್ಲದೋ ಅಂತಹದನ್ನೇ ಸ್ವೀಕರಿಸಬೇಕು. ಇಲ್ಲವೇ ಅಂತಹ ವಿಚಾರದ ಕಡೆಗೆ ನಮ್ಮ ಮನಸ್ಸನ್ನು ಹೊರಳಿಸಬೇಕು. ಇಂತಹದಕ್ಕೆ ಭಗವಂತನ ಕುರಿತು ಧ್ಯಾನ ಅಗತ್ಯವಾಗಿ ಬೇಕಾಗುತ್ತದೆ. ಏಕೆಂದರೆ ಆಧ್ಯಾತ್ಮದಲ್ಲಿ ಹೀಗೊಂದು ವಚನವಿದೆ. ಯಾರು ಯಾವುದನ್ನು ಕುರಿತು ಧ್ಯಾನಿಸುತ್ತಾರೆಯೋ ಅವರು ಅದೇ ಆಗುತ್ತಾರೆ. ಧ್ಯಾನದಲ್ಲಿ ತೊಡಗಿದಾಗ ಮನಸ್ಸು ಅತ್ತ ಇತ್ತ ಹರಿದಾಡಿದರೆ ಅದನ್ನು ಧ್ಯಾನಿತ ವಿಷಯಕ್ಕೆ ಅವಿಶ್ರಾಂತವಾಗಿ ಒಯ್ದು ನಿಲ್ಲಿಸಬೇಕು.

ಸ್ವಾಮಿ ವಿವೇಕಾನಂದರು ಈ ರೀತಿಯಾಗಿ ಹೇಳುತ್ತಾರೆ: 'ನೀನು ಧ್ಯಾನಕ್ಕೆ ತೊಡಗಿದ್ದರೆ ನಿನ್ನ ಮನಸ್ಸು ನಿಯಂತ್ರಣಕ್ಕೆ ಸಿಕ್ಕದೆ. ಮನಸ್ಸನ್ನು ಹತೋಟಿಗೆ ತಂದುಕೊಳ್ಳದಿದ್ದರೆ ನಿನಗೆ ಧ್ಯಾನ ಸಿದ್ಧಿಸದು'. ಮೊದಲು ಮನಸ್ಸನ್ನು ನಿಗ್ರಹಿಸೋಣ ಆ ನಂತರ ಧ್ಯಾನ ಮಾಡೋಣ ಎಂದೇನಾದರೂ ಅಂದುಕೊಂಡರೆ ನೀನೆಂದೂ ಆಧ್ಯಾತ್ಮದ ಹಾದಿಯಲ್ಲಿ ಮುಂದುವರಿಯಲಾರೆ. ನೀನು ಈ ಎರಡನ್ನೂ ಏಕಕಾಲಕ್ಕೆ ನಿರ್ವಹಿಸಬೇಕು. ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಳ್ಳಬೇಕು. ಧ್ಯಾನವನ್ನು ಮಾಡಬೇಕು. ಇದು ಕಾರ್ಯರೂಪಕ್ಕೆ ಬರಬೇಕಾದರೆ ಮನಸ್ಸನ್ನು ಕಠಿಣ ಅಭ್ಯಾಸದಿಂದ ಮನಸ್ಸನ್ನು ಭಗವಂತನಲ್ಲಿ ನೆಲೆಗೊಳಿಸಬೇಕು. ಮನಸ್ಸಿನೊಳಗೆ ಅನಪೇಕ್ಷಣೀಯವಾದ ಬಯಕೆಗಳ ಅಥವಾ ಗೊಂದಲಗಳು ನುಸುಳಿ ಬರದಂತೆ ಸದಾ ನೋಡಿಕೊಳ್ಳಬೇಕು. ಅಂತಹ ವಿಚಾರಗಳು ನಮ್ಮ ಮನಸ್ಸನ್ನು ತುಂಬಿಕೊಳ್ಳಲು ಪ್ರಯತ್ನಿಸಿದಾಗ ನಮ್ಮ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಿ ಏಕಚಿತ್ತದಿಂದ ಪ್ರಾರ್ಥಿಸಬೇಕು. ಇಂತಹ ಅಭ್ಯಾಸಗಳಿಂದ ಮನಸ್ಸು ನಮ್ಮ ವಶಕ್ಕೆ ಬರುವುದಲ್ಲದೆ ಅದು ಶುದ್ಧವೂ ಆಗುತ್ತದೆ. ಹೀಗಾದಾಗ ನಮ್ಮ ಧ್ಯಾನಕ್ಕೆ ಅರ್ಥ ಬರುತ್ತದೆ. ಧ್ಯಾನದ ಹಿಡಿತ ಸಿಗುವುದರೊಂದಿಗೆ ಮಾನಸಿಕ ನೆಮ್ಮದಿ, ಶಾಂತಿ ಪ್ರಾಪ್ತಿಯಾಗುತ್ತದೆ ಎಂದು ಹೇಳಿದರು.

ಮೌನ ರೋಧನ

✍ ನಿರೀಕ್ಷಾ ಪ್ರಭು
ದ್ವಿತೀಯ ಬಿ.ಕಾಂ 'ಎ'

ಕೊಟ್ಟಿಗೆಯಲ್ಲಿ ಗುರುವಣ್ಣ ಮತ್ತು ಕರಿಯಣ್ಣ ಎಂಬ ಎರಡು ಎತ್ತುಗಳಿದ್ದವು. ಬೆಳಿಗ್ಗೆ ಆಗುತ್ತಿದ್ದಂತೆ ಎಲ್ಲಾ ಜಾನುವಾರುಗಳಿಗಿಂತ ಮೊದಲೇ ಎದ್ದು ಒಡೆಯನ ಹೆಜ್ಜೆ ಸಪ್ಪಳವನ್ನು ಆಲಿಸುತ್ತಾ ನಿಲ್ಲುವುದು ಆ ಎರಡು ಎತ್ತುಗಳ ಪ್ರತಿ ನಿತ್ಯದ ಅಭ್ಯಾಸವಾಗಿತ್ತು.

ಗುರುವಣ್ಣ ಅದೇ ಮನೆಯಲ್ಲಿ ಹುಟ್ಟಿ ಬೆಳೆದುದ್ದರಿಂದ ಹೆಸರಿಗೆ ತಕ್ಕಂತೆ ಗಾಂಭೀರ್ಯ ಸ್ವಲ್ಪ ಜಾಸ್ತಿಯೇ ಇತ್ತು. ಕರಿಯಣ್ಣನನ್ನು ಪಕ್ಕದ ಊರಿನಿಂದ ತರಲಾಗಿತ್ತು. ಕಪ್ಪು ವರ್ಣ, ಕೆಲಸ ಸ್ವಲ್ಪ ನಿಧಾನವಾದರೂ ನಿಷ್ಠಾವಂತ.

ಒಡೆಯ ತುಂಬಾ ಗರ್ವಿಷ್ಠನೂ ಕೋಪಿಷ್ಠನ ಆಗಿದ್ದನು. ತಾನು ಹೇಳಿದ್ದೇ ಆಗಬೇಕೆಂಬ ಭಾವನೆಯನ್ನು ಹೊಂದಿದ್ದನು. ಪ್ರಾಣಿಗಳ ಬಗ್ಗೆ ನಿಗಾ ವಹಿಸುವುದಂತು ದೂರದ ಮಾತು. ಜಾನುವಾರುಗಳನ್ನು ಮನ ಬಂದಂತೆ ದುಡಿಸಿಕೊಳ್ಳುತ್ತಿದ್ದನು.

ಎಂದಿನಂತೆ ಗದ್ದೆಗೆ ಹೋಗಿ ಎರಡು ಗದ್ದೆ ಉತ್ತು, ಸಂತೆಗೆ ಹೋಗಬೇಕೆಂದು ಯೋಚಿಸುತ್ತಾ ಒಡೆಯ ಕೊಟ್ಟಿಗೆಗೆ ಬಂದ. ಆದರೆ ಕರಿಯಣ್ಣ ಇನ್ನೂ ಮಲಗಿಯೇ ಇತ್ತು. ಕರಿಯಣ್ಣನನ್ನು ಎಬ್ಬಿಸಲು ಪ್ರಯತ್ನಿಸಿದ, ಆದರೆ ಏಳಲಿಲ್ಲ. ವಿಪರೀತ ಕೋಪದಿಂದ ಸೋಮಾರಿ..... ಸೋಮಾರಿ..... ಎಂದು ಬೈಯುತ್ತಾ ಅದರ ಬಾಲವನ್ನು ತಿರುಚಿದ. ನೋವಿನಿಂದ ಬೇಕೋ ಬೇಡವೋ ಎಂದು ಕರಿಯಣ್ಣ ಮೆಲ್ಲ ಎದ್ದು ನಿಂತಿತು. ನಂತರ ಅವುಗಳನ್ನು ಅಟ್ಟಿಕೊಂಡು ಗದ್ದೆಗೆ ಹೋದ.

ಎರಡು ಎತ್ತುಗಳ ಹೆಗಲ ಮೇಲೆ ನೊಗ ಇಟ್ಟು, ನೇಗಿಲು ಕಟ್ಟಿದ. ಒಂದು ಗದ್ದೆ ಉತ್ತಾಯಿತು. ಇನ್ನೊಂದು ಗದ್ದೆಗೆ ಇಳಿಸಿದ. ಕರಿಯಣ್ಣನ ನಡಿಗೆಯಲ್ಲಿ ವೇಗ ಇರಲಿಲ್ಲ. ಎರಡೇಟು ಕೊಟ್ಟ, ವೇಗ ಸ್ವಲ್ಪ ಹೆಚ್ಚಿತು. ಅಂತೂ ಇಂತೂ ಎರಡು ಗದ್ದೆ ಉತ್ತ ಬಳಿಕ ಅವುಗಳನ್ನು ಮೇಯಲು ಬಿಟ್ಟು ಸಂತೆಗೆ ಹೋಗಲು ತಡವಾಯಿತೆಂದು ಬೇಗ ಬೇಗ ಮನೆಯತ್ತ ಧಾವಿಸಿ ಸಂತೆಯ ಕಡೆಗೆ ಹೆಜ್ಜೆ ಹಾಕಿದ.

ಸಾಯಂಕಾಲ ಸಂತೆಯಿಂದ ಹಿಂತಿರುಗಿದ ಯಜಮಾನ ಎತ್ತುಗಳನ್ನು ಹುಡುಕಿ ಹೊರಟ. ಗುರುವಣ್ಣ ಆ ಕಡೆ ಈ ಕಡೆ ಓಡಾಡುತ್ತ ಮೇಯುತ್ತಿದ್ದ. ಆದರೆ ಕರಿಯಣ್ಣ ಒಂದೇ ಕಡೆ ಸತ್ತವನಂತೆ ಮಲಗಿಕೊಂಡಿದ್ದ. ಆಗ ಒಡೆಯನಿಗೆ ಗೊತ್ತಾಯಿತು ಈ ಕರಿಯಣ್ಣನಿಗೆ ಏನೋ ಆಗಿದೆ ಎಂದು. ಎಬ್ಬಿಸಿದ, ಕರಿಯಣ್ಣ ಎದ್ದು ನಿಂತು ಮೂತ್ರ ಮಾಡಿತು. ಅದು ರಕ್ತ ವರ್ಣದಿಂದ ಕೂಡಿತ್ತು. ಅಯ್ಯಯ್ಯೋ..... ಜ್ವರ ಬಂದಿದೆ! ಛೆ ಸಂತೆಗೆ ಹೋಗುವ ಮೊದಲೇ ಗೊತ್ತಿದ್ದರೆ ಮದ್ದು ತರಬಹುದಿತ್ತಲ್ಲಾ ಎಂದು ಪರದಾಡಿದ. ನಂತರ ಕೊಟ್ಟಿಗೆಗೆ ತಂದು ತನಗೆ ಗೊತ್ತಾದ ಮದ್ದು ಮಾಡಿದ. ಜ್ವರ ತೀವ್ರವಾಗಿತ್ತು. ಕೆಲಸ ಮಾಡಲಿಲ್ಲ.

ಕರಿಯಣ್ಣ ಬಾಯಾಡಿಸುವುದನ್ನು ನಿಲ್ಲಿಸಿತ್ತು. ಇನ್ನು ಹುಲ್ಲು ತಿನ್ನುವುದಾದರೂ ಹೇಗೆ? ಮೇವಿಲ್ಲ.... ನೀರಿಲ್ಲ..... ಕರಿಯಣ್ಣ ಎದ್ದು ನಿಲ್ಲುವುದು ಸಾಧ್ಯವೇ ಇಲ್ಲದಂತಾಯಿತು. ಆದರೂ ಪ್ರಯತ್ನಿಸಿ ಎದ್ದು ನಿಲ್ಲಲು ಹೋಗಿ ಗಡಗಡ ನಡುಗಿ ಬಿದ್ದೇ ಹೋಯಿತು. ಕಿವಿ ಅಲುಗಾಟ ನಿಂತಿತು. ತೆರೆದ ಕಣ್ಣು ತೆರೆದೇ ಇತ್ತು, ರಕ್ತದ ಬಿಸಿ ಆರ ತೊಡಗಿತ್ತು.

ಮುಂಜಾನೆ ಕಾಗೆಯೊಂದು ಬೇಲಿಯಲ್ಲಿ ಕುಳಿತು ಕಾ..ಕಾ ಎಂದು ತನ್ನ ಬಳಗಕ್ಕೆ ಸುದ್ದಿ ಕೊಟ್ಟಿತು. ಕೊಟ್ಟಿಗೆಯ ಸುತ್ತಲು ದುಃಖ ಮಡುಗಟ್ಟಿತು! ಮರುದಿನ ಗುರುವಣ್ಣ ಎದ್ದು ನೇಗಿಲು ನೋಡುತ್ತಾ ನಿಂತಿತ್ತು. ಕಣ್ಣಲ್ಲಿ ನೀರು ತುಂಬಿತ್ತು! ವಾರಗಟ್ಟಲೆ ಮೌನವ್ರತ ಮಾಡಿತು.

ನಗು ಅತ್ಯುತ್ತಮ ಔಷಧಿಯಾಗಿದೆ

✍ ರಚನಾ ಪ್ರಿಯ
ದ್ವಿತೀಯ ಬಿ.ಕಾಂ. 'ಎ'

'ನಗು' ಒಂದು ಅತ್ಯುತ್ತಮ ಔಷಧಿಯಾಗಿದೆ. ನಗುವಾಗ ನಾವು ಹಲವಾರು ಕಾಯಿಲೆಗಳಿಂದ ವೇಗವಾಗಿ ಚೇತರಿಸಿಕೊಳ್ಳ ಬಹುದು ಮತ್ತು ಆರೋಗ್ಯಕರ ಜೀವನವನ್ನು ಪಡೆಯಬಹುದು. ನಗುವುದರಿಂದ ನಾವು ಸಂಪೂರ್ಣವಾಗಿ ಯಾವುದೇ ಕಾಯಿಲೆಯಿಂದ ಚೇತರಿಸಿಕೊಳ್ಳದೆ ಇರಬಹುದು ಆದರೆ ನಗುವುದರಿಂದ ನಮ್ಮ ಮನಸ್ಸು ಮತ್ತು ಹೃದಯವನ್ನು ಖುಷಿಯಾಗಿ ಇಟ್ಟುಕೊಂಡು ಕಾಯಿಲೆಯನ್ನು ದೂರ ಮಾಡುವುದರಲ್ಲಿ ಯಶಸ್ವಿಯಾಗಿಸುತ್ತದೆ. ನಗು ರಕ್ತದ ಕಾರ್ಯವನ್ನು ಸುಧಾರಿಸುತ್ತದೆ ಮತ್ತು ನಮ್ಮ ದೇಹದಲ್ಲಿ ರಕ್ತದ ಹರಿವನ್ನು ಹೆಚ್ಚಿಸುತ್ತದೆ. ಇದು ಹೃದಯಾಘಾತ ಮತ್ತು ಇತರ ರೋಗಗಳ ವಿರುದ್ಧ ರಕ್ಷಿಸಲು ಸಹಾಯ ಮಾಡುತ್ತದೆ.

ನಗು ಯೋಗವು ಖಿನ್ನತೆ, ಒತ್ತಡ ಮತ್ತು ಆತಂಕಗಳಿಗೆ ವಿಶ್ವಾಸಾರ್ಹ ಚಿಕಿತ್ಸೆಯಂತೆ ಜಗತ್ತಿನಾದ್ಯಂತ ಮನಸ್ಸು ದೇಹದ ವ್ಯಾಯಾಮವನ್ನು ಪಡೆಯುತ್ತದೆ. ನಗು ಚಿಕಿತ್ಸೆಗಳಿಂದ ಲಾಭ ಮತ್ತು ಚೇತರಿಸಿಕೊಳ್ಳುವ ಹಲವಾರು ಜನರಿದ್ದಾರೆ. ಇದು ನಮ್ಮ ಆರೋಗ್ಯವನ್ನು ಸುಧಾರಿಸುವ ರೀತಿಯ ವ್ಯಾಯಾಮ.

ಇಂದಿನ ಜಗತ್ತಿನಲ್ಲಿ, ಖಿನ್ನತೆಯಿಂದ ಬಳಲುತ್ತಿರುವ ಕುಟುಂಬ, ಸ್ನೇಹಿತರು ಮತ್ತು ವಿನೋದದಲ್ಲಿನ ಆಸಕ್ತಿಯ ಕೊರತೆ, ಮನಸ್ಸಲ್ಲಿರುವ ಸ್ಥಿತಿಯಲ್ಲಿ ನೀವು ನಿಮ್ಮನ್ನು ಪ್ರತ್ಯೇಕಿಸಿ. ನಮ್ಮ ಸುತ್ತಲಿನ ಬಹಳಷ್ಟು ಜನರು ಯಾವಾಗಲೂ ದುಃಖ ಮತ್ತು ಖಿನ್ನತೆಗೆ ಒಳಗಾಗಿದ್ದಾರೆ. ಅವರಿಗೆ ನಗುವುದೇ ಒಂದು ಕಷ್ಟಕರವಾದ ಕೆಲಸ ಅಂತವರಿಗೆ ಲಾಫ್ಟರ್ ಥೆರಪಿ ಯಾವಾಗಲೂ ವೇಗವಾಗಿ ಗುಣ ಪಡಿಸಲು ಸಹಾಯ ಮಾಡುತ್ತದೆ. ನಗುವುದು ತಕ್ಷಣ ವ್ಯಕ್ತಿಯ ಮನಸ್ಥಿತಿಯನ್ನು ಹರ್ಷ ಚಿತ್ತದಿಂದ ಬದಲಾಯಿಸಬಹುದು ಮತ್ತು ನೀವು ನಗುವಾಗ ನಕಾರಾತ್ಮಕ ಭಾವನೆಗಳನ್ನು ಅನುಭವಿಸುವುದು ಕಷ್ಟ. ನಗುವುದು ಸಾಮಾನ್ಯವಾಗಿ ಗುಂಪಿನ ಚಟುವಟಿಕೆ ಮತ್ತು ಸಂತೋಷವನ್ನು ಹಂಚಿಕೊಳ್ಳುವುದು ಸಂತೋಷವನ್ನು ಹೆಚ್ಚಿಸುತ್ತದೆ. ಇದು ಸಾಮಾಜಿಕ ಸಂಪರ್ಕದ ಮೂಲಕ ನಮ್ಮ ಮನಸ್ಥಿತಿಯನ್ನು ಹೆಚ್ಚಿಸುತ್ತದೆ ಮತ್ತು ಒಂಟಿತನ ಭಾವನೆ ಕಡಿಮೆಯಾಗುತ್ತದೆ. ಸಂತೋಷವನ್ನು ಸಮಾಜೀಕರಿಸುವುದು ಮತ್ತು ಹಂಚಿಕೊಳ್ಳುವುದು ಒತ್ತಡ ಮತ್ತು ಖಿನ್ನತೆಯಿಂದ ಉಂಟಾದ ಹಾನಿಗೆ ದುರಸ್ತಿ ಮಾಡಲು ಸಹಾಯ ಮಾಡುತ್ತದೆ. ನಗು ಒಂದು ಜಗತ್ತಿನ ಅತ್ಯುತ್ತಮ ಭಾವನೆ. ಇದು ಜೀವನಕ್ಕೆ ತುಂಬಾ ಉತ್ಸುಕವಾಗುತ್ತಿದೆ. ಇಂದು ಸ್ಮೈಲ್, ಸ್ವಲ್ಪ ಮುಸುಮುಸು ಅಥವಾ ಒಂದು ಜೋರಾಗಿ ನಗು ಎಂದು ಸಂಪೂರ್ಣವಾಗಿ ಮನಸ್ಥಿತಿ ಮತ್ತು ವಾತಾವರಣವನ್ನು ಬದಲಾಯಿಸುತ್ತದೆ. ನಗುವುದರಿಂದ ಒತ್ತಡ ಹಾರ್ಮೋನುಗಳನ್ನು ಕಡಿಮೆ ಮಾಡುತ್ತದೆ, ಹೃದಯ ರಕ್ತನಾಳದ ಆರೋಗ್ಯವನ್ನು ಸುಧಾರಿಸುತ್ತದೆ.

ಪ್ರತಿ ದಿನ ನಮ್ಮ ಜೀವನದಲ್ಲಿ ನಗುವ ಅವಕಾಶವನ್ನು ಉಪಯೋಗಿಸಿಕೊಂಡು ನಮ್ಮ ಸುತ್ತಮುತ್ತಲಿನ ಎಲ್ಲರಿಗೂ 'ನಗೆ' ಎಂಬ ನೈಸರ್ಗಿಕ ಔಷಧವನ್ನು ಹಂಚೋಣ.

ಓ ಗುರುವೇ ನಿಮಗೆ ನಮನ

✍ ಮಧುಶ್ರೀ ಎಚ್. ಕೆ
ಪ್ರಥಮ ಬಿ.ಕಾಂ. 'ಬಿ'

ಅಜ್ಞಾನದ ಕತ್ತಲನು ಕಳೆದು
ಜ್ಞಾನದ ಬೆಳಕನು ಹರಿಸಿ
ಸನ್ಮಾರ್ಗದಲ್ಲಿ ನಡೆಯುವ
ಮಾರ್ಗವ ತೋರುವ
ಓ ಗುರುವೇ ನಿಮಗೆ ಇದೋ ನನ್ನ ನಮನ

ತಾಯಿಯಂತೆ ಪ್ರೀತಿ ತೋರಿ
ತಂದೆಯಂತೆ ಅಭಯ ನೀಡಿ
ಮುಗ್ಧ ಮಗುವಿಗೆ ಬಂಧುವಾದ
ಓ ಗುರುವೇ ನಿಮಗೆ ಇದೋ ನನ್ನ ನಮನ

ಸೂರ್ಯ ಚಂದ್ರರಿಗೂ ಕಡಿಮೆ ಇಲ್ಲದ ಬೆಳಕಾಗಿ
ಸಾಕ್ಷರ ಬಾಳಿನ ಅಡಿಗಲ್ಲಾಗಿ
ಜೀವನ ಪ್ರೀತಿಯ ಬೆಳೆಸುವ ಕುಸುಮವಾದ
ಓ ಗುರುವೇ ನಿಮಗೆ ಇದೋ ನನ್ನ ನಮನ

ಸಮಾಜದ ನಡೆಗೆ ದಾರಿಯಾಗಿ
ಭೇದ ತೋರದ ಜ್ಯೋತಿಯಾಗಿ
ನಿಜ ರೂಪದ ದೇವ ಸ್ವರೂಪಿಯಾದ
ಓ ಗುರುವೇ ನಿನಗೆ ಇದೋ ನನ್ನ ನಮನ

ನಗೆಹನಿ

✍ ಮೇಘ
ಪ್ರಥಮ ಬಿ.ಕಾಂ. 'ಬಿ'

ತಂದೆ : Result ಏನಾಯಿತೋ?
ಮಗ : Headmaster ಮಗನು ಕೂಡ fail ಆಗಿದ್ದಾನೆ..
ತಂದೆ : ನೀನು....
ಮಗ : Doctor ಮಗನು fail…
ತಂದೆ : ನಿನ್ನ Result ಏನಾಯಿತು....
ಮಗ : Lawyer ಮಗನು fail
ತಂದೆ : ಮುಂಡೆದೇ, ನಿನ್ನ Result ಏನಾಯಿತು ಬೊಗಳು.....
ಮಗ : ನೀನೇನು Superstar Rajnikanth, ಅಂದು ಕೊಂಡಿದೀಯ, ನಿನ್ನ ಮಗನೂ fail!!!

ಹಿಂದಿನ ಜಗತ್ತು ಹಾಗೂ ಇಂದಿನ ಜಗತ್ತು

✍ ಪ್ರತೀಕ್ಷಾ ಬಿ
ಪ್ರಥಮ ಬಿ.ಕಾಂ. 'ಎ'

ಹಿಂದಿನ ಕಾಲದಲ್ಲಿ ಮನುಷ್ಯರು ಸಹಬಾಳ್ವೆಯಿಂದ ಒಬ್ಬನ್ನೊಬ್ಬರು ಅರ್ಥಮಾಡಿಕೊಂಡು ತಮ್ಮ ನೋವುಗಳನ್ನು ಹಂಚಿ ಕೊಳ್ಳುತ್ತಿದ್ದರು. ಆದರೆ ಈಗ ಎಲ್ಲವೂ ಬದಲಾಗಿದೆ. ಈಗ ಎಲ್ಲಾ ಮಾನವರು ಕೆಲಸದಲ್ಲಿ ಮಗ್ನರಾಗಿದ್ದಾರೆ ತಮ್ಮ ನೋವುಗಳನ್ನು ಯಾರ ಬಳಿಯೂ ಹಂಚಿಕೊಳ್ಳುವುದಿಲ್ಲ. ತಮ್ಮ ನೋವುಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕೊರಗುತ್ತಾರೆ. ಹಿಂದಿನ ಕಾಲದಲ್ಲಿ ಮನೆಗೆ ನೆಂಟರು ಬಂದರೆ ಮೊದಲಿಗೆ ಕಾಲು ತೊಳೆಯಲು ನೀರು ಕೊಟ್ಟು, ಬೆಲ್ಲ ಕೊಟ್ಟು ಕುಡಿಯಲು ನೀರು ಕೊಡುತ್ತಿದ್ದರು. ಇಂದಿನ ಕಾಲದಲ್ಲಿ ನೆಂಟರು ಬಂದರೆ ಫಿಜಾ ಹಾಗೂ ಕುಡಿಯಲು ಕೊಕ್ಕಾಕೊಲ ನೀಡುತ್ತಾರೆ.

ಹಿಂದಿನ ಕಾಲದಲ್ಲಿ ಮಕ್ಕಳಿಗೆ ಒಂದು ರೂಪಾಯಿಯಲ್ಲಿ ನಾಲ್ಕು–ಐದು ತಿಂಡಿ ತಿನಿಸುಗಳು ಸಿಗುತ್ತಿತ್ತು. ಅವು ಯಾವುವೆಂದರೆ ಚಾಕಲೇಟ್, ಜೀರಿಗೆ ಮಿಠಾಯಿ ಮುಂತಾದವು. ಆದರೆ ಈಗಿನ ಕಾಲದ ಮಕ್ಕಳಿಗೆ ದುಬಾರಿ ಬೆಲೆಯ ಡೈರಿಮಿಲ್ಕ್, ಮಂಚ್, ಲೇಸ್, ಬರ್ಗರ್ ಬೇಕೇ ಬೇಕು.

ಮಕ್ಕಳು ಆಡುತ್ತಿದ್ದ ಆಟ:

ಹಿಂದಿನ ಮಕ್ಕಳು ಕಣ್ಣು ಮುಚ್ಚಾಲೆ, ಮರಕೋತಿ ಆಟ, ಕೆರೆ ದಡ, ಲಗೋರಿ, ಕಬಡ್ಡಿ, ಚೌಕಬಾರ, ಕುಂಟೆ ಬಿಲ್ಲೆ ಮುಂತಾದ ಆಟಗಳನ್ನು ಆಡುತ್ತಿದ್ದರು. ಅದರೆ ಈಗೀನ ಮಕ್ಕಳು ಮೊಬೈಲ್ ಲಾಪ್ ಟಾಪ್‌ಗಳಲ್ಲಿ ಮನೆಯ ಒಳಗೆ ಕುಳಿತು ಆಟವಾಡುತ್ತಾರೆ. ಏಕೆಂದರೆ ಈಗಿನ ಕಾಲದಲ್ಲಿ ಆಟವಾಡಲು ಅಂಗಳಗಳಿಲ್ಲ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸವಾಗಿರುತ್ತಾರೆ. ಮಕ್ಕಳಿಗೆ ಆಟವಾಡಲು ತುಂಬಾ ಕಷ್ಟವಾಗಿದೆ.

ಆಗಿನ ಮನೆ ಈಗಿನ ಮನೆ:

ಹಿಂದಿನ ಕಾಲದಲ್ಲಿ ಮನೆಗೆ ಪಕ್ಕದ ಮನೆಯವರು. ಎದುರುಗಡೆಯ ಮನೆಯವರು, ಎಲ್ಲಾ ಮನೆಯವರು ಸೇರಿಕೊಂಡು ತಮ್ಮ ತಮ್ಮ ಮಾತುಕತೆಗಳನ್ನು ವಿಚಾರಿಸಿ ಕೊಳ್ಳುತ್ತಿದ್ದರು ಆದರೆ ಈ ಕಾಲದಲ್ಲಿ ಚಂದ್ರನಲ್ಲಿ ಯಾರಿದ್ದಾರೆ ಎಷ್ಟು ಜಾಗವಿದೆ ಎಂದು ತಿಳಿಯಲು ಹೋಗಿದ್ದಾರೆ. ಆದರೆ ನಮ್ಮ ಪಕ್ಕದ ಮನೆಯಲ್ಲಿ ಯಾರಿದ್ದಾರೆ ಎಂದು ಗೊತ್ತಿಲ್ಲ. ಹಿಂದಿನ ಕಾಲದಲ್ಲಿ ಯಕ್ಷಗಾನ ಬಯಲಾಟವನ್ನು ವೀಕ್ಷಿಸಲು ದೂರದಿಂದ ಬರಿ ಕಾಲಿನಲ್ಲಿ ಚಪ್ಪಲಿ ಇಲ್ಲದೇ ಯಕ್ಷಗಾನವನ್ನು ವೀಕ್ಷಿಸಲು ಹೋಗುತ್ತಿದ್ದರು, ಆದರೆ ಈಗಿನ ಕಾಲದಲ್ಲಿ ಜನರಿಗೆ ಅದು ಯಾವುದೂ ಬೇಡ ಮನೆಯಲ್ಲಿ ಟಿ.ವಿ.ಯಲ್ಲಿಯೇ ನೋಡಿ ಸಮಾಧಾನ ವ್ಯಕ್ತಪಡಿಸುತ್ತಾರೆ.

ಕತ್ತಲೆಯಲ್ಲಿ ಮೂರು ಜನ ಕೈದಿಗಳು

✍ **ನಿತೀನ್ ಲೋಬೊ**
ದ್ವಿತೀಯ ಬಿ.ಕಾಂ. 'ಎ'

ಒಂದು ದಿನ ಸೈನಿಕರು ಮೂರು ಜನರನ್ನು ಹಿಡಿದು ರಾಜನ ಮುಂದೆ ತಂದು ನಿಲ್ಲಿಸಿದರು. ಅವರು ಮೂವರೂ ಕಳ್ಳರೆಂದೂ ಹೇಳಿ ಪುರಾವೆಗಳನ್ನು ನೀಡಿದರು. ರಾಜನಿಗೂ ಅದು ಹೌದೆನಿಸಿತು. ಇವರನ್ನು ಸಾಧಾರಣವಾದ ಕಾರಾಗೃಹದಲ್ಲಿ ಇರಿಸುವುದಕ್ಕಿಂತ ವಿಶೇಷವಾದ ಕಾರಾಗೃಹದಲ್ಲಿ ಇಡುವುದು ಸರಿ ಎಂದು ಶಿಕ್ಷೆ ವಿಧಿಸಿದ.

ಸೈನಿಕರು ಮೂವರನ್ನೂ ವಿಶೇಷ ಜೈಲಿಗೆ ಕರೆದೊಯ್ದರು. ಇವರು ಒಂದಾದ ಮೇಲೊಂದರಂತೆ ಐದಾರು ಬಾಗಿಲುಗಳನ್ನು ದಾಟಿ ಹೋಗಬೇಕಾಯಿತು. ದಾರಿಯಲ್ಲಿ ಅಲ್ಲೊಂದು ಇಲ್ಲೊಂದು ದೀಪದ ಬೆಳಕು. ಕೊನೆಗೆ ಅವರು ನೆಲಮಾಳಿಗೆಗೆ ಇಳಿದರು. ಕೆಳಗೆ ಬೆಳಕಿನ ಒಂದು ಕಿರಣವೂ ಇಲ್ಲ. ತಾವು ಎಲ್ಲಿದ್ದೇವೆ, ತಾವಿರುವ ಕೊಠಡಿ ಎಷ್ಟು ದೊಡ್ಡದು ಯಾವುದೂ ಕಾಣುತ್ತಿರಲಿಲ್ಲ. ಸೈನಿಕರು ಇವರನ್ನು ಇಳಿಸಿದ ಮೇಲೆ ಮುಚ್ಚಳವನ್ನು ಮುಚ್ಚುವ ಮೊದಲು ಕೂಗಿ ಹೇಳಿದರು: "ನಿಮಗೆ ಬೇಕಾಗುವಷ್ಟು ಊಟ ಹಾಗೂ ಹಾಸಿಗೆ ಕೋಣೆಯೊಳಗಿವೆ. ಬೇಕಾದಾಗ ಬಳಸಿಕೊಳ್ಳಿ." ಮುಚ್ಚಳ ಮುಚ್ಚಿದ ನಂತರ ಕಣ್ಣುಜ್ಜಿಕೊಂಡರೂ ಮುಂದೆಯೇ ಇದ್ದವರೂ ಕಾಣುತ್ತಿರಲಿಲ್ಲ. ನೆಲದ ಮೇಲೆ ಏನಿದೆಯೋ, ಆಹಾರವನ್ನೆಲ್ಲ ಎಲ್ಲಿ ಇಟ್ಟಿದ್ದಾರೊ, ಹಾಸಿಗೆ ಎಲ್ಲಿದೆಯೋ ಎಂದು ಹುಡುಕಲು ಕೈಚಾಚಿ ತಡಕಾಡಿ ನೋಡಿದರು. ಒಬ್ಬರು ಇನ್ನೊಬ್ಬರನ್ನು ಮುಟ್ಟಿದರು, ಗೋಡೆಗೆ ತಲೆ ತಾಗಿ ಪೆಟ್ಟು ಮಾಡಿಕೊಂಡರು. ಯಾವನೋ ಒಬ್ಬ ನೀರು ತುಂಬಿದ್ದ ಪಾತ್ರೆಗೆ ಕಾಲು ತಗುಲಿಸಿ ಅದನ್ನು ಉರುಳಿಸಿಬಿಟ್ಟ. ನೆಲವೆಲ್ಲ ನೀರು ನೀರಾಯಿತು. ಉಳಿದ ಇಬ್ಬರು ಆತನನ್ನು ಚೆನ್ನಾಗಿ ಬೈದರು. ಒಬ್ಬನಿಗೆ ತಲೆಕೆಟ್ಟು ಹೋಯಿತು. ಕೈಕಾಲು ಆಡಿಸಿ ಇದ್ದುದರಲ್ಲೇ ಒಣಗಿದ್ದ ಜಾಗದಲ್ಲಿ ಮುದುರಿಕೊಂಡು ಮಲಗಿಬಿಟ್ಟ. ತಡಕಾಡುತ್ತಿದ್ದ ಇನ್ನೊಬ್ಬ ಇವನನ್ನು ಎಡವಿ ಮೇಲೆ ಬಿದ್ದ. ಮತ್ತೆ ಜಗಳ ಪ್ರಾರಂಭವಾಯಿತು.

ಗಲಾಟೆಯಾದ ಮೇಲೆ ಮೂವರೂ ಸುಮ್ಮನೇ ಕುಳಿತರು. ಒಬ್ಬ ಹೇಳಿದ, "ಸ್ನೇಹಿತರೇ, ಇಂಥ ಕೆಟ್ಟ ಶಿಕ್ಷೆ ನಮಗೆಂದೂ ದೊರಕಿರಲಿಲ್ಲ. ನನ್ನ ತಲೆ ಓಡುತ್ತಲೇ ಇಲ್ಲ. ನಾನೊಂದು ಮೂಲೆಯಲ್ಲಿ ಮಲಗಿಬಿಡುತ್ತೇನೆ. ಇಲ್ಲಿ ಕಣ್ಣು ಮುಚ್ಚಿದರೂ ಒಂದೇ, ತೆರೆದರೂ ಒಂದೇ, ನನ್ನನ್ನೂ ಮಾತನಾಡಿಸಬೇಡಿ" ಇನ್ನೊಬ್ಬ ಹೇಳಿದ, "ಹಾಗೆ ಮಲಗಿದರೆ ಏನು ಪ್ರಯೋಜನ? ಎಷ್ಟು ಹೊತ್ತು ಮಲಗಿರಲು ಸಾಧ್ಯ? ಹಸಿವೆಯಾಗುವುದಿಲ್ಲವೇ? ಅದಕ್ಕೆ ನಾನು ನಿಧಾನವಾಗಿ ತೆವಳುತ್ತಾ ಆ ಕಡೆಗೆ, ಈ ಕಡೆಗೆ ಹೋಗಿ ಆಹಾರ ಇಟ್ಟಿರುವ ಪಾತ್ರೆಗಳನ್ನು ಹುಡುಕುತ್ತೇನೆ. ಎಲ್ಲರೂ ಓಡಾಡುತ್ತಿದ್ದರೆ ನಮಗೆ ನಾವೇ ಹಾಯ್ದುಕೊಳ್ಳುತ್ತೇವೆ" ಹೀಗೆ ಹೇಳಿ ಆತ ನಿಧಾನವಾಗಿ ಹುಟುಕಾಟ ಪ್ರಾರಂಭಿಸಿದೆ. ಆದರೆ ಮೂರನೆಯವನ ಸದ್ದೇ ಇಲ್ಲ. ಅವನು ಮಾತು ಆಡುತ್ತಿಲ್ಲ. ಅವನೆಲ್ಲಿ ಎಚ್ಚರ ತಪ್ಪಿ ಬಿದ್ದನೋ ಎಂಬ ಕಾಳಜಿಯಿಂದ "ನೀನೇನು ಮಾಡುತ್ತಿದ್ದೀಯಾ? ಎಚ್ಚರವಾಗಿದ್ದೀ ತಾನೆ?" ಎಂದು ಕೇಳಿದ ಎರಡನೆಯವನು. ಮೂರನೇಯವನು ಹೇಳಿದ, "ನೀವಿಬ್ಬರೂ ಹುಚ್ಚರೇ. ಇರುವುದಕ್ಕೆ ಹೊಂದಿಕೊಂಡು ಹೋಗಲು ನೋಡುತ್ತಿದ್ದೀರಿ. ನಾನು ನಿಧಾನವಾಗಿ ಪ್ರತಿಯೊಂದು ಗೋಡೆಗೆ ಹೋಗಿ, ಕಿವಿ ಹಚ್ಚಿ ಸಪ್ಪಳ ಕೇಳಿ ಯಾವುದು ಹೊರಗಿನ ಗೋಡೆ ಎಂಬುದನ್ನು ಪತ್ತೆ ಹಚ್ಚಿದ್ದೇನೆ. ಈಗಾಗಲೇ ನನ್ನ ಕೈಗೆ ಒಂದು ದೊಡ್ಡ ಚಾಕು ಸಿಕ್ಕಿದೆ. ಅದನ್ನು ಬಳಸಿ ನಿಧಾನವಾಗಿ ಗೋಡೆಗೆ ತೂತು ಮಾಡುತ್ತೇನೆ. ಆಗ ಒಳಗೆ ಬಿದ್ದ ಸೂರ್ಯನ ಬೆಳಕನ್ನು ಕಂಡು ಮನಸ್ಸು ಹಗುರವಾಗುತ್ತದೆ.

ನಮ್ಮ ಜೀವನದಲ್ಲೂ ಇದೇ ಮೂರು ತರಹದ ಜನರಿದ್ದಾರೆ. ಭೃಷ್ಟತೆ, ಜಾತೀಯತೆ, ಸ್ವಾರ್ಥತೆಗಳಿಂದ, ಕತ್ತಲಾದಂತೆ ಇರುವ ಜಗತ್ತಿನಲ್ಲಿ ಕೆಲವರು ಅದಕ್ಕೆ ಹೊಂದಿಕೊಂಡು ಆಯುಷ್ಯ ಕಳೆಯುತ್ತಾರೆ. ಎರಡನೆಯ ವಿಭಾಗದವರು ಈ ಕತ್ತಲೆಯಲ್ಲಿ ತಡಕಾಡಿ ಇರುವುದರಲ್ಲೇ ಒಳ್ಳೆಯ ವ್ಯವಸ್ಥೆಯನ್ನು ಕಲ್ಪಿಸುತ್ತ, ಸ್ವಲ್ಪ ಹೊಂದಾಣಿಕೆ, ಮಾಡುತ್ತಾ ಸಾಗುತ್ತಾರೆ. ಮೂರನೇಯ ವಿಭಾಗದವರು ಮಾತ್ರ ಕತ್ತಲೆಯನ್ನು ಶಾಶ್ವತವಾಗಿ ಹೋಗಲಾಡಿಸಲು ಜ್ಞಾನದ, ತ್ಯಾಗದ, ಸೇವೆಯ ಬೆಳಕನ್ನು ಒಳತರಲು ಪ್ರಯತ್ನಿಸುತ್ತಾರೆ. ಅಂಥವರಿಂದ ನಮ್ಮ ಬಾಳು ಬೆಳಕಾಗುತ್ತದೆ.

ಮುಂಜಾನೆ



✍ ಬಿ. ಜೆ. ತೇಜಸ್ವಿನಿ
ದ್ವಿತೀಯ ಬಿ.ಕಾಂ. 'ಬಿ'

ಬಾನಿನಂಗಳದಲ್ಲಿ ರವಿ ಮೂಡಿ ಬಂದ
ಬೆಚ್ಚನೆ ಮಲಗಿದ್ದ ಕೆನ್ನೆಯನು ಮುದ್ದಿಸುತ
ಬೆಳಗಾಯಿತೇಳೆಂದು ಎಚ್ಚರಿಸುತ

ಹಕ್ಕಿಗಳು ಮೈ ಮರೆತು ಮೀಯುತಿವೆ
ತಾವರೆ ಕೊಳದಲಿ ಚಿಲಿಪಿಲಿ ಎಂದು
ಉದಯರಾಗವ ಹಾಡುತ

ಮಧುಹೀರ ಬರುತಿವೆ ದುಂಬಿಗಳ ದಂಡು
ಅರಳಿ ನಗುತಿರುವ ಹೂವುಗಳ ಕಂಡು
ತೊನೆಯುತಿದೆ ಮರಗಿಡಗಳು ಉಲ್ಲಾಸದಿಂದ

ಎಲ್ಲೆಲ್ಲೂ ತುಂಬಿಹುದು ನವೋಲ್ಲಾಸದ ಗುಂಗು
ಬಾನಲ್ಲಿ ಕಲಸಿಹುದು ಬಣ್ಣ ಬಣ್ಣದ ರಂಗು
ಕವಿ ಮನಕೆ ತುಂಬುತಿದೆ ಗುಂಗು

ಮುಂಜಾನೆಯ ಈ ಸೊಬಗು
ಕಣ್ಣು ತುಂಬಲು ಬೇಕು
ನಿತ್ಯ ನೋಡುವ ದೃಶ್ಯ
ನಿತ್ಯ ನೂತನವಿಹುದು
ಬಾಳಿನಲ್ಲಿ ಉಲ್ಲಾಸ ಉತ್ಸಾಹ ತುಂಬುತಿಹುದು.

ಅಮ್ಮ

✍ ಅನ್ನಪೂರ್ಣ
ಪ್ರಥಮ ಬಿ.ಕಾಂ. 'ಎ'

ಮನದ ದುಗುಡವ ಹೇಳದೇನೆ ಮನಸ್ಸನ್ನು
ಅರಿಯುವವಳೇ ಅಮ್ಮ...
ಬಿಕ್ಕಿ ಅಳುವ ಮೊದಲೇನೆ ಕಣ್ಣೀರಿಗೆ ಅಣೆಕಟ್ಟು
ಕಟ್ಟುವವಳೇ ಅಮ್ಮ...
ನಾ ಅರಿಯುವ ಮುನ್ನವೇ ಲೋಕವ ಪರಿಚಯ
ಮಾಡಿದವಳೇ ಅಮ್ಮ..
ಮರು ಜನುಮವೆಂಬುದು ಇದ್ದರೆ ಮತ್ತೆ ನಿನ್ನ ಕಂದನಾಗಿ
ಹುಟ್ಟಿಬರಲೇ ಅಮ್ಮ...?

ಮನಸ್ಸಿದ್ದರೆ ಮಾರ್ಗ



ಗಿಡುಗವು ಒಂದು ವಿಕಾರ ಹಾಗೂ ಕ್ರೂರ ಪಕ್ಷಿ. ಹಾಗೆಯೇ ಗಿಡುಗವು ಅಪಶಕುನ ಎಂಬುದು ಕೆಲವರ ನಂಬಿಕೆ. ಗಿಡುಗ ಕೂಗುವುದನ್ನು ಕೂಡ ಅಪಶಕುನ ಎನ್ನುತ್ತಾರೆ. ಆದರೆ ಈ ಲೇಖನವು ಗಿಡುಗನ ಪ್ರಯತ್ನವನ್ನು ಹೇಳುತ್ತದೆ.

ಗಿಡುಗಗಳಿಗೆ ಎತ್ತರಕ್ಕೆ ಹಾರುವುದೆಂದರೆ ತುಂಬಾ ಇಷ್ಟ. ಅವು ಎಲ್ಲಾ ಪಕ್ಷಿಗಳಿಗಿಂತ ಬಹು ಎತ್ತರಕ್ಕೆ ಹಾರುತ್ತವೆ ಮತ್ತು ಅವುಗಳ ದೃಷ್ಟಿ ತುಂಬಾ ಸೂಕ್ಷ್ಮ. ಸಾಮಾನ್ಯವಾಗಿ ಗಿಡುಗಗಳು 70 ವರ್ಷಗಳವರೆಗೆ ಬದುಕುತ್ತವೆ ಆದರೆ ಅವುಗಳಿಗೆ 30 ರಿಂದ 40 ವರ್ಷ ಆಗುವಾಗ ಅವುಗಳ ಕೊಕ್ಕು ಬಾಗಿ ಅದರ ಹರಿತವನ್ನು ಕಳೆದುಕೊಳ್ಳುತ್ತದೆ, ಉಗುರುಗಳು ಉದ್ದವಾಗಿ ಬೆಳೆಯುತ್ತದೆ ಮತ್ತು ಅವುಗಳ ರೆಕ್ಕೆಯ ಗರಿಗಳು ಹೆಚ್ಚಾಗುತ್ತವೆ. ಇದರಿಂದ ಅವುಗಳಿಗೆ ಹಾರಲು ಮತ್ತು ಆಹಾರ ಸೇವಿಸಲು ಕಷ್ಟವಾಗುತ್ತದೆ. ಹೀಗಿರುವಾಗ ಗಿಡುಗಗಳಿಗೆ ಎರಡು ಆಯ್ಕೆಗಳಿರುತ್ತವೆ. ಅವೇನೆಂದರೆ ಒಂದು ಸಾಯುವುದು, ಇನ್ನೊಂದು 5 ತಿಂಗಳುಗಳ ಕಾಲ ನೋವನ್ನು ಅನುಭವಿಸಿ ನಂತರ ಸುಖವನ್ನು ಅನುಭವಿಸುವುದು.

ಹೀಗಿರುವಾಗ ಗಿಡುಗಗಳು 5 ತಿಂಗಳುಗಳ ಕಾಲ ನೋವನ್ನು ಅನುಭವಿಸಲು ಸಿದ್ಧವಾಗಿ ದೂರದ ತನ್ನ ಗೂಡಿರುವ ಸ್ಥಳಕ್ಕೆ ಹೋಗಿ ಅಲ್ಲಿರುವ ದೊಡ್ಡ ದೊಡ್ಡ ಬಂಡೆಕಲ್ಲುಗಳಿಗೆ ತನ್ನ ಬಾಗಿದ ಕೊಕ್ಕನ್ನು ಬಡಿದು ಬುಡದಿಂದಲೇ ಕಿತ್ತು ತೆಗೆಯುತ್ತದೆ. ಸ್ವಲ್ಪ ದಿನಗಳ ನಂತರ ಅದಕ್ಕೆ ಹೊಸ ಕೊಕ್ಕು ಬೆಳೆಯುತ್ತದೆ. ನಂತರ ತನ್ನ ಕೊಕ್ಕಿನ ಸಹಾಯದಿಂದ ಅದರ ಉದ್ದನೆಯ ಉಗುರುಗಳನ್ನು ಕಿತ್ತು ತೆಗೆಯುತ್ತದೆ ಮತ್ತು ತನ್ನ ಉಗುರು ಬಂದ ನಂತರ, ಕೊಕ್ಕು ಮತ್ತು ಉಗುರಿನ ಸಹಾಯದಿಂದ ತನ್ನ ಗರಿಗಳನ್ನು ಕಿತ್ತು ತೆಗೆಯುತ್ತದೆ. ಹೀಗೆ 5 ತಿಂಗಳುಗಳ ನೋವು ಸಂಕಟದಿಂದ ಹೊರಬಂದು ಮುಂದಿನ 30 ವರ್ಷಗಳನ್ನು ಸುಖವಾಗಿ ಸಂತೋಷವಾಗಿ ತನ್ನವರೊಂದಿಗೆ ನೆಮ್ಮದಿಯಿಂದ ತನ್ನ ಜೀವನವನ್ನು ಸಾಗಿಸುತ್ತದೆ.

✍ **ಮೇಘ ಎಸ್.**
ತೃತೀಯ ಬಿ.ಬಿ.ಎ

ಈ ಕಥೆಯ ಅನುಗುಣವಾಗಿ, ಮನುಷ್ಯರಾದ ನಾವು ಕೂಡ ನಮ್ಮ ಜೀವನದ ಗುರಿಯನ್ನು ತಲುಪಬೇಕು. ಹಾಗೆಯೇ ಧೈರ್ಯದಿಂದ ಧೃತಿಗೆಡದೆ ಜೀವನದಲ್ಲಿ ಮುನ್ನುಗ್ಗಬೇಕು. ಮನುಷ್ಯ ಮನಸ್ಸು ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಹುದು ಮತ್ತು ಎಷ್ಟೇ ಕಷ್ಟಗಳು, ನೋವುಗಳು, ಸವಾಲುಗಳು ಎದುರಾದರೂ ಅದಕ್ಕೆಲ್ಲ ಭಯಪಡದೆ ಎದುರಿಸಬೇಕು. ಧೈರ್ಯದಿಂದ, ಯಾವುದಕ್ಕೂ ಕುಗ್ಗದೆ ನಮ್ಮ ಗುರಿಯನ್ನು ತಲುಪಬೇಕು. ಕಷ್ಟಪಟ್ಟರೆ ಸುಖವಿದೆ ಮತ್ತು ಮನಸ್ಸಿದ್ದರೆ ಮಾರ್ಗ ಎಂಬುದನ್ನು ಅರಿತುಕೊಂಡು ನಮ್ಮ ಗುರಿಯನ್ನು ತಲುಪಬೇಕು. ಮನುಷ್ಯನು ತನ್ನ ಜೀವನದಲ್ಲಿ ಸುಮ್ಮನೆ ಕೂರದೆ, ಹಲವಾರು ಪ್ರಯತ್ನವನ್ನು ಮಾಡಬೇಕು ಮತ್ತು ಒಳ್ಳೆಯ ಕೆಲಸವನ್ನು ಮಾಡುತ್ತಲಿರಬೇಕು ಇದರಿಂದ ಮುಂದೊಂದು ದಿನ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ.

ಮರಣ

✍ ಮೊಹಿಯುದ್ದೀನ್ ಹಫ್‌ಝುಲ್
ದ್ವಿತೀಯ ಬಿ.ಕಾಂ. 'ಎ'

ಈ ಭೂಮಿಯಲ್ಲಿ ನಾವು ಗಮನಿಸಿದಾಗ ಎಲ್ಲದರಲ್ಲೂ ಎರಡೆರಡು ವಿಧಗಳಿರುತ್ತವೆ. ಉದಾಹರಣೆಗೆ ಹೆಣ್ಣು–ಗಂಡು, ಮರ–ಗಿಡ, ಪ್ರಾಣಿ–ಪಕ್ಷಿ, ಹಗಲು–ಇರುಳು ಇತ್ಯಾದಿ. ಹಾಗೆಯೇ ಹುಟ್ಟು ಸಾವು ಎಂಬೆರಡು ವಿಧಗಳು ಇರುತ್ತವೆ. ಈ ಪ್ರಕೃತಿ ನಿಯಮಗಳನ್ನು ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ. ಕೆಲವರಿಗೆ ಈ ವಿಷಯಗಳು ಗೊತ್ತಿರೋದೇ ಇಲ್ಲ. ವರ್ತಮಾನ ಕಾಲದಲ್ಲಿ ನಾವು ಹೇಗೆ ಬದುಕಬೇಕೆಂದು ಯೋಚಿಸದೆ ಭವಿಷ್ಯತ್ ಕಾಲಕ್ಕೆ ಬೇಕಾಗುತ್ತದೆ ಎಂದು ಎಲ್ಲವನ್ನೂ ಕೂಡಿಟ್ಟುಕೊಳ್ಳುತ್ತಾರೆ. ಇಂಥವರು ತಾವು ಬಯಸಿದಾಗ ಮಾತ್ರ ತಮಗೆ ಸಾವು ಬರುತ್ತದೆ ಎಂದು ಭಾವಿಸಿಕೊಂಡಿದ್ದಾರೆ.

'ಮರಣ' ಎಂಬ ಈ ಮೂರಕ್ಷರ ಕೇಳಿದಾಗ ಎಲ್ಲರೂ ಭಯಪಡುತ್ತಾರೆ, ಆಳುತ್ತಾರೆ, ಹತಾಶರಾಗುತ್ತಾರೆ. ಈ ಜಗತ್ತಿನಲ್ಲಿ ಅತ್ಯಂತ ಕಹಿಯಾದ ವಿಷಯವೆಂದರೆ ಅದು ಮರಣ. ಹುಟ್ಟಿದವ ಸಾಯಲೇಬೇಕು. ಹಾಗಂತ ಆತ್ಮಹತ್ಯೆ ಗೈದರೆ ಅದು ಮರಣವೆಂದೆನಿಸಿಕೊಳ್ಳುದಿಲ್ಲ. ಆತ ಸಾವನಪ್ಪಿದ್ದರೂ ಅದು ಆತ್ಮಹತ್ಯೆ ಎಂದೇ ಪರಿಗಣಿತವಾಗುತ್ತದೆ. ಹೇಡಿಗಳು ಮಾತ್ರ ಆತ್ಮಹತ್ಯೆಗೈಯಲು ಯತ್ನಿಸುತ್ತಾರೆ.

ನನ್ನ ಗುರು ಒಂದು ದಿನ ನನ್ನಲ್ಲಿ ಒಂದು ಪ್ರಶ್ನೆ ಕೇಳಿದರು. ಸಾಯಬಾರದೆಂದರೆ ಏನು ಮಾಡಬೇಕು? ಎಂದು. ನನ್ನ ಹತ್ತಿರ ಉತ್ತರ ಇರಲಿಲ್ಲ. ಅವರ ಉತ್ತರ ಕೇಳಿದಾಗ ನನಗೆ ನಗು ಬಂತು. ಅವರು ಹೇಳಿದರು "ಸಾಯಬಾರದೆಂದರೆ ಹುಟ್ಟಲೇಬಾರದು. ಹುಟ್ಟಿದರೆ ತಾನೇ ಸಾವು ಬರೋದು.

ಹುಟ್ಟುವಾಗ ಎಲ್ಲರೂ ನಮ್ಮನ್ನು ನೋಡಿ ಖುಷಿಪಡುತ್ತಾರೆ. ಮಗು ಎಷ್ಟು ಮುದ್ದಾಗಿದೆ ಎಂದು. ಹಾಗೆಯೇ ಮರಣವನ್ನಪ್ಪುವಾಗ ನಾವು ಮುಗುಳ್ನಕ್ಕು ಸಾಯಬೇಕು.

ಮೂರು ತಿಂಗಳ ಮೊದಲು ಒಂದು ಘಟನೆ ನಮ್ಮ ಮನೆಯಲ್ಲಿ ನಡೆದಿತ್ತು. ನಮ್ಮ ಮನೆಯ ಕೋಳಿ ಹಲಾಲ್ ಮಾಡಲಿಕ್ಕಿತ್ತು. ನನ್ನ ಗುರುಗಳು ಇನ್ನು ನನಗೆ ಹಲಾಲ್ ಮಾಡಬಹುದು ಎಂದು ಹೇಳಿದ್ದರು. ಭಾರೀ ಕಷ್ಟದಲ್ಲಿ ಅದನ್ನು ಹಲಾಲ್ ಮಾಡಿದೆ. ಆ ಕೋಳಿಯ ಪರದಾಟ ನೋಡಿ ನನಗೆ ಒಂಥರಾ ಅನಿಸಿತು. ಒಂದು ಕೋಳಿಯನ್ನು (ಭಕ್ಷಣೋಗ್ಯ ಜೀವಿ) ತಿನ್ನಲು ಬೇಕಾಗಿ ಹಲಾಲ್ ಮಾಡಿದಾಗಲೇ ನನಗೆ ಒಂದು ರೀತಿ ಮುಜುಗರವಾಯಿತು. ಆದರೆ ಕೊಲೆಗಾರರಿಗೆ ಒಂದು ಜೀವದ ಬೆಲೆ ಯಾಕೆ ಗೊತ್ತಿಲ್ಲ ಅಂತನಿಸಿತು.

ಒಂದಲ್ಲ ಒಂದು ದಿನ ನಾವೆಲ್ಲರೂ ಮರಣ ಹೊಂದಬೇಕು. ಹಾಗಂತ ನಾವು ಸುಮ್ಮನೆ ಕುಳಿತುಕೊಳ್ಳಬಾರದು. ನಮ್ಮಿಂದ ಎಷ್ಟು ಒಳ್ಳೆಯ ಕೆಲಸ ಮಾಡಲು ಸಾಧ್ಯವೋ ಅಷ್ಟು ಮಾಡಬೇಕು. ನಮಗೆ ಒಳ್ಳೆಯ ರೀತಿಯ ಮರಣ. ಅಂದರೆ ಆಕ್ಸಿಡೆಂಟ್, ಎಬೋಲ, ಮಂಗನ ಕಾಯಿಲೆ ಇಂತಹ ಭಯಾನಕ ಕಾಯಿಲೆಗಳಿಂದಾಗುವುದನ್ನು ಹೊರತುಪಡಿಸಿ ಸಾಮಾನ್ಯ ರೋಗದ ಕಾರಣದಿಂದ ಮರಣವನ್ನಪ್ಪಲು ದೇವರಲ್ಲಿ ಪ್ರಾರ್ಥಿಸಬೇಕು. ಇಲ್ಲಿ ಸಾಮಾನ್ಯ ರೋಗವೆಂದು ಯಾಕೆ ಹೇಳಿದೆನೆಂದರೆ, ರೋಗ ಬರದೇ ಸಾಯುವವರು ಯಾರೂ ಇಲ್ಲ. ಹಾಗಂತ ಗಲ್ಲು ಶಿಕ್ಷೆ, ಆಕ್ಸಿಡೆಂಟ್ ಇವು ಸಾಮಾನ್ಯವಲ್ಲದಿದ್ದರೂ ಇವು ನಾವು ಮಾಡುವ ತಪ್ಪು, ನಿರ್ಲಕ್ಷದಿಂದಾಗಿ ನಮಗೆ ದಕ್ಕುವುದಾಗಿದೆ.

ಒಟ್ಟಿನಲ್ಲಿ, ನಾವು ಬದುಕಿರುವಷ್ಟು ದಿನ ಜಾಗರೂಕತೆಯಿಂದ ಬದುಕಿ ಕೈಯಲ್ಲಾದಷ್ಟು ಒಳ್ಳೆಯ ಕೆಲಸಗಳನ್ನು ಮಾಡಬೇಕು. ನಾವು ಮರಣವನ್ನಪ್ಪುವಾಗ ಎಲ್ಲರೂ ನಮ್ಮನ್ನು ಸಜ್ಜನರೆಂದು ಗುರುತಿಸುವಂತಾಗಬೇಕು. "ಎಷ್ಟು ಒಳ್ಳೆಯ ಮನುಷ್ಯ ಈತ. ಇವನಿಗೆ ಇಷ್ಟು ಬೇಗ ಮರಣ ಬರಬಾರದಿತ್ತು" ಎಂದು ಹೇಳಿ ಇಡೀ ಊರಿಗೆ ಊರು ಅಳುವಂತಾಗಬೇಕು. ನಮ್ಮ ಮರಣವು ಒಳ್ಳೆಯ ಸಮಯದಲ್ಲಿ, ಒಳ್ಳೆಯ ಸ್ಥಳದಲ್ಲಿ, ಒಳ್ಳೆಯ ರೀತಿಯಲ್ಲಾಗಬೇಕೆಂದು ದಿನನಿತ್ಯವೂ ನಾವು ದೇವರಲ್ಲಿ ಪ್ರಾರ್ಥಿಸುತ್ತಿರಬೇಕು.

ಅಪರೂಪದ ಅಪರಂಜಿ

✍ ಸ್ವಾತಿ
ಪ್ರಥಮ ಬಿ.ಕಾಂ. 'ಎ'

ಎರಡೂ ತುಟಿಗಳನ್ನು ಅಪ್ಪಿಕೊಂಡು ಬಾಯ್ತುಂಬಾ ಕರೆಯುವ ಪದವೇ ಅಪ್ಪ. ಎಲ್ಲರ ಬದುಕಿನಲ್ಲಿ ಅಪ್ಪನ ಜೊತೆಗೆ ಕಳೆದ ಪ್ರತೀ ಘಳಿಗೆ, ಪ್ರತಿ ಘಟನೆ ಅವಿಸ್ಮರಣೀಯ. ಆಕಾಶದಷ್ಟೇ ಅನಂತ. ಅವರ ಪ್ರೀತಿ, ಮಮತೆ ನೀಲ ಗಗನದಷ್ಟೇ ಶುಭ್ರ, ಸ್ವಚ್ಛ, ಭದ್ರತೆ, ಭರವಸೆ, ಧೈರ್ಯ, ಸಲಹೆ, ಮಾರ್ಗದರ್ಶನ, ಶಿಸ್ತು ಇವುಗಳಿಗೆಲ್ಲ ಪರ್ಯಾಯ ಪದವೇ "ಅಪ್ಪ". ಅಪ್ಪ ಎಂದರೆ ಕೇಳಿದ್ದನ್ನು ಕೊಡುವ ಕಲ್ಪವೃಕ್ಷ. ಎಲ್ಲಾ ಮಕ್ಕಳಿಗೂ ತನ್ನ ಅಪ್ಪನೇ ಕಥಾನಾಯಕ. ಮಕ್ಕಳೆಂದರೆ ಅವರಿಗೆ ಹಬ್ಬ. ಅವರ ರಕ್ಷಾ ಕವಚದ ಬೆಚ್ಚನೆಯ ಪ್ರೀತಿಯ ಗೂಡಿನಲ್ಲಿ ಬೆಳೆದ ಗುಬ್ಬಚ್ಚಿ ನಾವು.

ಸಂಬಂಧಗಳನ್ನು ನಿಭಾಯಿಸುವಲ್ಲಿ, ಸಂಕೋಲೆಗಳ ಬಿಡಿಸುವಲ್ಲಿ ನಿಷ್ಪಕ್ಷಪಾತಿ. ಜೀವನದಲ್ಲಿ ಯಾವುದೇ ಆಡಂಬರ, ಮೋಜು, ಮಸ್ತಿ ನೋಡದ ದುಡಿಮೆಗಾರ "ಕಾಯಕವೇ ಕೈಲಾಸ" ಎಂಬ ಮೂಲ ಮಂತ್ರ ಪಾಲಿಸುವ, ಎಂಥ ಕಷ್ಟದಲ್ಲೂ ಎದೆಗುಂದದೆ ನಿಲ್ಲುವ ಗಟ್ಟಿ ಮನುಷ್ಯ ಎಂದರೆ ಅಪ್ಪ.

ಉತ್ತಮ ಮಾತುಗಾರರು ಆಗಿರುವ ಅಪ್ಪ ಭಾವುಕ ಜೀವಿ. ತನ್ನನ್ನು ಟೀಕಿಸಿದವರನ್ನೂ, ಕೇಡು ಬಯಸಿದವರನ್ನೂ ದ್ವೇಷಿಸದ ವಿಶಾಲ ಹೃದಯಿ. ಇವತ್ತಿಗೂ ಆಗಿ–ಹೋಗಿರುವುದರ ಬಗ್ಗೆ, ಜೀವನದಲ್ಲಿ ಸಿಗದಿರುವುದರ ಬಗ್ಗೆ ಪಶ್ಚಾತ್ತಾಪ ಪಡದಿರದ ಆಶಾವಾದಿ. ಹಾಗಂತ ಅಪ್ಪ ಅನ್ನೋ ಆಲದ ಮರವು ಯಾವತ್ತೂ ಕದಲೋದಿಲ್ಲ.

ಒಬ್ಬ ತಂದೆಯಾಗಿ, ಒಬ್ಬ ಗೆಳೆಯನಾಗಿ, ಒಬ್ಬ ಮಹಾನ್ ವ್ಯಕ್ತಿಯಾಗಿ ನನ್ನ ಅಪ್ಪ ಎಂದೆಂದಿಗೂ ನನಗೆ ಸ್ಫೂರ್ತಿ ನೀಡುವ ಅಮೋಘ ರತ್ನ.

ತಾಯಿ

✍ **ಲವಿನಾ**
ಪ್ರಥಮ ಬಿ.ಕಾಂ.'ಎ'

ತಾಯಿ, ನನ್ನ ಜೀವನದ ಅತ್ಯಂತ ಪ್ರಮುಖ ವ್ಯಕ್ತಿ. ತಾಯಿ, ನಿಜವಾದ ಅಗ್ರಗಣ್ಯ ಮತ್ತು ಒಳ್ಳೆಯ ಗೆಳತಿಯಾಗಿರುತ್ತಾರೆ. ಈ ಜಗತ್ತಿನಲ್ಲಿ ನಮ್ಮ ತಾಯಿಯ ನಿಜವಾದ ಪ್ರೀತಿ ಮತ್ತು ಕಾಳಜಿಯನ್ನು ಹೋಲಿಕೆ ಮಾಡಲು ಸಾಧ್ಯವಿಲ್ಲ. ಅವರು ನಮ್ಮ ಜೀವನದ ಏಕೈಕ ಪ್ರೀತಿಸುತ್ತಿರುವ ಮಹಿಳೆ. ತನ್ನ ಯಾವುದೇ ವೈಯುಕ್ತಿಕ ಉದ್ದೇಶ ಇಲ್ಲದೇ ನಮಗೆ ಕಾಳಜಿ ತೋರಿಸುತ್ತಾರೆ. ಮಕ್ಕಳೇ ತಾಯಿಗೆ ಎಲ್ಲವೂ ಆಗಿದ್ದಾರೆ. ಅವಳು ಯಾವಗಲೂ ಜೀವನದಲ್ಲಿ ಯಾವುದೇ ಕಷ್ಟಕರ, ಅಸಹಾಯಕ ಕೆಲಸಗಳನ್ನು ಮಾಡಲು ಆಗದೇ ಇರುವಾಗಲೂ ನಮ್ಮನ್ನು ಪ್ರೋತ್ಸಾಹಿಸುತ್ತಾರೆ. ಅವರು ನಮಗೆ ಕೆಟ್ಟ ಮತ್ತು ಒಳ್ಳೆಯದರ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಿಕೊಡುತ್ತಾರೆ. ಈ ಎರಡು ಸಂದರ್ಭದಲ್ಲೂ ನಮ್ಮ ಜೊತೆಯಲ್ಲಿರುತ್ತಾರೆ.

ನಿಜವಾದ ಪ್ರೀತಿ ತಾಯಿಯ ಮತ್ತೊಂದು ಹೆಸರು. ನಾವು ತಾಯಿಯ ಗರ್ಭದಲ್ಲಿ ಬಂದ ಕಾಲಕ್ಕೆ, ಅವರು ನಮಗೆ ದಣಿವಾಗದ ಕಾಳಜಿ ಮತ್ತು ಪ್ರೀತಿ ನೀಡುತ್ತಾರೆ. ಆದುದರಿಂದ ನಾವು ದೇವರಿಗೆ ಕೃತಜ್ಞರಾಗಿರುವಂತೆ ಯಾವಾಗಲೂ ತಾಯಿಗೆ ಕೃತಜ್ಞರಾಗಿರಬೇಕು. ಅವರ ನಿಜವಾದ ಪ್ರೀತಿ, ಕಾಳಜಿ ಮತ್ತು ತ್ಯಾಗ ಸಾಕಾರವಾದುದು ಮತ್ತು ಅಮೂಲ್ಯವಾದುದು. ತಾಯಿಗಿಂತ ಅಮೂಲ್ಯವಾದ ವಸ್ತು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ನಮಗೆ ಜನ್ಮ ನೀಡುವ ಮೂಲಕ ಒಂದು ಸಿಹಿ ಮನೆಯೊಳಗೆ ತಿರುಗುತ್ತದೆ. ಮನೆಯಲ್ಲಿ ಮೊದಲ ಬಾರಿಗೆ ನಮ್ಮ ಶಾಲೆಯನ್ನು ಆರಂಭಿಸುತ್ತಾರೆ ಮತ್ತು ನಮ್ಮ ಜೀವನದಲ್ಲಿ ಮೊದಲ ಮತ್ತು ಉತ್ತಮ ಶಿಕ್ಷಕಿಯಾಗುತ್ತಾರೆ. ಅವರು ನಮಗೆ ಜೀವನದ ಮತ್ತು ವರ್ತನೆಯ ನಿಜವಾದ ಪಾಠತತ್ವಗಳನ್ನು ಕಲಿಸುತ್ತಾರೆ. ನಾವು ತನ್ನ ಗರ್ಭದಿಂದ ಹುಟ್ಟಿದ ಕಾಲದಿಂದ ತನ್ನ ಜೀವ ಇರುವವರೆಗೂ ಪ್ರೀತಿ ಮತ್ತು ಕಾಳಜಿಯನ್ನು ನೀಡುತ್ತಾರೆ. ಸಾಕಷ್ಟು ನೋವು ಹೋರಾಟಗಳನ್ನು ಕಂಡ ನಂತರ ನಮಗೆ ಜನ್ಮ ನೀಡುತ್ತಾರೆ. 'ಮೇ 13 ತಾಯಂದಿರ ದಿನ' ಎಂದು ಘೋಷಿಸಲ್ಪಟ್ಟಿದೆ ಮತ್ತು ಪ್ರತೀ ವರ್ಷ ಆಚರಿಸಲಾಗುತ್ತದೆ.

ನಗೆಹನಿ

✍ **ಮೇಘ**
ಪ್ರಥಮ ಬಿ.ಕಾಂ. 'ಬಿ'

ದಂತ ವೈದ್ಯ : ಪ್ರಾಣಿಗಳಿಗೆ ಹಲ್ಲು ನೋವಿನ ಸಮಸ್ಯೆ ಇರೋದಿಲ್ಲ. ಅದೇನಿದ್ದರೂ ಮನುಷ್ಯರಿಗೆ ಮಾತ್ರ.

ರೋಗಿ : ನಿಜ್ವಾ ಸಾರ್? ನಿಮಗೆ ಹೆಂಗೆ ಗೊತ್ತಾಯ್ತು ಸಾರ್?

ದಂತ ವೈದ್ಯ : ಹೆಂಗೆ ಗೊತ್ತಾಯ್ತು ಅಂದ್ರೆ, ಯಾವ ಪ್ರಾಣಿಯೂ ನನ್ನ ಬಳಿಗೆ ಚಿಕಿತ್ಸೆಗಾಗಿ ಬಂದಿಲ್ಲ.

ಆತ್ಮವಿಶ್ವಾಸ

✍ ಸಂಗನ ಬಸವ
ಪ್ರಥಮ ಬಿ.ಕಾಂ. 'ಎ'

ಶಕ್ತಿಪುರ ಎಂಬ ಊರು. ಆ ಊರಿನಲ್ಲಿ ಒಂದು ದೇವಸ್ಥಾನವಿತ್ತು. ಆ ದೇವಸ್ಥಾನದಲ್ಲಿ ಪೂಜೆಮಾಡಲು ಒಬ್ಬ ಪೂಜಾರಿ ಇದ್ದ. ಆ ಪೂಜಾರಿಗೆ ಇಂಗ್ಲೀಷ್ ಬರುತ್ತಿರಲಿಲ್ಲ. ದಿನ ಕಳೆದಂತೆ ಆ ದೇವಸ್ಥಾನ ತುಂಬಾ ಪ್ರಸಿದ್ಧಿ ಪಡೆಯುತ್ತಾ ಹೋಯಿತು. ಪ್ರಸಿದ್ಧಿ ಹೆಚ್ಚಾದಂತೆ ದೇಶ-ವಿದೇಶಗಳಿಂದ ಜನರು ಬರಲು ಪ್ರಾರಂಭಿಸಿದರು. ಪೂಜಾರಿಗೆ ಇಂಗ್ಲೀಷ್ ಬಾರದ ಕಾರಣ ಅಲ್ಲಿನ ದೇವಸ್ಥಾನದ ಕಮಿಟಿಯವರು ಪೂಜಾರಿಯನ್ನು ಬದಲಾಯಿಸಲು ತೀರ್ಮಾನಿಸಿದರು. ಅವನ ಬದಲಾಗಿ ಇಂಗ್ಲೀಷ್ ಮಾತನಾಡುವ ಪೂಜಾರಿಯನ್ನು ನೇಮಕ ಮಾಡಲು ತೀರ್ಮಾನಿಸಿದರು. ಆದರೆ ಆ ಪೂಜಾರಿಯನ್ನು ಹೊರ ಹಾಕಿದ ಮೇಲೆ ಪೂಜಾರಿಗೆ ಏನು ಮಾಡಬೇಕು ಎಂದು ತೋಚಲಿಲ್ಲ. ಕೊನೆಗೆ ತನ್ನ ಹೊಟ್ಟೆಪಾಡಿಗಾಗಿ ದೇವಸ್ಥಾನದ ಹತ್ತಿರವೇ ಚಾ, ಕಾಫಿಯನ್ನು ಮಾರಲು ಆರಂಭಿಸಿದ. ಅವನು ಚಾ, ಕಾಫಿ ಚೆನ್ನಾಗಿ ಮಾಡುತ್ತಿದ್ದರಿಂದ ಜನರು ಹೆಚ್ಚಾಗಿ ಅವನ ಬಳಿ ಬರಲು ಆರಂಭಿಸಿದರು. ಅವನ ವ್ಯಾಪಾರ ಚೆನ್ನಾಗಿ ಕುದುರಿತು. ಬಂದ ಹಣದಿಂದ ಒಂದು ಸಣ್ಣ ಗೂಡಂಗಡಿಯನ್ನು ತೆರೆದು ಚಾ, ಕಾಫಿ ಜೊತೆಗೆ ತಿಂಡಿಯನ್ನು ಮಾರಲು ಆರಂಭಿಸಿದ. ಹಗಲು ರಾತ್ರಿ ಕಷ್ಟಪಟ್ಟು ದುಡಿದ. ವ್ಯಾಪಾರ ಹೆಚ್ಚಾಗಿ ಲಾಭ ಹೆಚ್ಚಾಯಿತು. ಅಲ್ಲಿಯೇ ಒಂದು ಜಾಗವನ್ನು ಖರೀದಿಸಿ ಒಂದು ಹೋಟೇಲ್ ಕಟ್ಟಿದ. ಒಂದೇ ಜಾಗದಲ್ಲಿ ತನಗೆ ಇಷ್ಟು ಲಾಭ ಬರುತ್ತಿದೆ. ಇನ್ನೂ ಇದೇ ರೀತಿ ಜನರು ಹೆಚ್ಚು ಬರುವ ಜಾಗಗಳಲ್ಲಿ ಹೋಟೆಲ್ ಕಟ್ಟಿದರೆ ತಾನು ಶ್ರೀಮಂತನಾಗುತ್ತೇನೆಂದು ಯೋಚಿಸಿ ಹಲವು ಹೋಟೆಲ್‌ಗಳನ್ನು ಕಟ್ಟಿದ. ಹೀಗೆ ವ್ಯಾಪಾರ ಹೆಚ್ಚಾಗಿ ಮುಂದೆ 20 "5 ಸ್ಟಾರ್" ಹೋಟೆಲ್‌ಗಳನ್ನು ಕಟ್ಟಿದ. ಒಂದು ದೊಡ್ಡ ಉದ್ಯಮಿಯಾಗಿ ಬೆಳೆದ. ಅವನ ಬೆಳವಣಿಗೆಯನ್ನು ನೋಡಿದ ಟಿ.ವಿ. ಮಾಧ್ಯಮದವರು ಅವನ ಸಂದರ್ಶನ ಮಾಡಲು ಬಂದರು. ಮಾಧ್ಯಮದವರು ಅವನಿಗೆ ಇಂಗ್ಲೀಷ್‌ನಲ್ಲಿ ಹಲವು ಪ್ರಶ್ನೆಗಳನ್ನು ಕೇಳಿದರು. ಆಗ ಅವನು ತನಗೆ ಇಂಗ್ಲಿಷ್ ಬರುವುದಿಲ್ಲ. ದಯವಿಟ್ಟು ಕನ್ನಡದಲ್ಲಿ ಕೇಳಿ ಎಂದನು. ಇದನ್ನು ಕೇಳಿದ ಮಾಧ್ಯಮದವರಿಗೆ ಆಶ್ಚರ್ಯವಾಯಿತು. ಆಗ ಮಾಧ್ಯಮದವರಲ್ಲಿ ಒಬ್ಬ "ಸಾರ್, ನಿಮಗೆ ಇಂಗ್ಲಿಷ್ ಬಾರದೆ 20 "5 ಸ್ಟಾರ್" ಹೋಟೆಲ್‌ಗಳನ್ನು ಕಟ್ಟಿದ್ದೀರಿ. ಇನ್ನು ಇಂಗ್ಲೀಷ್ ಬರುತ್ತಿದ್ದರೆ ಇನ್ನೂ ಎಷ್ಟೋ ಹೋಟೆಲ್‌ಗಳನ್ನು ಕಟ್ಟುತ್ತಿದ್ದೀರೆನೋ" ಎಂದನು. ಅದಕ್ಕೆ ಪ್ರತಿಕ್ರಿಯಿಸಿದ ನಮ್ಮ ಕಥಾನಾಯಕ, "ತನಗೆ ಇಂಗ್ಲಿಷ್ ಬರುತ್ತಿದ್ದರೆ ಇನ್ನೂ ಅದೇ ದೇವಸ್ಥಾನದಲ್ಲಿ ಪೂಜಾರಿಯಾಗಿಯೇ ಇರುತ್ತಿದ್ದೇ" ಎಂದು ಹೇಳಿದನು.

ಮನುಷ್ಯ ಅಭಿವೃದ್ಧಿ ಹೊಂದಲು ಭಾಷೆ ಮುಖ್ಯವಲ್ಲ. ಬದಲಾಗಿ ಒಳಗಿನ ಆತ್ಮವಿಶ್ವಾಸ ಮುಖ್ಯ. ದೇವಸ್ಥಾನದಿಂದ ಹೊರ ಹಾಕಿದ ದಿನ ನಮ್ಮ ಕಥಾನಾಯಕನು ತನ್ನಿಂದ ಏನೂ ಆಗುವುದಿಲ್ಲ ಎಂದು ಭವಿಷ್ಯಕ್ಕೆ ಹೆದರಿ ಕುಳಿತ್ತಿದ್ದರೆ, ಆತ ದೊಡ್ಡ ವ್ಯಕ್ತಿಯಾಗುತ್ತಿರಲಿಲ್ಲ. ಮನುಷ್ಯ ಅಭಿವೃದ್ಧಿ ಹೊಂದಲು ಭಾಷೆ ಮುಖ್ಯವಲ್ಲ ಬದಲಾಗಿ ಛಲ, ಆತ್ಮವಿಶ್ವಾಸ ಹಾಗೂ ಪರಿಶ್ರಮ ಮುಖ್ಯ ಎಂದು ಈ ಕಥೆ ತೋರಿಸಿಕೊಡುತ್ತದೆ.

ಅಂಗವೈಕಲ್ಯತೆಯ ಮಹಿಮೆ

✍ ರೋಸಾ
ಪ್ರಥಮ ಬಿ.ಕಾಂ. 'ಎ'

ಒಂದು ಪಟ್ಟಣದಲ್ಲಿ ಒಬ್ಬ ಶ್ರೀಮಂತ ವ್ಯಾಪಾರಸ್ಥನಿದ್ದನು. ಅವನಿಗೆ ಇಬ್ಬರು ಮಕ್ಕಳಿದ್ದರು. ಹಿರಿಯ ಮಗನ ಒಂದು ಕಾಲು ಜನನದಿಂದಲೇ ಮುಂಡಾಗಿತ್ತು. ಆದ ಕಾರಣ ನಡೆಯಲು ಅವನು ಬಹಳ ಕಷ್ಟಪಡುತ್ತಿದ್ದನು. ಕಿರಿಯ ಮಗ ಸುಂದರ ರೂಪವುಳ್ಳವನಾಗಿದ್ದು ಯಾವುದೇ ಅಂಗವೈಕಲ್ಯತೆ ಅವನಿಗೆ ಇರಲಿಲ್ಲ.

ಅಪ್ಪ, ಅಮ್ಮ ಕಿರಿಯ ಮಗನನ್ನು ಬಹಳ ಮುದ್ದಿನಿಂದ ಬೆಳೆಸಿದರು. ಕಿರಿಯವನು ತನಗೆ ಇಷ್ಟವಿದ್ದ ಎಲ್ಲಾ ವಸ್ತುಗಳನ್ನು ಹಠ ಹಿಡಿದು ಹೆತ್ತವರಿಂದ ಪಡೆಯುತ್ತಿದ್ದನು. ಅವನು ಕಲಿಯಲು ಜಾಣನಾಗಿದ್ದನು. ಹೆತ್ತವರು ಕಿರಿಯವನಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿದರು. ಉನ್ನತ ವ್ಯಾಸಂಗಕ್ಕೆ ದೂರಕ್ಕೆ ಅವನನ್ನು ಕಳುಹಿಸಲಾಯಿತು. ಅವನು ಅಲ್ಲಿ ಸಿಕ್ಕಾಪಟ್ಟೆ ಹಣ ಖರ್ಚು ಮಾಡಿ ಮಾದಕ ವಸ್ತುಗಳಿಗೆ ಬಲಿಯಾದನು. ಹೆಚ್ಚಿನ ಸಮಯ ಹರಟೆ ಹೊಡೆಯುವುದು, ಮೊಬೈಲ್‌ನಲ್ಲಿ ಆಟ ಆಡುವುದು ಹೀಗೆ ಇನ್ನಿತರ ದುಷ್ಚಟಗಳಿಗೆ ಬಲಿಯಾಗಿ ಅವನೇ ಅವನ ಜೀವನವನ್ನು ಹಾಳು ಮಾಡಿದನು. ಅನೇಕ ಹೆಣ್ಣು ಮಕ್ಕಳನ್ನು ಪ್ರೀತಿಸಿ ಅವರನ್ನು ವಂಚಿಸಿದನು. ಮಗನ ಈ ರೀತಿಯ ವರ್ತನೆಯ ಸುದ್ದಿ ಹೆತ್ತವರಿಗೆ ಮುಟ್ಟಿತು. ಅವರು ಎಷ್ಟು ಹಿತವಚನಗಳನ್ನು ನುಡಿದರೂ ಅವನು ಸರಿ ದಾರಿಗೆ ಬರಲೇ ಇಲ್ಲ.

ಇತ್ತ ಹಿರಿಯ ಮಗನು ಸುಂದರ ಚಿತ್ರಗಳನ್ನು ಬಿಡಿಸುವವನಾಗಿದ್ದನು. ಅವನು ಬಿಡಿಸುವ ಚಿತ್ರ ಶಾಲೆಯಲ್ಲಿ ಅತ್ಯುತ್ತಮವಾಗಿತ್ತು. ಸರ್ಕಾರದಿಂದ ಅನೇಕ ಪ್ರಶಸ್ತಿಗಳು ಅವನ ಚಿತ್ರಕಲೆಗೆ ಲಭಿಸಿತ್ತು. ಹಾಗೆ ಅವನು ದೊಡ್ಡ ಚಿತ್ರಕಲಾಕರನಾದ. ಅವನ ಒಂದೊಂದು ಚಿತ್ರಕ್ಕೆ ಸರ್ಕಾರವು ಬಹು ದೊಡ್ಡ ಹಣದ ಮೊತ್ತವನ್ನು ನೀಡಿತು. ಈ ಹಣದಿಂದ ಅವನು ಅಂಗವಿಕಲರನ್ನು ಕೂಡಿಸಿ ಅವರಿಗೆ ಆಹಾರ, ಪಾನೀಯ, ವಿದ್ಯಾಭ್ಯಾಸ, ವಸತಿ ಮುಂತಾದವುಗಳನ್ನು ನೀಡಿದನು.

ಊರ ಪಂಚಾಯತ್ ಹಿರಿಯ ಮಗನ ಒಳ್ಳೆಯ ಗುಣಗಳನ್ನು ಮೆಚ್ಚಿ ಹೆತ್ತವರಿಗೆ ಪುರಸ್ಕಾರವನ್ನು ಸಲ್ಲಿಸಿತ್ತು. ಇದರಿಂದ ಹೆತ್ತವರಿಗೊಂದು ಪಾಠ ಮನವರಿಕೆ ಆಯಿತು. ನಾವು ಯಾವುದನ್ನು ಕಡೆಗಣಿಸಿ ಅತಿ ಆಸೆಪಟ್ಟು ಚಿನ್ನದ ಜಿಂಕೆಯ ಹಿಂದೆ ಹೋದರೆ ಅದರ ಒಳಗೆ ರಾಕ್ಷಸ ಅಡಗಿರುತ್ತಾನೆ. ಅನೇಕ ವರ್ಷಗಳು ಕಳೆದವು ಹೆತ್ತವರು ಕಿರಿಯ ಮಗನ ಬರುವಿಕೆಯನ್ನು ದಿನವೂ ಕಾದು ಇರುತ್ತಿದ್ದರು. ಒಂದು ದಿನ ಕಿರಿಯ ಮಗ ಆಶ್ರಮದ ಸ್ಥಾಪಕನಾದ ಹಿರಿಯವನಲ್ಲಿ ಬಂದು ತನ್ನ ಜೀವನ ಚರಿತ್ರೆಯನ್ನು ಹೇಳುತ್ತಾನೆ. ನನಗೆ ಒಬ್ಬ ಅಣ್ಣನಿದ್ದಾನೆ, ಅವನು ಕುಂಟ, ಅವನಿಗೆ ಹೆತ್ತವರು ಇದ್ದಾರೆ, ಅವರ ಮನೆ ತೋರಿಸಿಕೊಡಬೇಕಾಗಿ ವಿನಂತಿಸುತ್ತಾನೆ. ಕೂಡಲೇ ಅಣ್ಣ ಕೃತಕ ಕಾಲನ್ನು ಬಳಸಿ ಬೆಲೆಬಾಳುವ ವಾಹನದಲ್ಲಿ ತಮ್ಮನನ್ನು ಸ್ವಂತ ಮನೆಗೆ ಕರೆದುಕೊಂಡು ಹೋಗುತ್ತಾನೆ. ಈ ದೃಶ್ಯವನ್ನು ಕಂಡು ಹೆತ್ತವರು ಓಡಿ ಬಂದು ಇಬ್ಬರೂ ಮಕ್ಕಳನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಾರೆ. ಹಿರಿಯವನ ಪ್ರೀತಿ, ವಾತ್ಸಲ್ಯವನ್ನು ಕಂಡು ಕಿರಿಯವನು ಸರಿದಾರಿಗೆ ಬಂದು ಆ ನಾಡಿಗೆ ಬೆಳಕು ಆಗುತ್ತಾನೆ.

ನಗೆಹನಿ

✍ ಮೇಘ
ಪ್ರಥಮ ಬಿ.ಕಾಂ. 'ಬಿ'

ಟಾಮಿ : ಆಪರೇಶನ್ ಮಾಡುವಾಗ ಡಾಕ್ಟರ್ ಮತ್ತು ನರ್ಸ್‌ಗಳು ಮುಖ, ಕೈಗೆ ಯಾಕೆ ಬಟ್ಟೆ ಕಟ್ಟಿಕೊಳ್ತಾರೆ ಗೊತ್ತಾ?

ಟೋನಿ : ಆಪರೇಶನ್ ಫೇಲ್ ಆದ್ರೆ ರೋಗಿ ಮನೆಯವರು ತಮ್ಮನ್ನು ಗುರುತು ಹಿಡಿಯದಿರಲಿ ಅಂತ.

ಸಂದೇಹ ವ್ಯಕ್ತಿ

ಕಿರಾಣಿ ಅಂಗಡಿಯ ಪರಂಧಾಮಯ್ಯ ಮಹಾ ಸಂದೇಹದ ವ್ಯಕ್ತಿ. ಅಲ್ಲದೇ ತಾನೇ ಎಲ್ಲರಿಗಿಂತಲೂ ಬುದ್ಧಿವಂತ ಎಂದುಕೊಳ್ಳುತ್ತಾ, ತನ್ನ ಹತ್ತಿರ ಕೆಲಸ ಮಾಡುತ್ತಿದ್ದ ಗುಮಾಸ್ತರನ್ನು ನಿಕೃಷ್ಟವಾಗಿ ಕಾಣುತ್ತಿದ್ದನು. ಒಂದು ಸಲ ಸರಕುಗಳನ್ನು ಕೊಳ್ಳಲು ಪರಂಧಾಮಯ್ಯನ ಸ್ನೇಹಿತ ಗುರುನಾಥನು ಆ ಅಂಗಡಿಗೆ ಹೋದಾಗ, ತನಗೆ ಒಬ್ಬ ಒಳ್ಳೆಯ ಗುಮಾಸ್ತ ಬೇಕೆಂದೂ, ತಿಳಿದವರು ಯಾರಾದರೂ ಇದ್ದರೆ, ನೋಡಬೇಕೆಂದೂ ಅವನನ್ನು ಕೇಳಿದನು ಪರಂಧಾಮಯ್ಯ. ತನಗೆ ತಿಳಿದ ರಂಗನೆಂಬ ಹುಡುಗನನ್ನು ಕರೆದುಕೊಂಡು ಪರಂಧಾಮಯ್ಯನ ಬಳಿಗೆ ಹೋದನು ಗುರುನಾಥನು.

ರಂಗನನ್ನು ಪರೀಕ್ಷಿಸಲು ಪರಂಧಾಮಯ್ಯನು ಒಂದು ನೋಟಿನ ಕಟ್ಟು ತಂದು, "ಈ ಕಟ್ಟಿನಲ್ಲಿ 5 ಸಹಸ್ರ ರೂಪಾಯಿಗಳಿರಬೇಕು. ಸರಿ ಇದೆಯೋ ಇಲ್ಲವೋ ಎಣಿಸು" ಎನ್ನುತ್ತಾ ರಂಗನ ಕೈಗೆ ಕೊಟ್ಟು, ಪಕ್ಕದ ಕೋಣೆಗೆ ಹೋಗಿ ಆರಾಮವಾಗಿ ಎಣಿಸಿ ಬರಲು ಹೇಳಿದನು. ನಂತರ ಪರಂಧಾಮಯ್ಯನು ಗುರುನಾಥನೊಡನೆ " ಈ ಕಾಲದಲ್ಲಿ ಯಾರನ್ನೂ ನಂಬಲಾಗದು. ಈ ಹುಡುಗನಿಗೆ ಕೊಟ್ಟ ಕಟ್ಟಿನಲ್ಲಿ ಒಂದು ಐವತ್ತರ ನೋಟು ಹೆಚ್ಚೇ ಇಟ್ಟಿದ್ದೇನೆ. ಅವನು ಅದನ್ನು ಇಟ್ಟುಕೊಂಡು, ಕಟ್ಟಿನಲ್ಲಿ 5 ಸಾವಿರ ಸರಿ ಇದೆಯೆಂದು ಹೇಳುತ್ತಾನೆ, ನೋಡುತ್ತಿರು!!" ಎಂದನು. ಅಷ್ಟರಲ್ಲಿ ರಂಗನು ಬಂದು, "ಇದರಲ್ಲಿ ಒಂದು ಐವತ್ತರ ನೋಟು ಕಡಿಮೆ ಇದೆ" ಎಂದನು. "ಏಯ್, ನೀನು ಸರಿಯಾಗಿ ಲೆಕ್ಕ ಹಾಕಲಿಲ್ಲ. ನಿನಗೆ ಲೆಕ್ಕ ಬರುವುದಿಲ್ಲ. ಹಾಗೆ–ಹೀಗೆ ಎಂದೆಲ್ಲಾ ಕಿರುಚಾಡಿದ ಪರಂಧಾಮಯ್ಯ "ಗುರುನಾಥ! ಈ ನೋಟಿನ ಕಟ್ಟಿನಲ್ಲಿ ಎಷ್ಟಿದೆ ಎಂದು ನೀನು ಸ್ವಲ್ಪ ಲೆಕ್ಕ ಹಾಕು" ಎಂದನು. ಗುರುನಾಥನು ಎಣಿಸಿ "ಇದರಲ್ಲಿ ಕೇವಲ ತೊಂಭತ್ತೊಂಬತ್ತು ನೋಟುಗಳು ಮಾತ್ರ ಇವೆ" ಎಂದನು. "ಹಾಗೇನು! ಇದೆಲ್ಲ ಮೋಸ. ನಾನು ನೂರೊಂದು ನೋಟುಗಳನ್ನು ಕೊಟ್ಟರೆ, ಎರಡು ನೋಟುಗಳನ್ನು ಮಾಯ ಮಾಡಿ ತೊಂಭತ್ತೊಂಬತ್ತೇ ಇವೆ ಎನ್ನುವೆಯಾ?" ಎಂದು ಕೂಗಾಡಿ ಅವನ ಜೇಬುಗಳನ್ನೆಲ್ಲಾ ಹುಡುಕಿದನು. ಎಲ್ಲಿಯೂ ಹಣ ಕಂಡು ಬರಲಿಲ್ಲ. ಆಗ ಗುರುನಾಥನು "ನೀನೇ ತಪ್ಪು ಎಣಿಸುತ್ತಿರುವೆ. ರಂಗನನ್ನು ಅನಾವಶ್ಯಕವಾಗಿ ಅನುಮಾನಿಸಿದೆ. ಸರಿ, ಬೇರೆ ಹುಡುಗನನ್ನು ನೋಡಿಕೋ" ಎನ್ನುತ್ತಾ ಹೊರಗೆ ಹೊರಟನು.

✍ ರಮ್ಯಶ್ರೀ
ಪ್ರಥಮ ಬಿ.ಕಾಂ. 'ಎ'

ಬೀದಿಯಲ್ಲಿ ಸ್ವಲ್ಪ ದೂರ ಹೋದ ಬಳಿಕ ತಿರುವಿನಲ್ಲಿ ರಂಗನು ಗುರುನಾಥನೊಡನೆ, "ಸ್ವಾಮೀ, ಕಟ್ಟಿನಲ್ಲಿ ನೂರೊಂದು ನೋಟುಗಳಿದ್ದವು. ಆತ ತುಂಬಾ ಸಂದೇಹದ ಮನುಷ್ಯನೆಂದು ಎಲ್ಲರೂ ಮಾತನಾಡುತ್ತಾರೆ. ನಿರೀಕ್ಷಿಸಿದಂತೆ ಕಟ್ಟಿನಲ್ಲಿ ಒಂದು ನೋಟು ಹೆಚ್ಚಾಗಿದ್ದಿತು. ಅದು ನನ್ನನ್ನು ಪರೀಕ್ಷಿಸಲು ಮಾಡಿದ್ದ ಯುಕ್ತಿ. ಅವನಿಗೆ ಬುದ್ಧಿ ಕಲಿಸಲು ಅದರ ಜೊತೆಗೆ ಮತ್ತೊಂದು ನೋಟನ್ನು ತೆಗೆದು ಬಚ್ಚಿಟ್ಟಿದ್ದೆನು. ಅನಾವಶ್ಯಕವಾಗಿ ಗುಮಾಸ್ತರ ಸತ್ಯಸಂಧತೆಯನ್ನು ಸಂದೇಹಿಸುವ ಯಾಜಮಾನನ ಬಳಿ ಕ್ಷಣಕ್ಷಣವೂ ಅವಮಾನದಿಂದ ಕೆಲಸಗಳನ್ನು ಮಾಡುವುದಕ್ಕಿಂತ ಭಿಕ್ಷೆ ಬೇಡುವುದೇ ಮೇಲು. ನಾನು ಅವನ ಬಳಿ ಕೆಲಸ ಮಾಡಲಾರೆನು. ಈ ಹಣವನ್ನು ನೀವೇ ಅವನಿಗೆ ಕೊಟ್ಟುಬಿಡಿ" ಎನ್ನುತ್ತಾ ಸೊಂಟದ ಪಟ್ಟಿಯಿಂದ 2 ನೋಟುಗಳನ್ನು ತೆಗೆದುಕೊಟ್ಟು ಹೊರಟು ಹೋದನು.

ಗುರುನಾಥನು ರಂಗನನ್ನು ಮೆಚ್ಚಿಕೊಳ್ಳುತ್ತಾ, ಆ ಹಣವನ್ನು ಪರಂಧಾಮಯ್ಯನ ಬಳಿಗೆ ಹೋಗಿ, ನಡೆದುದನ್ನು ಹೇಳಿ, ನೋಟುಗಳನ್ನು ಅವನಿಗೆ ಕೊಡುತ್ತಾ, "ನೀನೊಬ್ಬ ಪಕ್ಕಾ ಸಂದೇಹದ ಮನುಷ್ಯನೆಂದು ಊರು ಕೇರಿಗೆಲ್ಲಾ ಗೊತ್ತಿದೆ. ಅದು ನಿನಗೆ ಒಳಿತಿಗಿಂತ ಕೆಡುಕನ್ನೇ ಹೆಚ್ಚು ಮಾಡುತ್ತದೆ ಎಂಬುದನ್ನು ರಂಗನು ಸಾಬೀತುಪಡಿಸಿದನು. ಯೋಚಿಸಿ ನೋಡು" ಎಂದು ಹೇಳಿ ಹಿಂದಿರುಗಿದನು.

ಆ ಘಟನೆಯಿಂದಾಗಿ ಪರಂಧಾಮಯ್ಯನ ಬುದ್ಧಿಯಲ್ಲಿ ಬದಲಾವಣೆ ಉಂಟಾಯಿತು. ಅಂದಿನಿಂದ ಅವನು ಗುಮಾಸ್ತರನ್ನು ಅನಾವಶ್ಯಕವಾಗಿ ಸಂದೇಹಿಸದೆ, ನಿಕೃಷ್ಟವಾಗಿ ಕಾಣದೆ, ಎಲ್ಲರಿಂದಲೂ ಕೈಯಿಂದಲೂ ಒಳ್ಳೆಯವನೆನಿಸಿಕೊಂಡನು.

ದುಡಿಮೆಯ ಬೆಲೆ

✍ ಸ್ವಾತಿ
ಪ್ರಥಮ ಬಿ.ಕಾಂ. 'ಎ'

ಒಂದು ಹಳ್ಳಿಯಲ್ಲಿ ಮಂಜನೆಂಬ ವ್ಯಕ್ತಿಯಿದ್ದನು. ಶುದ್ಧ ಸೋಮಾರಿ. ಚಿಕ್ಕಂದಿನಲ್ಲೇ ತಂದೆ–ತಾಯಿಯರನ್ನು ಕಳೆದುಕೊಂಡು, ಅಜ್ಜನ ಆರೈಕೆಯಲ್ಲೇ ಬೆಳೆದ. ವರ್ಷವಾದರೂ ಬುದ್ಧಿ ಬಲಿತಿರಲಿಲ್ಲ. ದಿಕ್ಕು ದೆಸೆಯಿಲ್ಲದೆ ಅಲೆದು ಉಂಡಾಡಿ ಗುಂಡನಂತಿದ್ದ. ಅಜ್ಜನಿಗೆ ಕಣ್ಣು ಮಂಜಾಗಿ ಬೆನ್ನು ಬಾಗಿದ್ದರೂ ಎಲ್ಲಾ ಕೆಲಸವನ್ನು ಮಾಡಿಕೊಳ್ಳುತ್ತಿದ್ದ. ಊರಿನ ಧನಿಗಳ ಮನೆಯಲ್ಲಿ ಕಸ ಗುಡಿಸಿ, ಧನಿಯ ಮನೆಯ ತೋಟದ ಮತ್ತು ದನದ ಕೊಟ್ಟಿಗೆಯ ಕೆಲಸ ಮಾಡಿ ಬಂದ ಹಣದಿಂದ ಜೀವನ ಸಾಗುತ್ತಿತ್ತು. ವಾಸಿಸಲು ಮುರುಕಲು ಗುಡಿಸಲು ಒಂದಿತ್ತು. ಆ ಅಜ್ಜನಿಗೆ ಮೊಮ್ಮಗನದ್ದೇ ಚಿಂತೆ ಇದ್ದ ಕಾರಣ ಸಮಯ ಸಿಕ್ಕಗಲೆಲ್ಲಾ ಬುದ್ಧಿ ಹೇಳುತ್ತಿದ್ದ. "ಏ ಮಂಜಾ, ಕೆಲಸ ಮಾಡಿ ಸಂಪಾದಿಸುವುದನ್ನು ಕಲಿ. ಹೀಗೆ ತಿರುಗಾಡುವುದನ್ನು ಬಿಟ್ಟು ಬದುಕಿನಲ್ಲಿ ನೆಲೆ ಕಂಡುಕೋ. ಹೇಗೂ ಗಟ್ಟಿಮುಟ್ಟಾಗಿದ್ದಿ. ಮೈ ಬಗ್ಗಿಸಿ ದುಡಿಯುವುದನ್ನು ರೂಢಿ ಮಾಡಿಕೋ. ಈಗ ನಾನಿದ್ದೀನಿ, ಹಾಗಾಗಿ ಹೊತ್ತು ಹೊತ್ತಿಗೆ ಊಟ ಹಾಕುತ್ತಿದ್ದೇನೆ. ಕೂತು ಉಂಡರೆ ಕುಡಿಕೆ ಹೊನ್ನು ಸಾಲದು. ಈಗೀಗ ನನಗೂ ಕೆಲಸ ಮಾಡಲು ಆಗುತ್ತಿಲ್ಲ. ಶರೀರ ದುರ್ಬಲವಾಗಿದೆ. ಇತ್ತೀಚೆಗೆ ಈ ಉಬ್ಬಸ ರೋಗವೂ ಬಂದು ನನ್ನ ಅರ್ಧ ಜೀವವನ್ನು ತೆಗೆದುಬಿಟ್ಟಿದೆ. ನಾನಿನ್ನು ಎಷ್ಟು ವರ್ಷ ಬದುಕಿರಬಲ್ಲೆ ನೀನೇ ಹೇಳು. ನಾನು ಬದುಕಿರುವಾಗಲೇ ನೀನು ನಿನ್ನ ಕಾಲಿನಲ್ಲಿ ನಿಲ್ಲಬೇಕು ಎಂಬ ಆಸೆ ಇತ್ತು. ನಿನ್ನ ಮದುವೆ ನೋಡುವ ಆಸೆಯೂ ಇತ್ತು. ಆದರೆ ನೀನು ಯಾವುದನ್ನು ತಲೆಗೆ ತೆಗೆದುಕೊಳ್ಳುತ್ತಿಲ್ಲವಲ್ಲಾ" ಎಂದು ತನ್ನ ದುಃಖವನ್ನು ತೋಡಿಕೊಂಡನು.

ಮಂಜನು ಕೋಪದಿಂದ "ಅಜ್ಜ, ಕೆಲ್ಸ ಎಲ್ಲಾ ನನಗೆ ಬರೋದಿಲ್ಲ. ಇಷ್ಟಕ್ಕೂ ಶಾಲೆ ಮುಖ ನೋಡಿಲ್ಲ. ಹೇಗೋ ಕಷ್ಟಪಟ್ಟು ನನ್ನ ಹೆಸರು ಬರೆಯುವುದನ್ನು ಕಲಿತೆ. ಮೈ ಬಗ್ಗಿಸಿ ದುಡಿಯೋಕೆ ನನಗೆ ಆಗ್ತಿಲ್ಲ. ನಿನಗೆ ಏನೂ ಆಗೋದಿಲ್ಲ. ಅಷ್ಟಕ್ಕೂ ನನಗೆ ಕೆಲಸ ಮಾಡಲು. ಮನಸ್ಸಿದ್ದರೂ ಯಾರು ಕರೆದು ಕೆಲಸ ಕೊಡುತ್ತಾರೆ? ನೀನೇ ಹೇಳು?" ಅಜ್ಜನ ಸಮಾಧಾನಕ್ಕೆ ಹೇಳುತ್ತಿದ್ದ. ಅಲ್ಲಾ ಕಣೋ ಮಂಜಾ, ಯಾಕೆ ಕೆಲ್ಸಾ ಕೊಡೊದಿಲ್ಲ? ಮಾಡುವ ಮನಸ್ಸಿರಬೇಕು ಅಷ್ಟೇ! ಆಗದು ಎಂದು, ಕೈಲಾಗದು ಎಂದು ಕೈತಟ್ಟಿ ಕುಳಿತರೆ ಆಗದು. ಕಷ್ಟಪಟ್ಟು ಕೆಲಸ ಹುಡುಕಬೇಕು. ಮನಸ್ಸಿದಲ್ಲಿ ಮಾರ್ಗ ಎಂದು ಅಜ್ಜ ಮಂಜನಿಗೆ ಹಿತನುಡಿಗಳನ್ನು ಹೇಳುತ್ತಿದ್ದನು. "ಬೇಕಾದರೆ ನಾನೇ ಪಕ್ಕದ ಊರಿನ ಸಾಹುಕಾರನ ಬಳಿ ಹೋಗಿ ನಿನಗೆ ಕೆಲಸ ಕೇಳುತ್ತೇನೆ. ಅಲ್ಲಿ ಕೊಟ್ಟಿಗೆಯಲ್ಲಿ ಹಸುಗಳಿವೆ. ಅವುಗಳ ಹಾಲು ಕರೆದು, ತೋಟದಿಂದ ಹುಲ್ಲು ತರೋದು, ಮೇವು ಹಾಕೋದು ಮಾಡು, ಸೆಗಣಿ ಬಾಚಿ, ಕೊಟ್ಟಿಗೆ ತೊಳೆಯುವುದು. ಬೆಳಿಗ್ಗೆ ತಿಂಡಿ, ಮಧ್ಯಾಹ್ನದ ಊಟ, ಸಂಜೆ ತಿಂಡಿ ಎಲ್ಲಾ ಕೊಡುತ್ತಾರೆ. ಕೈ ತುಂಬಾ ಸಂಬಳವನ್ನು ಕೊಡುತ್ತಾರೆ" ಇದನ್ನು ಕೇಳಿ ಕೋಪದಿಂದ ಮಂಜ "ಹೋಗಿ ಹೋಗಿ ನಾನು ಸಗಣಿ ಬಾಚಬೇಕಾ? ಕೊಳಕು ವಾಸನೆ ಯೋಚಿಸಿದರೆ ವಾಕರಿಕೆ ಬರುತ್ತೆ ಎಂದು ಮುಖ ಒಂದು ಥರಾ ಮಾಡಿದ. ಅಜ್ಜ ನಿಧಾನವಾಗಿ, "ಹಾಗೆಲ್ಲಾ ಹೇಳಬಾರದು ಮಗಾ ನಾನು ಕೂಡಾ ಆ ಹಸುಗಳ ಕೆಲಸ ಮಾಡಿ ನಿನ್ನನ್ನು ನೋಡಿಕೊಳ್ಳುತ್ತಿದ್ದೇನೆ" ಎಂದು ಅಜ್ಜ ಮಂಜನಿಗೆ ಬುದ್ಧಿ ಮಾತು ಹೇಳುತ್ತಾ ಬೇಸರದಿಂದ ಮುಸುಕಿ ಹಾಕಿ ಮಲಗಿದನು. ಅದೇ ರಾತ್ರಿ ಅಜ್ಜನಿಗೆ ಉಬ್ಬಸ ಜೋರಾಗಿ "ಮಗಾ, ನನಗೆ ಎದೆನೋವು ತಡೆಯಲಾಗುತ್ತಿಲ್ಲ. ನನ್ನಲ್ಲಿ ಸ್ವಲ್ಪ ಹಣ ಇದೆ, ತೆಗೆದುಕೋ.. ನಾನಿನ್ನೂ ಬದುಕಲ್ಲ. ನನಗೆ ನಿನ್ನದೇ ಚಿಂತೆ, ನಿನ್ನನ್ನು ತಬ್ಬಲಿ ಮಾಡಿ ಹೋಗುತ್ತಿದ್ದೇನೆ ಮಂಜಾ ನನ್ನನ್ನು ಕ್ಷಮಿಸು ಎಂದು ಹೇಳುತ್ತಾ ಪ್ರಾಣಬಿಟ್ಟನು.

ಮಂಜನಿಗೆ ದಿಕ್ಕೇ ತೋಚಲಿಲ್ಲ. ಅಜ್ಜ ಇನ್ನಿಲ್ಲ ಎಂಬ ಸತ್ಯವನ್ನು ಅರಗಿಸಿಕೊಳ್ಳಲಾಗದೆ. ಬಿಕ್ಕಿ ಬಿಕ್ಕಿ ಅತ್ತನು. ಅಜ್ಜನ ಪೆಟ್ಟಿಗೆ ತೆರೆದು ಹಣದ ಗಂಟನ್ನು ಬಿಡಿಸಿ ಎಣಿಸಿದ. ಮುಂಜಾನೆ ಅಕ್ಕಪಕ್ಕದವರೆಲ್ಲಾ ಸೇರಿದರು. ಎಲ್ಲರೂ ಕೂಡಿ ಅಜ್ಜನ ಅಂತ್ಯಸಂಸ್ಕಾರ ನಡೆಸಿದರು. ಎಲ್ಲರೂ ಮಂಜನನ್ನು ಮೂದಲಿಸಿದರು. ಮೊದಲ ಬಾರಿಗೆ ಮಂಜನಿಗೆ ಅಜ್ಜನ ಮಹತ್ವ ಅರಿವಾಯಿತು. ಅಜ್ಜ ಇದ್ದಾಗ ಮಾತು ಕೇಳದೆ ಇದ್ದುದಕ್ಕೆ ತನಗೆ ತಕ್ಕ ಶಾಸ್ತಿ ಆಯಿತು. ಎಂದು ಬೇಸರದಿಂದಲೇ ಅಜ್ಜನ ನೆನಪಲ್ಲೇ ಮಲಗಿದ. ಆ ರಾತ್ರಿ ಅವನ ಕನಸಲ್ಲಿ ಬಂದ ಅಜ್ಜ "ಮಗಾ ದುಃಖಪಡಬೇಡ, ಈಗಲೂ ಕಾಲ ಮಿಂಚಿಲ್ಲ, ತಡವಾಗಿ ಆದರೂ ನಿನಗೆ ಈಗ ಬುದ್ಧಿ ಬಂದಿದೆ. ನಾಳೆ ಸೀದಾ ರಾಯರ ಬಳಿ ಕೆಲಸಕ್ಕೆ ಸೇರಿಕೋ ಎಂದನು. ಮಂಜನು ಹೋಗಿ ರಾಯರ ಬಳಿ ಕೆಲಸ ಗಿಟ್ಟಿಸಿಕೊಂಡ. ರಾಯರ ಹೆಂಡತಿ ಹಸಿದಿದ್ದ ಮಂಜನಿಗೆ ದೋಸೆ ಕೊಟ್ಟಳು. ಹಸಿವೆ ಎಂದರೆ ಏನು ಎಂಬುದರ ಅರಿವಾಯಿತು. ಸೆಗಣಿ ಬಾಚಿದ, ಕೊಟ್ಟಿಗೆ ತೊಳೆದ, ಹಾಲು ಹಿಂಡಲು ಅಭ್ಯಾಸ ಮಾಡಿದ. ಮೊದಮೊದಲು ತೋಟದಲ್ಲಿ ಕತ್ತಿ ಹಿಡಿದು ಹುಲ್ಲು ಕೊಯ್ದ. ಉಗುರ ಸಂದುಗೆಲ್ಲಾ ನೋವು, ಸೊಳ್ಳೆಗಳ ಕಾಟ ಹಾಗೂ ಹೀಗೂ ಕ್ರಮೇಣ ಅಭ್ಯಾಸವಾಯಿತು ಮನೆಗೆ ಬರುವಷ್ಟರಲ್ಲಿ ಹೈರಾಣಾಗುತ್ತಿದ್ದ. ರಾತ್ರಿ ಊಟನೂ ಮಾಡದೆ ಮಲಗುತ್ತಿದ್ದ. ಮೊದಲ ತಿಂಗಳ ಸಂಬಳ ಕೈ ಸೇರುತ್ತಲೇ ಅವನಿಗೆ ಆದ ಖುಷಿ ಅಷ್ಟಿಷ್ಟಲ್ಲ. ತನ್ನ ದುಡಿಮೆಯ ಸಂಪಾದನೆಯನ್ನು ಕಣ್ಣಿಗೊತ್ತಿಕೊಂಡ. ಅಜ್ಜನ ಫೋಟೊ ಮುಂದೆ ಇಟ್ಟು ಕೈ ಮುಗಿದ "ನೀನು ನಿಜವಾಗಿಯೂ ನನ್ನ ಕಣ್ಣು ತೆರೆಸಿದೆ. ನೀನಿದ್ದರೆ ಎಷ್ಟು ಸಂತೋಷಪಡುತ್ತಿದ್ದೆ!!" ಎಂದು ಬೇಸರಗೊಂಡನು. ನಿಯತ್ತಿನಲ್ಲಿ ದುಡಿದ ಮಂಜನಿಗೆ ರಾಯರು ಸೂಕ್ತ ಹೆಣ್ಣನ್ನು ನೋಡಿ ಮದ್ವೆ ಮಾಡಿ ಅವರ ಮನೆಯ ಪಕ್ಕದಲ್ಲೇ ಮನೆಯನ್ನು ಕಟ್ಟಿ ಕೊಟ್ಟರು. ಹೀಗೆ ಮಂಜನು ಪತ್ನಿ ಜೊತೆ ರಾಯರ ಮನೆಯಲ್ಲೇ ಕೆಲಸ ಮಾಡಿ ಸುಖವಾಗಿ ಬಾಳಿದ.

ಕಾಲೇಜಿನ ಆ ದಿನಗಳು

✍ **ರಕ್ಷಿತ್ ಕುಮಾರ್**
ದ್ವಿತೀಯ ಬಿ.ಕಾಂ. 'ಬಿ'

ಕಾಲೇಜು ಎಂದರೆ ಸುಂದರ ತಾಣ
ಗೆಳೆಯರೊಂದಿಗೆ ನಗುವಿನ ಜೀವನ
ಶಿಕ್ಷಕರು ಬಿಡುವ ವಿದ್ಯೆಯೆಂಬ ಬಾಣ
ಇದರಲ್ಲೇ ಅಡಗಿದೆ ನಮ್ಮ ಜೀವನ

ಶಿಕ್ಷಕರೊಂದಿಗೆ ಇದ್ದ ಆ ಪ್ರತಿದಿನ
ಅವರು ಕಲಿಸಿದರು ನನಗೆ ಉತ್ತಮವಾದ ಗುಣ
ಇವರೊಂದಿಗೆನೆ ಇರಲು ಬೇಡಿದೆ ಆ ದೇವರನ್ನ
ತೀರಿಸಲಾರೆನು ಈ ಜನ್ಮದಲಿ ಅವರ ಋಣ

ಕಾಲೇಜಿಗೆ ಬಂದ ಮೊದಲ ದಿನ
ನನಗನಿಸಿತು ಯಾರನ್ನಾದರೂ ಲವ್ ಮಾಡೋಣ
ಹೇಳಲು ಹೊರಟೆ ಅವಳಿಗೆ ಮರುಕ್ಷಣ
ಅವಳಿಗೆ ಅನಿಸಿತು ಇವನಿಗೆ ಎರಡೇಟು ಹೊಡೆಯೋಣ

ಗೆಳೆಯರೆಂದರೆ ನನ್ನ ಪ್ರಾಣ
ಅವರೇ ಇಲ್ಲದಿದ್ದರೆ ನನ್ನ ಜೀವನ ಮೌನ
ಗೆಳೆಯರೊಂದಿಗೆ ಸಿಕ್ಕಿದೆ ನನಗೊಂದು ಉತ್ತಮ ಸ್ಥಾನ
ಅದೇ ನನ್ನ ಜೀವನದ ಅದ್ಭುತವಾದ ಕ್ಷಣ
ಮರೆಯಲಾರೆ ನನ್ನ ಕಾಲೇಜಿನ ದಿನ
ನೆನಪಿನಲ್ಲಿರುತ್ತದೆ ನನ್ನ ಮನಸ್ಸಿನಲ್ಲಿ ಪ್ರತಿಕ್ಷಣ
ಗೆಳೆಯರೊಂದಿಗೆ ಕುಳಿತು ಬರೆದೆ ಈ ಕವನ
ಎಂದೂ ಮುಗಿಯದಿರಲಿ ನಮ್ಮ ಈ ಪಯಣ.

ಏಳೀ ಯುವಕರೇ

✍ **ಕೃಷ್ಣ**
ಪ್ರಥಮ ಬಿ.ಕಾಂ. 'ಎ'

ಏಳೀ ಯುವಕರೇ ನೀವು ಬೇಗ ಬೇಗ ಏಳಿ
ಹಾಡಿಕೊಂಡು ಕುಣಿದುಕೊಂಡು ದಿನಾ ಎಂಜಾಯ್ ಮಾಡಿ
ಹಾರಾಡುವ ಗಿಡುಗನ ನೀವು ಕ್ಯಾಚ್ ಮಾಡಿ
ಗುರಿಯನು ಮುಟ್ಟೋವರೆಗೂ ನೀವು ಬೇಗ ಏಳಿ

ದೇಶವನು ಕಟ್ಟಿ ನೀವು ಆರಾಧಿಸಿರಿ
ಯಾರ್ಯಾರೋ ಕೈಗೆ ಕೊಟ್ಟು ಮೋಸವ ಹೋಗದಿರಿ
ಬೇಗ ಏಳಣ್ಣ ನೀನು ಬೇಗ ಏಳಣ್ಣಾ
ಇದು ವಿಶ್ವಕ್ಕೆನೇ ಕೊಡೋ
ಭಾರತೀಯರ ಸಂದೇಶ ಕಣಣ್ಣ

ನಾವೆಲ್ಲ ದೇಶದ ನಾಗರಿಕರು
ಮಾಡೋಣ ಭಾರತ ಮಾತೆಯ ರಕ್ಷಣೆಯ
ಮುನ್ನುಗ್ಗಿ ಬರುತ್ತಿರುವ ಎದುರಾಳಿಗಳನ್ನು
ದೂರ ಸರಿಸಿ,
ನಮ್‌ದೇಶ, ನಮ್ ಭಾಷೆ, ನಮ್ ಸಂಸ್ಕೃತಿನ
ಉಳಿಸಿ ಬೆಳೆಸಿ
ಅಭಿವೃದ್ಧಿಯ ಪಥದಲ್ಲಿ ನಡೆಯೋಣ ಒಂದಾಗಿ

ಆಲಸ್ಯತನವ ಮರೆತು ಬಿಟ್ಟು
ಸ್ವಚ್ಛತೆಗೆ ಗಮನ ಕೊಟ್ಟು
ಜ್ಞಾನವನ್ನು ಪಡೆದುಕೊಂಡು
ದ್ವೇಷವನ್ನು ದೂರಬಿಟ್ಟು
ನಡೆ–ನಡೆ ಎನ್ನುತ್ತಾ, ನೀ ಮುಂದೆ
ಬೆಳಕಿನೆಡೆಗೆ ಸಾಗೋಣ, ಇನ್ನು ಮುಂದೆ

ನಾವೆಲ್ಲರೂ ಇಂಡಿಯನ್ಸ್
ನಮಗ್ಯಾಕೆ ಡಿಫರೆನ್ಸ್
ಏಕತೆಯ ಮರೆಯದಿರೋಣ
ಸ್ವಾಮಿನಿಷ್ಠೆಯ ಕಾಪಾಡೋಣ
"ಏಳಿ ಎದ್ದೇಳಿ ಯುವಕರೇ,
ಗುರಿ ಮುಟ್ಟುವ ತನಕ ನಿಲ್ಲದಿರಿ"

ಪರಮಾತ್ಮನಾಶೀರ್ವಾದ

✍ **ಅನುಷ್**
ಪ್ರಥಮ ಬಿ.ಕಾಂ. 'ಬಿ'

ನನ್ನ ಪ್ರಯತ್ನವೆನೂ... ಇಲ್ಲಾ
ನಿನ್ನ ಕೃಪೆಯೇ.... ಎಲ್ಲಾ
ನಿನ್ನಾಶೀರ್ವಾದವೆನಗೆ ರಕ್ಷೆ
ನೀನೀಡು ಸದ್ಬುದ್ಧಿಯೊಂದೆನಗೆ ಭಿಕ್ಷೆ

ಹರೆಸು ಜೀವನದ ಹಾದಿಯಲ್ಲಿ
ಒಳಿತು-ಕೆಡುಕುಗಳ ಆಯ್ಕೆಗಳಲ್ಲಿ
ತಲಿಸು ಸಕರಾತ್ಮಕ ಕನಸ
ಸಲಿಸು ಸಕಾರಾತ್ಮಕ ಕನಸ

ಕಳಿಸು ಪರರ ಗೌರವಿಸುವ ಗುಣವ
ಮರೆಸು ಸ್ವಾರ್ಥತೆ ಹಾಗೂ ಅಹಂಕಾರವ
ಸಲಹು ಎಮ್ಮ ನೀ ಕೈಬಿಡದೆ
ತಿಳಿಸು ಬದುಕಲು ವಿಷ್ಣಗಳಿಗೆ ಎದೆಗುಂದದೆ

ಕರುಣಿಸೆಮಗೆ ನೀ ಆ ಆರೋಗ್ಯವ
ಕರುಣಿಸಿ ಸ್ವಚ್ಛವಾದ ಪಲಸರವ
ಹೋಗದಂತೆ ಸನ್ಮಾರ್ಗವ ತ್ಯಜಿಸಿ
ಇರುವೆವು ನಾವು ಸದಾ ನಿನ್ನ ಸುತ್ತಿಸಿ.

ಪರಿಹಾರವಸೂಚಿಸು ನಮ್ಮೀ ದುಃಖದ ಅರಿತು
ತಿಳಿಸು ಜೀವಿಸಲು ಕಷ್ಟಗಳೊಂದಿಗೆ ಬೆರೆತು
ಬೆಳೆಸೆಮ್ಮ ನೀ ತುಂಬಿಸಿ ಸೌಜನ್ಯವ
ಮರೆಯದೆ ಪರರ ಸಹಾಯವ

ಮರಳಿ ಬಾ ನೀನು!

ಓ ನನ್ನ ಗೆಳೆಯ, ಇಂದಿಗೆ
ನೀ ಅಗಲಿ ವರುಷ ಸಂದರೂ
ಆ ನಿನ್ನ ನೆನಪುಗಳು ಕಾಡುತ್ತಿವೆಯಲ್ಲಾ?
ಅದೇನು ಮಾಯೆ ನಿನ್ನಲಿತ್ತೋ ಕಾಣೆ
ಮರಳಿ ಬಾ ಈಗಲೇ ಇಲ್ಲದೇ ಹೋದರೆ ನನ್ನಾಣೆ

ಆಗುತ್ತಿಲ್ಲ ಸಹಿಸಲು
ಮನ ಹಂಬಲಿಸುತ್ತಿದೆ ಕ್ಷಣ ಕ್ಷಣಕ್ಕೂ
ಯಾರನ್ನು ಕೂಗಲಿ ಅಜ್ಜಾ ಎಂದು?
ಯಾರಿಗೆ ಮಾಡಲಿ ಚೇಷ್ಟೆಯಾ?
ಹೇಳು ನನ್ನ ಮುದ್ದು ಗೆಳೆಯ
ಮರಳಿ ಬಾ ನೀನು!

ಇತ್ತು ನನ್ನ ನಿನ್ನ ಅಂತರ ಐದುನೂರು ಮೈಲಿ
ಕಾತುರವಿತ್ತು ನಿನ್ನ ನೋಡಲು ನನ್ನಲ್ಲಿ
ನನ್ನನ್ನು ಕಂಡಾಗ ತುಂಬಿ ಹೋಗುತ್ತಿತ್ತು
ನೀರು ನಿನ್ನ ಕಣ್ಣಂಚಲ್ಲಿ
ಈಗ ಅವೆಲ್ಲವೂ ಬರೀಯ ನೆನಪುಗಳು
ಮರಳಿ ಬಾ ನೀನು!

ಏಕೆ ಅಗಲಿದೆ ನನ್ನನ್ನು?
ಅಗಲಿದರೂ ಆ ನಿನ್ನ ನೆನಪುಗಳು
ಬಿಡುತ್ತಿಲ್ಲ ನನ್ನನ್ನು
ಕೋಲು ಕಂಡಾಗ ನಿನ್ನ ನೆನಪು
ಮಂಚ ಕಂಡಾಗ ನಿನ್ನ ದೇಹದ ನೆನಪು
ಮರಳಿ ಬಾ ನೀನು!

ಹೋಗಿರುವೆ ಕಾಣದ ಊರಿಗೆ
ಕೇವಲ ಮನಸ್ಸೆಂಬ ಊರಿನಲ್ಲೀಗ
ನಿನ್ನ ಇರುವಿಕೆಯ ಊರುಗಲ್ಲು
ಯಾಕೆ ಹೀಗೆ ಆಯಿತು? ಉತ್ತರಿಸು ನನಗೆ
ಮರಳಿ ಬಾ ನೀನು!

ಹೋಗೋವಾಗ ದೇವರ ಬಳಿ
ಕೋಪವಿತ್ತೇನೋ ಗೆಳೆಯ ನಿನಗೆ ನನ್ನ ಬಳಿ?
ನೀ ಮಾತನಾಡಲಿಲ್ಲ ಒಂದು ಪದ
ಆ ನೋವು ನನ್ನಲ್ಲಿ ಸದಾ! ಕ್ಷಮಿಸು ನನ್ನನು
ಮರಳಿ ಬಾ ನೀನು!

ಅಲ್ಲಿ ಯಾರಿಹರು ನಿನ್ನನು ಉಪಚರಿಸಲು?
ಮನದಲ್ಲಿ ಬರೀ ಅದರದ್ದೇ ಅಮಲು
ಕೋಲು ನೀಡಲು ಯಾರಿಲ್ಲ ನಿನಗಲ್ಲಿ
ಕೋಲೊಂದಿಗೆ ಕಾಯುತಿರುವೆ ನಾನಿಲ್ಲಿ
ಮರಳಿ ಬಾ ನೀನು!

ನಾನಿದ್ದೆ ಈ ಮಂಗಳೂರಿನಲ್ಲಿ
ಆದರು ತಪ್ಪುತ್ತಿರಲಿಲ್ಲ ನನ್ನ ನೆನಪು ನಿನ್ನ ಮನದಂಗಳದಲ್ಲಿ
ಮಾತು ಆಡಿ ಖುಷಿ ಪಡುತ್ತಿದ್ದೆ ಫೋನಿನಲ್ಲಿ
ಹೇಳು ನಮ್ಮ ನಡುವೆ ಇದ್ದ ಕೊರತೆಯೆಲ್ಲಿ?
ಮರಳಿ ಬಾ ನೀನು!

ನಾ ನಿನ್ನ ಕೂಡೆ ಕೋಪ
ರಮಿಸಲು ನೀ ಬಾ ಬೇಗ
ನಿನಗಾಗಿ ಮೀಸಲಿದೆ ಹೃದಯದ ಜಾಗ
ಎಣಿಕೆ ಮುಗಿದರೂ ಬರಲಿಲ್ಲ ನಿನ್ನ ಧ್ವನಿಯ ರಾಗ
ಅಯ್ಯೋ! ನನಗೀಗ ತಿಳಿಯಿತು
ನೀನಿಲ್ಲದ ಆ ಜಾಗಕ್ಕೆ ಹಾಕಿರುವೆ ಬೀಗ
ಮರಳಿ ಬಾ ನೀನು!

ಹೋಗಿಯೇ ಬಿಟ್ಟಿದ್ದೀಯಾ ನನ್ನ ಬಿಟ್ಟು
ಬಹುದಿನ ಇರೆನು ನಾ ನಿನ್ನ ಬಿಟ್ಟು
ಅಲ್ಲಿ ಬಂದು ನಿನಗೆ ನೀಡುವೆ
ನನ್ನ ಕೂಡಿಟ್ಟ ಏಟು?
ಮರಳಿ ಬಾ ನೀನು!

– ಇತೀ ನಿನ್ನ ಮುದ್ದು ಮೊಮ್ಮಗಳು

ರಚನೆ: **ಮಂಜುಳಾ,** ಪ್ರಥಮ ಬಿ.ಕಾಂ. 'ಬಿ'

ಸ್ನೇಹ

✍ **ಅನುಷ ಎಂ. ಕೆ**
ಪ್ರಥಮ ಬಿ.ಕಾಂ. 'ಎ'

ಸ್ನೇಹ ಎನ್ನುವುದು ಒಂದು ಆತ್ಮೀಯ ಬಾಂಧವ್ಯ. ಕೆಲವೊಮ್ಮೆ ಅದು ಬಿಡಿಸಲಾಗದ ಬಂಧ. ಎಲ್ಲೋ ಸಿಕ್ಕವರು ಯಾವುದೋ ಕಾರಣಕ್ಕೆ ಆತ್ಮೀಯರಾಗಿ ಬಿಡುತ್ತಾರೆ. ಅವರನ್ನು ತುಂಬಾ ಹಚ್ಚಿಕೊಂಡು ಬಿಡುತ್ತೇವೆ. ಸ್ನೇಹ ಎಂದರೆ ಹೀಗೇನೆ. ಅದು ಮನಸ್ಸಿಗೆ ಸಂಬಂಧಪಟ್ಟದ್ದು. ಸ್ನೇಹ ಎನ್ನುವುದು ಒಂದು ರೀತಿಯಲ್ಲಿ ಪ್ರೀತಿಸುವುದೇ ಆದರೂ ಅದರಲ್ಲಿ ನಿಷ್ಕಲ್ಮತೆ ಇದೆ. ಇದಕ್ಕೊಂದು ಗೌರವ ಇದೆ. ಕೆಲವೊಮ್ಮೆ ನಮ್ಮ ಪರಿಚಯದವರಲ್ಲಿ, ಸಮಾನ ವಯಸ್ಕರಲ್ಲಿ ಅದನ್ನು ಕಾಣುತ್ತೇವೆ.

ಸ್ನೇಹದಲ್ಲಿ ಯಾವಾಗ ನೋವಾಗುತ್ತದೆ ಎಂದರೆ ಯಾವತ್ತೂ ದಾರಿಯಲ್ಲಿ ಅಥವಾ ಬೇರೆಲ್ಲಾದರೂ ಸಿಕ್ಕಾಗ ಕನಿಷ್ಠ ನಗುತ್ತಾ ಮಾತನಾಡುವವರು ಒಂದು ದಿನ ಸುಮ್ಮನೆ ಗಮನಿಸಿದರೂ ಗಮನಿಸದಂತೆ ಹೋದರೆ ಸಾಕು, ಹುಚ್ಚೇ ಹಿಡಿದು ಬಿಡುತ್ತದೆ. ಭಾವುಕ ಮನಸ್ಸಿನವರಾದರೆ ಅತ್ತು ಬಿಡುತ್ತೇವೆ. ಸ್ನೇಹದ ಕೊಂಡಿ ಕಳಚಿ ಹೋದಾಗ ಮನಸ್ಸು ನಾಲ್ಕೈದು ದಿನಗಳ ವರೆಗೂ ರೋದಿಸುವುದಿದೆ.

S – ಸ್ವಾರ್ಥವಿಲ್ಲದೆ
N – ನಂಬಿಕೆಯಿಂದ
E – ಎಲ್ಲರನ್ನೂ
H – ಹತ್ತಿರ ಸೆಳೆಯುವ
A – ಅನುಬಂಧ

ಸ್ವಾರ್ಥವಿಲ್ಲದೆ ನಂಬಿಕೆಯಿಂದ ಎಲ್ಲರನ್ನೂ ಹತ್ತಿರ ಸೆಳೆಯುವ ಅನುಬಂಧವೇ 'ಸ್ನೇಹ'

ನಗೆಹನಿ

✍ **ಅನ್ನಪೂರ್ಣ**
ಪ್ರಥಮ ಬಿ.ಕಾಂ. 'ಎ'

ಪಿಂಕಿ : ಇವತ್ತು ಶಾಲೆಯಲ್ಲಿ ಹುಡುಗಿಯೊಬ್ಬಳು ಬಿದ್ದಳು, ನಾನು ನಗಲಿಲ್ಲ.
ಅಮ್ಮ : ಒಳ್ಳೆಯ ಹುಡುಗಿ ನೀನು. ಅಂದ ಹಾಗೆ ಬಿದ್ದವಳು ಯಾರು?
ಪಿಂಕಿ : ನಾನೇ!

• • • • •

ಗುಂಡನ ಅಪ್ಪ : ನೀನು ಅವನಿಗೆ ಕೊಡೆಯಿಂದ ಯಾಕೆ ಹೊಡೆದೆ? ಏನಾದರೂ ಹೆಚ್ಚು ಕಡಿಮೆ ಆಗುತ್ತಿದ್ದರೆ?
ಗುಂಡ : ಹೆಚ್ಚು ಕಡಿಮೆ ಆದರೂ ಅಡ್ಡಿಯಿಲ್ಲ, ಅದು ಹಳೆಯ ಕೊಡೆ ಅಪ್ಪಯ್ಯ! ಆಮೇಲೆ ಹೊಸದು ಕೊಂಡುಕೊಳ್ಳಬಹುದು.

• • • • •

ಟೀಚರ್ : ಏನೋ ಗುಂಡ, ನೀನು ವಿಶ್ವಸುಂದರಿಯ ಮಗನಂತೆ ಹೌದಾ?
ಗುಂಡ : ಹೌದು ಟೀಚರ್, ನನ್ನ ಅಪ್ಪನ ಹೆಸರು ವಿಶ್ವ, ಅಮ್ಮನ ಹೆಸರು ಸುಂದರಿ. ಅದಕ್ಕೆ ನಾನು ವಿಶ್ವಸುಂದರಿಯ ಮಗ.

• • • • •

ಗುಂಡ : ಮೀನು ಸದಾ ಕಾಲವೂ ನೀರಿನಲ್ಲಿ ಇರುತ್ತೆ ಅದಕ್ಕೆ ಬೆವರು ಬರುವುದಿಲ್ಲವೇ?
ಗೆಳೆಯ : ಅದಕ್ಕೆ ಬಹುಶಃ ಸಮುದ್ರದ ನೀರು ಉಪ್ಪಾಗಿರೋದು!

ಕಷ್ಟದ ಬದುಕೋ ಇಷ್ಟದ ಬದುಕೊ?

✍ ಮಂಜು
ತೃತೀಯ ಬಿ.ಕಾಂ. 'ಎ'

ನನ್ನಷ್ಟು ಕಷ್ಟಪಡುವವರು ಯಾರು ಇಲ್ಲ, ನಾನು ಹಗಲು–ರಾತ್ರಿಯೆನ್ನದೆ ದುಡಿಯುತ್ತೇನೆ; ಆದರೂ ದೇವರು ನನ್ನ ಕಷ್ಟವನ್ನು ನಿವಾರಿಸುತ್ತಿಲ್ಲ; ನಾನು ಪ್ರತಿದಿನವು ಕಷ್ಟಪಟ್ಟು ಓದುತ್ತೇನೆ; ಆದರೂ ಒಳ್ಳೆಯ ಅಂಕಗಳನ್ನು ಗಳಿಸಲು ಆಗುತ್ತಿಲ್ಲ; ನಾನು ಎಷ್ಟೊಂದು ಕಷ್ಟಪಟ್ಟು ಅಭ್ಯಾಸಮಾಡುತ್ತಿದ್ದೆ, ಆದರೂ ಒಂದು ಪದಕವನ್ನು ಪಡೆಯಲು ಆಗಲಿಲ್ಲ; ನಾನು ಹುಟ್ಟಿದ್ದೇ ಕಷ್ಟದಲ್ಲಿ; ಇನ್ನು ಸ್ವಲ್ಪದಿನ ಕಷ್ಟಪಟ್ಟು ಬದುಕಿದರಾಯಿತು. ಹೀಗೆ ಹಲವಾರು ಕಷ್ಟಗಳನ್ನು ನಾವೇ ದೂರಿಕೊಂಡು, ಆ ಕಷ್ಟಗಳನ್ನು ಇನ್ನಷ್ಟು ಕಷ್ಟಮಾಡಿಕೊಂಡು ನಮ್ಮದೇ ಲೋಕದಲ್ಲಿ ಕಷ್ಟದ ಪರ್ವತವನ್ನು ನಿರ್ಮಿಸಿಕೊಂಡು, ಅದನ್ನು ಏರಲು ಆಗದೇ; ಈಚೇಗೆ ಇಳಿಯಲು ಆಗದೇ; ಮಧ್ಯದಲ್ಲಿ ನಿಂತುಕೊಂಡು ಒದ್ದಾಡುತ್ತಿರುತ್ತೇವೆ.

ಇಷ್ಟರವರೆಗೆ, ನಾನು ಹೇಳಿದ್ದು ನಾವು ನಮ್ಮದೇ ಆದ ಲೋಕದಲ್ಲಿ ಯೋಚಿಸುವಂತಹ ಕಷ್ಟವೆಂಬ ಕಲ್ಪನೆಯ ಬಗ್ಗೆ. ಆದರೆ ಒಮ್ಮೆ ನಿಮ್ಮ ಸುತ್ತಮುತ್ತಲಿನ ಹೊರಲೋಕವನ್ನು ನೋಡಿ, ಒಂದು ಕಡೆ, ಕಷ್ಟ–ನಷ್ಟ ಎಂದು ನೀವು ಏನೆಲ್ಲಾ ಮಾಡಿರುತ್ತೀರೊ ಅದು ಬೇರೆಯವರ ಜೀವನದಲ್ಲಿ ತುಂಬಾ ಇಷ್ಟವಾಗಿ ಬಿಟ್ಟಿರುತ್ತೇ. ಇನ್ನೊಂದು ಕಡೆ, ನಿಮಗಿಂತ ಕಷ್ಟದ ಬದುಕು ಇನ್ನೊಬ್ಬರಿಗೂ ಇದೆ ಎಂಬುದು ತಿಳಿಯುತ್ತೇ.

'ಒಂದು ಹೊತ್ತಿನ ಊಟದ ಹಸಿವಿಗೆ ದುಡಿಯುವ ಅಜ್ಜಿ; ಕೈ–ಕಾಲು ಮುರಿದುಕೊಂಡು ಹತ್ತಿಪ್ಪತ್ತು ರೂಪಾಯಿಗಳನ್ನು ಬೇಡಿಕೊಂಡು ಕುಳಿತ ಮುದುಕ; ಎಲ್ಲೋ ಹುಟ್ಟಿ ತಂದೆ–ತಾಯಿಯ ಮುಖವನ್ನೇ ನೋಡದೆ ಅನಾಥಾಶ್ರಮದಲ್ಲಿ ಬೆಳೆಯುತ್ತಿರುವ ಮಕ್ಕಳು ಅಂಗವಿಕಲತೆ ಇದ್ದರೂ ನಾವೇನೂ ಕಮ್ಮಿ ಇಲ್ಲ ಎಂಬುಂತೆ ಕಲಿಯುವ ಅಂಗವಿಕಲರು; ಮಕ್ಕಳಿದ್ದು ವೃದ್ಧಾಶ್ರಮದಲ್ಲಿ ಮುಪ್ಪಿನ ನೋವನ್ನು ಅನುಭವಿಸುತ್ತಾ, ಮಕ್ಕಳಿಗೆ ಒಳಿತನ್ನೇ ಬಯಸುವ ತಂದೆ–ತಾಯಿಂದಿರು; ಕಲಿಯುವ, ದುಡಿಯುವ ಆಸೆಯಿದ್ದರೂ ತಮ್ಮದೇ ಪರಿಸರದಲ್ಲಿ ದೂರ ವಾಸಿಸುತ್ತಿರುವ ಮಂಗಳ ಮುಖಿಯರು; ಹರೆವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು ಸಮಾಜದ ಚುಚ್ಚು–ಮಾತುಗಳನ್ನು ಕೇಳಿ ನರಕಯಾತನೇ ಅನುಭವಿಸುತ್ತಿರುವ ವಿಧವೆಯರು; ತಾನು ನಂಬಿದ ಸ್ವಂತ ಅಪ್ಪ, ಅಣ್ಣ, ತಮ್ಮನಿಂದ ಅತ್ಯಾಚಾರಕ್ಕೊಳಗಾಗಿ ಸಮಾಜಕ್ಕೆ ಹೇಳದೆ ಕೊರಗುತ್ತಿರುವ ಹೆಣ್ಣು ಮಕ್ಕಳು', ಇವರುಗಳೆಲ್ಲಾ ಅನುಭವಿಸುತ್ತಿರುವ ಕಷ್ಟ–ಕಾರ್ಪಣ್ಯಗಳ ಮುಂದೆ ಸಣ್ಣಪುಟ್ಟ ಕಷ್ಟಗಳಿಂದ ನಿರ್ಮಿತವಾದ ನಮ್ಮ 'ಕಷ್ಟದ ಪರ್ವತ' ಕ್ಷಣಾರ್ಧದಲ್ಲೇ ಉರುಳಿ ಬೀಳುತ್ತದೆ.

ಕಷ್ಟ ಎಂಬುದು ನಮ್ಮನ್ನು ಇಷ್ಟಪಡಬೇಕು ಹೊರತು ನಾವು ಅದನ್ನು ಇಷ್ಟಪಟ್ಟು ಅದರೊಡನೆ ರಾಜಿಮಾಡಿಕೊಂಡು ನಡೆಯುವುದು ಅಲ್ಲ. ನಿಮ್ಮ ಆ ಕಷ್ಟ ಬಗ್ಗೆ ಯೋಚಿಸುವ ಬದಲು, ಆ ಕಷ್ಟವನ್ನು ಹೇಗೆ ನಿವಾರಿಸುವುದು ಎಂಬುದಾಗಿ ಯೋಚನೆ ಮಾಡಿ ಕಷ್ಟ ನಮ್ಮನ್ನು ಸಾಯಿಸುವ ಮುಂಚೆ ನಾವು ಕಷ್ಟವನ್ನು ಸಾಯಿಸೋಣ.

ಕಷ್ಟದಿಂದ ಬೆಳೆದು, ಎಷ್ಟೋ ಸಾಧನೆಗಳನ್ನು, ಎಷ್ಟೋ ಜನರಿಗೆ ಮಾರ್ಗದರ್ಶಕರಾಗಿರುವ ಹಲವಾರು ಉದಾಹರಣೆಗಳು ನಮ್ಮ ಮುಂದೆ ಇವೆ. ಅವುಗಳ ಕಡೆ ಗಮನ ಹರಿಸೋಣ. ನಾಲ್ಕು ದಿನ ಬದುಕುವ ಮನುಷ್ಯ ಜೀವ ಇದು ಕಷ್ಟ ನಮಗೆ ಬಾರದೇ ಮತ್ತ್ಯಾರಿಗೆ ಬರುತ್ತೆ. ಅದ್ದರಿಂದ ನಮ್ಮ ಬದುಕು ಎಷ್ಟೇ ಕಷ್ಟದ್ದಾಗಿರಲಿ ಅದರೆ ಅದು ಇನ್ನೊಬ್ಬರಿಗೆ ಇಷ್ಟವಾಗುವಂತೆ ಇರಬೇಕು ಅಷ್ಟೇ.

ಹನಿ ಕಥ(ವ)ನಗಳು

ಹಂಬಲಿಸದಿರು

ಓ ಮನಸ್ಸೇ ಹಂಬಲಿಸದಿರು ನಿನಗೆ ದೊರಕದ್ದನ್ನು
ಅನುಭವಿಸು ನಿಮಗೆ ಸಿಕ್ಕಿದನ್ನು
ಹಂಬಲ ಆ ಕ್ಷಣಕ್ಕೆ.... ಅನುಭವ ನಿನ್ನ ಜೀವನಕ್ಕೆ....

*****

ನಗು

ಸದಾ ನಗುವಿನಿಂದ ಬಾಳು
ಯಾಕೆಂದರೆ ಆ ಸಣ್ಣ ನಗು ನಿನ್ನ ವೈರಿಗಳು
ನಿನ್ನ ಪ್ರೀತಿಸುವಂತೆ ಮಾಡುತ್ತೆ, ಅಷ್ಟೇ ಯಾಕೆ
ಇಡೀ ಜೀವನವನ್ನೇ ಬದಲಿಸುತ್ತದೆ....!

*****

ಅಡಗಿದ ಸತ್ಯ

ಆ ಜಾತಿ ಈ ಜಾತಿ ಎಂದು ಜಗಳವಾಡುತ್ತಿದ್ದರು....
ಮುಖವನ್ನರಿಯದ ಮೂಢ ಜನರು...
ಕೇಳಿದೆ ನಾ ಅವರಲ್ಲಿ ನೀವು ಪೂಜಿಸುವ ದೇವರು
ಯಾವ ಜಾತಿಗೆ, ಕುಲಕ್ಕೆ ಸೇರಿದವರೆಂದು? ಯಾರೊಬ್ಬರೂ
ಪ್ರತಿಕ್ರಿಯೆ ಕೊಡಲಿಲ್ಲ. ಇದರಂತೆ ನಮ್ಮ
ಜಾತಿಯಲ್ಲದ ದೇವರನ್ನು ಪೂಜಿಸುವ ನಾವು
ನಮ್ಮ ಜಾತಿಯಲ್ಲದ ಮನುಷ್ಯರನ್ನು
ಪ್ರೀತಿಸುವುದರಲ್ಲಿ ತಪ್ಪೇನಿಲ್ಲ ಎಂದು...!

– **ಮಂಜು,** ತೃತೀಯ ಬಿ.ಕಾಂ 'ಎ'

ಪಕ್ಷಿ

ಕುಹೂ... ಕುಹೂ... ಎಂದು
ಹಾಡುವೆ ನಾ ಒಂದು ಹಾಡನ್ನು
ಜನ ಹೊಗಳಿ ಮೆಚ್ಚುವರು
ನನ್ನೀ ಗೀತೆಯನ್ನು

ಹೇಳ ಬಯಸುವೆ ನಾ ನನ್ನೀ
ಜೀವನದ ಭಾವನೆಗಳನ್ನು
ಆದರೆ, ಕೇಳಲಿರುವಾರಾರು
ನನ್ನೀ ವ್ಯಥೆಯನ್ನು

ಹೇಳ ಬಯಸುವೆ ನಾ ನನ್ನೀ
ಮನದಾಳದ ಮಾತುಗಳನ್ನು
ಆದರೆ, ಕೇಳಲಿಚ್ಛಿಸುವರಾರು
ನನ್ನೀ ಬಯಕೆಗಳನ್ನು

✍ **ಎಲ್ವಿರಾ ಫೆರ್ನಾಂಡಿಸ್**
ದ್ವಿತೀಯ ಬಿ.ಕಾಂ. 'ಎ'

ಹೋಗಬಯಸಲಾರೆ ನಾ ಎಂದಿಗೂ
ಆ ಮಜುರದೊಳು
ಆದರೆ, ನೂಕುವರು ನನ್ನನ್ನು
ಆ ಕತ್ತಲೆಯ ಲೋಕದೊಳು

ಬಿಡು ನೀ ಶತ್ರುತ್ವವನ್ನು
ಪಡೆಯು ನೀ ಮಿತ್ರತ್ವವನ್ನು
ಗೊಳಿಸು ನೀ ನಿನ್ ಜೀವನ ಸಾರ್ಥಕವನ್ನು
ಕೊಟ್ಟು ನನಗೆ ಜೀವನದ ಸ್ವಾತಂತ್ರ್ಯವನು

ನಗೆಹನಿ

✍ **ಮೇಘ,** ಪ್ರಥಮ ಬಿ.ಕಾಂ. 'ಬಿ'

ಅಪ್ಪ : ಲೇ ಗುಂಡ, ದೇವರ ಮೂರ್ತಿಯ ಮೇಲೆ ಕಲ್ಲು ಯಾಕೆ ಇಟ್ಟಿದ್ದೀಯಾ?

ಗುಂಡ : ದೇವರ ಮೇಲೆ ಭಾರ ಹಾಕಿ ಪರೀಕ್ಷೆಗೆ ಹೋಗು ಅಂತ ಅಮ್ಮ ಹೇಳಿದ್ರು, ಅದಕ್ಕೆ ಅಪ್ಪ.

****

ಅಮೆರಿಕನ್ : ಓ ದೇವರೇ, ನನಗೆ ಒಂದು ರೂಮ್ ತುಂಬಾ ಬಂಗಾರ ಕೊಡು.

ಜಪಾನಿ : ಓ ದೇವರೇ, ನನಗೆ ಒಂದು ರೂಮ್ ತುಂಬಾ ವಜ್ರ ಕೊಡು.

ಮಂಡೂರಾಯ : ಓ ದೇವರೇ ನನಗೆ ಅವರಿಬ್ಬರ ರೂಮಿನ ಕೀ ಕೊಡು.

ಪ್ರಕೃತಿ

ಎಂಥ ಸೌಂದರ್ಯ
ಎಂಥ ಸೊಭಗು
ಎಂಥ ಸುವಾಸನೆ, ಆಕೃತಿಯನ್ನು
ಮೂಡಿಸುತಿದೆ ನಮ್ಮೀ
ಸುಂದರವಾದ ಪಕೃತಿ....

ಅದರಲ್ಲಿದೆ ವರ್ಣಿಸಲಾಗದಷ್ಟು
ಪ್ರೀತಿ, ವರ್ಣಿಸಲಾಗದಷ್ಟು
ಭಾವನೆ, ಆದರೆ ಇವಲ್ಲವನು
ಮೀರಿ ಅದು ಕೊಡುತ್ತ ನಮಗೆ
ಅಪಾರವಾದ ಕೀರ್ತಿ....

ಮುಳುಹೋಗಿರುವನು ಮಾನವ
ಪ್ರಕೃತಿಯನು ನಾಶಮಾಡುವಲಿ,
ಕಳೆದೋಗಿರುವನು ತನ್ನ ಪ್ರಜ್ಞೆಯನು
ತನ್ನದೆ ಆದ ಕತ್ತಲೆಯ ಲೋಕದಲಿ....

ಮರೆಯಬೇಡ ಮಾನವ ನೀ
ಮಣ್ಣಿನಿಂದ ಬಂದವ ಮಣ್ಣಿಗೇ ಹೋಗುವೆ
ಆಲೋಚಿಸುತಿರುವೆ ಇದೊಂದು ವಿಕೃತಿಯೆಂದು
ಆದರೆ, ನೆನಪಿಸು ಮಾನವ ಈ ಸಂಸಾರ
ನಿನ್ನನ್ನು ತ್ಯಜಿಸಿದಾಗ ಆಗುವುದು ನಿನ
ಪಾಲಿಗೆ ಎರಡನೇ ತಾಯಿ ಆ ಪ್ರಕೃತಿಯೆಂದು.....

✍ **ಎಲ್ವಿರಾ ಫೆರ್ನಾಂಡಿಸ್**
ದ್ವಿತೀಯ ಬಿ.ಕಾಂ. 'ಎ'

ಅಮೇರಿಕನ್ ಪ್ರವಾಸಿ : ಯಾರಾದ್ರು ದೊಡ್ಡ ಮನುಷ್ಯರು ಈ ಊರಿನಲ್ಲಿ ಹುಟ್ಟಿದ್ದಾರಾ?

ಸರ್ದಾರ್ಜಿ : ಇಲ್ಲ ಸ್ವಾಮಿ, ಇಲ್ಲೆಲ್ಲ ಚಿಕ್ಕ ಮಕ್ಕಳೇ ಹುಟ್ಟೋದು.

✍ **ಮೇಘ**
ಪ್ರಥಮ ಬಿ.ಕಾಂ. 'ಬಿ'

ನಗೆಹನಿ

****

ಟೀಚರ್ : ಗುಂಡ, ಅರಬ್ಬೀ ಸಮುದ್ರ ಎಲ್ಲಿದೆ?

ಗುಂಡ : ಗೊತ್ತಿಲ್ಲ.

ಟೀಚರ್ : ಬೆಂಚಿನ ಮೇಲೆ ನಿಲ್ಲು.

ಗುಂಡ : ಬೆಂಚಿನ ಮೇಲೆ ನಿಂತರೆ ಅರಬ್ಬೀ ಸಮುದ್ರ ಕಾಣುತ್ತದೆಯೇ?

हमारी प्यारी धरती

देखो, कितनी प्यारी है, यह धरती
देखो कितनी प्यारी लगती,
बन में हरियाली लहराती है ।
पानी में मछलियाँ खुशी से खेलती हैं ।

चिडियाँ मिलकर गाती हैं
मृग मिलकर नाचते हैं ।
फूल खुशी से हँसती है ।
हर जगह सुगंध फैलाती है ।

मानव क्यों ऐसा करता है ?
हमेशा एक दूसरों से जलता है ।
सिर्फ़ खुद के बारे में सोचता है,
परिसर को भी दूषित करता है ।
सब को मिल-झुलकर रहना है,
धरती की रक्षा करनी है ।

✍ **धीराज आर देवाडिग**
द्वितीय बी.कोम 'अ'

पेड़ लगाओ

धरती की बस यही पुकार
पेड़ लगाओ बारम्बार ।
आओ मिलकर कसम ये खाएँ
अपनी धरती हरित बनाएँ ।
धरती पर हरियाली हो,
जीवन में खुशहाली हो ।
पेड़ धरती की शान है,
जीवन की मुस्कान है ।
पेड़-पौधों को पानी दें,
जीवन की यही निशानीं दें ।
आओ पेड़ लगाएँ हम,
पेड़ लगाकर जग महकाकर ।
जीवन सुखी बनाएँ हम,
आओ पेड़ लगाएँ हम ।

✍ **आन्सिल्ला जेनिषा पल्काओ**
द्वितीय बी.कोम 'अ'

पानी

✍ **एल्वीरा**
द्वितीय बी.कोम 'अ'

जीवन का रंग
पानी के संग

जब पानी होता हैं
तब मनुष्य उसे उतना
महत्व नहीं देता हैं
इनसान उसे तभी
महत्व देता हैं, जब
उसे उसकी जरुरत पडती हैं

सीखो मनुष्य हँसी में है
जीवन का अनमोल मूल्य
जीवन का रंग
पानी के संग ।

जब जीवन मे हमारे
परवा करनेवाले लोग
हमे सीख देते हैं
तब हमें उसकी
जरुरत नहीं होती हैं ।

है मनुष्य सीखो
पानी से, उस सीख
सीखानेवालें इनसान की
जरुरत तभी पड़ती है
जब उसे लोगों का
मूल्य समझ आये,

पानी का ना रंग
होता है, ना आकार
ना रुपी, फिर भी
उसका जरुरत सबको हैं ।

है इनसान छोड़ो
सब चींता और
महनत करो अपनी
जिंदगी को रंग आकार
और रुची में बदलने का ।

हे मनुष्य अभी भी
तुम ना समझे.....
हर पानी की जगह पर
इनसान को रखकर देखो
क्योंकि
जीवन का रंग
इनसानों के संग....

पिता

पिता एक उम्मीद है, एक आस है
परिवार की हिम्मत और विश्वास है,
बाहर से सख्त अंदर से नर्म है
उसके दिल में दफन कई मर्म हैं ।

पिता संघर्ष की आँधियों में हौसलों की दीवार है
परेशानियों से लड़ने को दो धारी तलवार है,
बचपन में खुश करने वाला खिलौना है
नींद लगे तो पेट पर सुलाने वाला बिछौना है।

पिता जिम्मेदारियों से लदी गाड़ी का सारथी है
सबको बराबर का हक दिलाता यही एक महारथी है,
सपनों को पूरा करने में लगने वाली जान है
इसी से तो माँ और बच्चों की पहचान है।

पिता ज़मीर है पिता जागीर है
जिसके पास ये है वह सबसे अमीर है,
कहने को सब ऊपरवाला देता है
पर खुदा का ही एक रुप पिता का शरीर है।

✍ **लिसा पिन्टो**
द्वितीय बी.कोम 'अ'

प्रकृती का सौंदर्य

✍ **ब्रयान**
द्वितीय बी.कोम 'आ'

प्रकृती भगवान की देन है। उसकी रक्षा करना जरूरी है। हमारे जीवन में प्राकृति बहुत मूल्यावान है। आज का मानव उसका उपयोग अन्धा कर रहा है, धरती को प्रकृति से सौंदर्य मिलता है। उसके सौंदर्य से हम उसको बहुत प्यार करते हैं।

प्रकृती के सौंदर्य अनमोल तथा अनुतबीय है। प्रकृती सौंदर्य देखना है, तो हमें सीधा गाँव जाना चाहिए। गाँव से ही प्रकृती का असली सौंदर्य देखपाते है, हम प्रकृती को अच्छी तरह नही समझ पाते हैं। हमारे स्वार्थ भावना के कारण प्रकृती के सौंदर्य में बदलाव आया है। मानव अपने मतलब के लिए प्रकृती का नाश कर रहा है इसके अलावा गाँव सुंदरता के रुप में बदल गया है। भूमि पर कोई प्राणी जिवित भी नहीं रहेगा। इसलिए आज हम शपथ लेगे की प्रकृती सौंदर्य को बचाने के लिए सदा तत्पर रहेंगे।

व्यायाम का महत्व

✍ **तेजस्विनी**
द्वितीय बी.कोम 'आ'

व्यायाम हमें फूर्तीला और स्वास्थ रखता है। हमें याद रखना चाहिए

कि स्वास्स्थ हमारा सबसे बडा धन है। यदि शरीर और मन में ताजगी न हो तो किसी भी काम में मन नहीं लगता है। व्यायाम से शरीर और मन दोनों सही दशा में रहता है। बिना व्यायाम के शरीर सुस्त पड़ जाता है। हम लोग अपने जीवन का पूरा मजा नहीं ले पाते हैं। इसलिए सभी लोगो को व्यायाम करना चाहिए। व्यायाम नियमित रुप से करना चाहिए । व्यायाम करने के लिए खुली जगह में जाना चाहिए । बूढ़े लोग टहलकर व्यायाम कर सकते हैं। बच्चों का व्यायाम खेलने भर से हो जाता हैं। दौड़ लगाना, वजन उठाना, तैरना, शरीर के विभिन्न अंगों का संचालव करना, साइकिल चलाना आदि व्यायाम के ही अलग–अलग रुप हैं। व्यायाम करना सभी उम्र के लोगों के लिए आवश्यक हैं।

बचपन

छनीकर खिलौनो को बाँट दिये गम ।
बचपन से दूर बहुत दूर हुए हम ॥

अच्छी तरह से अभी पढ़ना न आया
कपड़ों को अपने बदलना न आया
लाद दिए बस्ते हैं भारी–भरकम ।
बचपन से दूर बहुत दूर हुए हम ॥

अंग्रेजी श्ब्दों का पढ़ना–पढ़ाना
घर आके दिया हुआ काम निबटाना
होमवर्क करने में फूल जाये दम ।
बचपन से दूर बहुत दूर हुए हम ॥

देकर के थपकी न माँ मुझे सुलाती
दादी है अब नहीं कहानियाँ सुनाती
बिलख रही कैद बनी, जीवन सरगम ।
बचपन से दूर बहुत दूर हुए हम ॥

इतने कठिन विषय कि छूटे पसीना
रात–दिन किताबों को घोट–घोट पीना
उस पर भी नंबर आते हैं बहुत कम ।
बचपन से दूर बहुत दूर हुए हम ॥

✍ **लिसा पिन्टो**
द्वितीय बी.कोम 'अ'

भारतीय सेना

✍ **शनान पर्ल कुटिन्हा**
द्वितीय बी. कोम 'अ'

हर देश की सुरक्षा में सेना का बहुत ही महत्वपूर्ण योगदान होता है। भारतीय सेना व्यवस्था बहुत ही अद्भत है और विश्व की सबसे श्रेष्ट सेना है। इनके पास संस्थनों की कमी है। लेकिन इनका हौसला और बहादूरी कबिल ए तारीफ है। भारतीय सेना के सैनिक देशभक्ति की सच्ची मिसाल है। जो अपने प्राण त्याग कर भी देश की रक्षा करते है।

भारतीय सेना तीन प्रकार की है, जल सेना, थल सेना और वायु सेना। भारतीय सेना आज के समय में विश्व की तीसरे नम्बर पर सबसे बड़ी सेना है। भारतीय सेना के सैनिको का जीवन बहुत ही पीड़ादायक होता है क्योंकि देश के लिए उन्हे अपने परिवार से दूर रहना पड़ता है। उनके घरवाले भी हर समय उनकी सलामती की हुआ करते है और मातृभूमि के प्रति उनका कर्तव्य निभाने के लिए शरहद पर भेजते हैं।

भारतीय सेना सिर्फ सीमा पर रहकर ही देश की रक्षा नहीं करते बल्कि जब देश के भीतर कोई मुश्किल आती है तो वहाँ पर भी सहायता के लिए तत्पर रहते हैं। जब–जब देश में बाढ़ आती है तब वायु सेना लोगों की सहायता करती है और उन तक भोजन पहुँचाती है। जब–जब दुश्मनों ने देश पर हमला किया है भारतीय सेना ने अपने साहस और बुद्धिमता का परिचय दिया है।

भारतीय सेना देश के लिए अपना सब कुछ त्याग करती है इसलिए हमारे देश की व्यवस्था ऐसी होनी चाहिए कि वह सैनिकों को सभी सुविधाएँ दे। सिर्फ हमारे देश की सेना हैं जिनके कारण हम अपनी जिंदगी बिना किसी चिंता के गुजार रहे है। हमें भारतीय सेना को सम्मान देना चाहिए । **"भारतीय सेना हमारे देश का अभिमान है"**

विद्यार्थी जीवन

✍ **दिक्षिता**
द्वितीय बी. कोम 'आ'

विद्यार्थी जीवन किसी भी व्यक्ति के जीवन का महत्वपूर्ण काल होता है। इसी काल पर व्यक्ति का संपूर्ण भविष्य निर्भर करता है। इस काल का सदूपयोग करनेवाले विद्यार्थी अपने शेष जीवन को आरामदायक और सुखमय जीवन बना सकते है। इस काल को व्यर्थ के कार्यो में नष्ट करनेवाले विद्यार्थी अपने भविष्य को अंधकारमय बना देते है। विद्यार्थी जीवन में ही व्यक्ति के चरित्र की नीव पड जाती है। अतः इस जीवन में बहुत सोच–समझकर कदम उठाने का जरुरत होती है। विद्यार्थी को इस अवधि में अपनी शिक्षा, स्वास्थ्य, खेल–कूद और व्यायाम का समुचित ध्यान रखना चाहिए। उन्हें परिश्रमी और लगनशील बनना चाहिए । इस काल मे स्वाध्याय को सफलता का मूलमंत्र मानना चाहिए। उन्हें हर तरह का बूरी संगति से बचना चाहिए । उपर्युक्त बातों को ध्यान में रखकर विद्यार्थी जीवन को सफल बनाया जा सकता है।

भारत इंडिया हो गया

अंग्रेजी चले गये पर
अंग्रेजी का भूत नहीं गया
न जाने भारतवासियों को
ये आज क्या हो गया?

माता–पिता आज जानें कहाँ, खो गये
चाचा चाची, बुआ–फूफा
सब बैन हो गये,
आजकल तो सब
अँकल आंटी के फैन हो गये ।
भारत में मित्र नहीं
फ्रेंड हो गये ।
पति बेचारे पतिदेव से
हसबैंड हो गये ।

माताजी को प्रणाम हैलो मदर हो गया
छोटा बड़ा भाई भी हेलो ब्रदर हो गया
सच कहने हो चारो अब तो अखबार
भी मीडिया हो गया ।
आजकल अपना भारत भी इंडिया हो गया

✍ **नीकिता**, द्वितीय बी. कोम 'अ'

मादक द्रव्य और युवा पीढ़ी

✍ दिक्षा
द्वितीय बी. कोम 'अ'

आज हमारा समाज बहुत व्यस्त हो गया है। माँ और पिता के पास बच्चों को देने के लिए पर्याप्त समय नहीं है। इस वजह से बच्चों को सही मार्गदर्शन नहीं मिल पता। वे कई बार गलत राह पकड लेते हैं। मादक पदार्थो का सेवन भी उनमें से एक है। पिछले कई दशकों में मादक पदार्थो का प्रयोग युवाओं के बीच लगातार बढ़ा है। ज्यादातर युवक मादक पदार्यो का सेवन शौक तथा फैशन के लिए शुरु करते है, पर धीरे–धीरे उन्हें कब इसकी आदत लग जाती है पता भी नहीं चलता। कई युवा तनाव के समय में इनका सेवन करना शुरु करते है तो कुछ दोस्तों की देखा–देखी शुरु करते हैं। कुछ नशे के शौक के कारण करते है तो कुछ बस फैशन के लिए करते है। महँगा नशा अपनी संपन्नता दिखाने का जरिया बन गया है। विद्यालयों और कॉलेजों के कई विद्यार्थी इन मादक पदार्यो के नशे की गिरफ्त में हैं। वो इसके इतने आदी हो चुके है कि अब इसे छोड नहीं सकते। विद्यार्थीयों के पास कई बार इन्हें खरीदने के लिए पैसा नहीं होता । ऐसे में वे अपराध की तरफ मुडतें हैं।

विद्यालयों और कॉलेजों द्वारा समय–समय पर विद्यार्थीयों को मादक द्रव्यों के सेवन से होनेवाले खतरों को बताना चाहिए । सबसे बडी जिम्मेदारी बनती है माता–पिता की। यह बहुत आवश्यक है कि माता–पिता बच्चों की समय दे और सही मर्गदर्शन दे।

माता

माँ है हमारा जन्मदात
सिखाया है हमको करना बात
सदा रहो हमारे साथ
तुमसे हुआ है जीवन का शुरुआत ।

तब तुम हो साथ, नहीं है डरने का बात
जब मुश्किल हो, तब पकडो हमारे हाथ
तुम पास रहो, पूरा दिन रात ।

आप मनको देते है सुख शांत
तुम्हें पता नहीं करना स्वार्थ
समझते है हर किसी का मन की बात
तुम ही चाहिए पूरा जन्म साथ ।

✍ पी अनुश्री
द्वितीय बी. कोम 'अ'

स्वास्थ्य ही धन है

स्वास्थ्य को सबसे बड़ा धन माना गया हैं। बीमार धनी होने की अपेक्षा स्वास्थ्य गरीब अधिक अच्छा है। बीमार व्यक्ति धन एंव सुख–सुविधाओं का उपयोग नहीं कर सकता। उसे अपना जीवन भार लगने लगता है। स्वास्थ्य व्यक्ति बहुत मस्ती में जीता है। उसके मन–मस्तिष्क में उमंग और प्रसन्नता छायी रहती है। वह जिस कार्य को करता है, भरे उत्साह से करता है । इसलिए कहा गया है कि स्वास्थ्य ही धन है। अच्छे स्वास्थ्य के लिए प्रयत्न करना मनुष्य का दायित्व है। इसके लिए व्यायाम, योगासन तथा स्वास्थ्य दिनचर्या का अभ्यास जरुरी होता है। व्यक्ति को अपने खान–पान का भी उचित ध्यान रखना चाहिए। मस्तिष्क में सकारात्मक सोच रखनी चाहिए । स्वास्थ्य रहकर ईश्वर–प्रदत्त उपहारों का लाभ उठाना चाहिए । स्वास्थ्य रुपी धन की हर कीमत पर रक्षा की जानी चाहिए। अच्छा स्वास्थ्य ही जीवन का आधार है।

✍ **आन्सिल्ला जेनिषा पल्काओ**
द्वितीय बी. कोम 'अ'

किसान

पेट जो भरता लोगों का
मिट्टी से फसल उगाता है
उस किसान की खातिर तो
ये धरा ही उसकी माता है।

आलस जरा न तन में रहे
कोई डर न मन में रहे
जितनी भी मुसीबत पड़ती है
बिन बोले वो चुपचाप सहे,

बस परिवार की खातिर ही
वो रहना मुस्कुराना है
उस किसान की खातिर तो
ये धर ही उसकी माता है।

न धूप सताए दिन की उसे
न काली रात डराती है
डटा रहे हर मौसम में

जब तक न फसल पक जाती है
सूरज के उठने से पहले
वो पहूँच खेंत में जाता है
उस किसान की खातिर तो
ये धरा ही उसकी माता है ।

पेट जो भरता लोगों का
मिट्टी से फसल उगाता है,
उस किसान की खातिर तो
ये धरा ही उसकी माता है ।

✍ **सुहा,** द्वितीय बी. कोम 'अ'

✍ **जेविटा लसरादो**
द्वितीय बी. कोम
'आ'

एक छोटी सी बच्ची अपने पापा के साथ जा रही थी । एक पुल पर पानी तेजी से बह रहा था । पापा ने कहा बेटा डरो मत, मेरा हाथ पकड़ लो । बच्ची ने कहा – नहीं पापा आप मेरा हाथ पकड़ लो । पापा ने मुस्कुरा कर कहा – दोनों में क्या फर्क है? बच्ची – अगर मौं आपका हाथ पकडू और अचानक कुछ हो जाए तो शायद मैं हाथ छोड़ दूँगी । मगर आप मेरा हाथ पकड़ेगे तो कुछ भी हो जाए आप मेरा हाथ नहीं छोड़ेंगे।

आज भी बच्चे हाथ छोड़ देते है मगर माँ बाप नहीं छोड़ते।

शिक्षक

जीवन में जो राह दिखाये,
सही तरह से चलना सिखाये ।
माता पिता के बाद
जिन्दगी में आता,
जीवन में सदा आदर पाता ।
सबको मान प्रतिष्ठा जिससे
सीखी कर्तव्य निष्ठा जिससे ।
कभी रहा ना दूर में जिससे
वह मेरा पथ प्रदर्शक है जो ।
मेरे मन को है भाथा,
वह मेरा शिक्षक कहलाता ।
कभी है शांत कभी है धीर
स्वभाव में सदा गंभीर
मन मे दबी रहे ये इच्छा
काश में इनके जैसा बन पाता
जो मेरा शिक्षक कहलाता ।

✍ **क्लिटंन**
द्वितीय बी. कोम
'आ'

देश प्रेम

✍ **एड्रीन ए. डायस**
प्रथम बी. कोम 'आ'

प्रेम के अनेक रूप है । उन में सबसे श्रेष्ट देश प्रेम है । वो भूमि हमारा जन्म होता है। जिसकी गोद में पलकर हम बड़े होते है। जिसकी पानी, हवा, अन्न, जल का उपभोग कर हम शक्ति शाली बनाते हैं । जब भगवान राम का वनवास हुआ तब उनके मुख पर विषाद था । चिंता की लकीरों तनिक भी नही थी । किन्तू अपनी जन्मभूमि से दूर जाने के पस्चात वे विचलित हो गये । वहाँ जननि जन्म भूमि स्वर्गदीप गरीयसी । अर्थाथ जननी और जन्मभूमि की महीमा स्वर्ग से भी महान हैं। इसका एसास तब होता है जब हम इससे दूर हो या जन्म भूमिपर कोई संकट आ जाये । प्रेम यदि हमें अधिकार देता है । उसके प्रति कर्तव्य पालन भी जुडा होता है ।

इस प्रेम से प्रेरित होकर देश प्रेमि अपना सर्वस्व न्यौछावर करने को तत्पर रहते हैं। हमारे देश का इतिहास ऐसे देशभत्को की वीर गाथाओं से भरा हुआ है । महाराज रंजीत सिंह, महाराण प्रताप, शिवाजी गूरु गोवींद सिंह जैसे देश प्रेमियों पर गर्व है । अंग्रेजों की बेडियों में जकडा भारत और उसको तोडकर उन बेडिया से मुक्त कराने में राजा – राम मोहन राय, लोकमान्य राजगुरू चंद्रशेखर आजाद शुभाश चंद्र भोस विपिन चंद्रपाल, बाल गंगाधर तिलक, लजपत राय, सरदार पटेल जैसे विरोने लाठीयों के मार खाये, जेलो में खडे, फाँसी पर चडकर मरवाया गया देश प्रेमि देश को किसी भी तरीके से बर्बाद नही होने देते हैं। कुछ लोग एसे कार्य में लिप्त रहने लगे जिस्मे देश के स्वभिमान को जिस में पहुँचति है । ऐसे लोग मनुष्य नही जानवर होते है।

"हम लोगो को अपने देश पर प्यार, स्वाभिमान होना चाहिए, तभी हम लोग एक होकर किसी भी परिस्थितियों को निपट सकते हैं।"

जय हिंद

ट्रेन की सवारी

✍ **ओलिविया लविटा लोबा**
प्रथम बी. कोम 'अ'

क्या आप लोगो ने कभी ट्रेन में सवारी की है? अगर आप करनेवाले हो तो अपनी टिकट और सीट संभाल के रखो क्यों कि ट्रेन में सवारी और परीक्षा में नकल करना दोनों बहुत मुश्किल काम होते हैं ।

अरूणा मेरी सहेली थी । वह अपने भाई के शादी में शामिल होने के लिए ट्रेन मे सफर करने वाली थी । वह अपना सामान और टिकट लेकर अपनी सीट पर बैठने के लिये चली गयी। अपनी सीट तक पहुँची; उसने अपनी सीट पर एक लंबे, हट्ठे-खट्ठे हाथ में चाकू पकडे हुए आदमी को देखा । उसको देखकर ही बेचारी अरूणा का पसीना छूट गया। उसके हाथ में चाकू देखकर अकणा ने सोचा कि, अगर उसने सीट के बारें में पूछा तो उसकी तो काम तमाम हो जाएगा। फिर भी अपनी जान हथैली में लेकर हिम्मत करके उसने पूछी: "भाई साहब, आप कहाँ जा रहें हो? और आप मेरे सीट पर बंटे हो," उस आदमी ने डरावने आवज मे कहा: मैं जहाँ ट्रेन रूकेगा कहाँ तक जाऊँगा । तुमसे कोई मत लब बेचारी अरूणा छुप – छाप नीचे ही बैठ गयी ।

शाम ढ़ल गयी और ट्रेन के टी सी टिकेट देखने के लिए आ पडे । अरूणा ने सोचा अब तो मुझे सीट वापस मिलेगी । वह खुशी से अपनी टिकेट निकाल के मास्टर जी को दिखाया । लेकिन वह भी छुप छाप आया चाकू देखी और बिना कुछ बोले चले गए । बेचारी बेईमानदारों के बीच फसी हुई अकणा अपने गाँव पहुँची । ट्रेन की इस सवारी से अरूणा खुश और दुःखी थी । खुश इसलिए कयों कि यह सफर मजेदार था। और दुःख थी इसलिए क्यों की यह सफर मजेदार था, और दुःख थी इसलिए क्यों कि एसे बेइर्मान लोगों से वह मिली थी। इसलिए अगर आप लोग ट्रेन में सफर करने वाले हो तो पहले ही आके अपनी सीट पर बैठ जाना वरना सीट भी जायेगी और पानी में वह जाएगा ।

✍ **कौशिता**
प्रथम बी. बी. ए

जीवन में कभी–कभी कुछ विषय के बारे में हम गलती से निर्णय लेते तो हमारा लक्ष्य पूरी नहीं होती है । "हार" विजय के पहली सीडी है। बहुत बार हार कर एक बार जीतने में मिलने की खुशी हिमालय के ऊँचायी से भी आधिक होती है । जब हारेंगे तो किसी के ताने मारने के बदले उसे धनात्मक रूप में स्वीकार करना चाहिए । सतत हारनें से हम नहीं जीतेगें ऐसे हमें नहीं सोचना चाहिए। डार को पार कर हमें आगे चलतें–चलते हार के सामने जीत कर दिखाना चाहिए।

ऐसे कहावत मन में सदा रहना चाहिए । हार से मिलने की शिक्षा को हम ज़न में रक जीत के रास्ते में चलना है ।

गुलाब

✍ **एस. सीतालक्ष्मी**
प्रथम बी. कोम 'अ'

गुलाब एक झाड़ीदार कंटीला और खुशबुदार फूल है जो कि सबको अपनी तरफ आकर्षित कर लेता है । इसे फूलों का राजा भी कहा जाता है। इसके आकार, कद और रंग के आधार पर इसकी 100 से भी ज्यादा प्रजातियाँ पाई जाती है जिसमें से अधिकतर एशिया की ही है। कहीं – कहीं पर यह काले और हरे रंग में भी पाया जाता है । मौसम के अनुसार भी इसको दो प्रजाति में विभाजित किया गया है।

गुलाब युरोप के बहुत से देशो का राष्ट्रीय फूल भी है । गुलाब का फूल भी है । गुलाब का फूल बहुत ही सुंदर और कोमल होता है । शिवपुराण में इसे देव पुष्प कहकर पुकारा गया है । पूजा पाठ आदि धार्मिक कार्यों में गुलाभ के फूल का विशेष महत्व है । इसका प्रयोग साजाागट करने के लिए भी किया जाता है । गुलाब की जल से आँखों की थकावट दूर होती है । गुलाब की पंखुडियों से गुलाकंद बनाया जाता है । दक्षिण भारत में गुलाब के फूलों का विशेष रूप से प्रयोग किया जाता है । इसके इत्त को बनाने के लिए बडें–बडें उद्योग लगाकर उनसे धन कमाया जाता है । गुलाब का फूल नेहरू जी को बहुत ही प्रिया था । हर साल 12 फरवरी को गुलाब दिवास मानाया जाता है ।

दुष्टता का फल

✍ **रोसा पि. डि**
प्रथम बी. कोम 'अ'

